


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46


ಜುಲೈ 27 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 101 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




ಮೈಸೂರಲ್ಲಿ ಭಾರಿ ಪ್ರಮಾಣದ ಡ್ರಗ್ಸ್!

- ಸ್ಥಳೀಯ ಪೊಲೀಸರ ಸಹಕಾರದಿಂದ ಮಹಾರಾಷ್ಟ್ರ ಪೊಲೀಸರ ಕಾರ್ಯಾಚರಣೆ
- 50 ಕೆಜಿಗೂ ಅಧಿಕ ಎಂಡಿಎಂಎ ಡ್ರಗ್ಸ್ ಜಪ್ತಿ
- ಮಾದಕ ವಸ್ತು ಸಂಗ್ರಹ, ಸಾಗಾಟಕ್ಕೆ ಸುರಕ್ಷಿತ ತಾಣವಾಯ್ತಾ ಮೈಸೂರು!

ಮೈಸೂರು, ಜು.26–ಶಾಂತಿ ಹಾಗೂ ಸಂಸ್ಕೃತಿಯ ನೆಲೆಬೀಡಾಗಿರುವ ಸಾಂಸ್ಕೃತಿಕ ನಗರಿ ಮೈಸೂರು ಡ್ರಗ್ಸ್ ಮಾಫಿಯಾಗಳಿಗೆ ಸುರಕ್ಷಿತ ತಾಣವಾಗಿದೆಯಾ? ಮೈಸೂರಿನಲ್ಲಿ ಭಾರಿ ಪ್ರಮಾಣದ ಡ್ರಗ್ಸ್ ಅನ್ನು ಸಂಗ್ರಹ ಮಾಡಿ, ಇಲ್ಲಿಂದ ಬೇರೆ ಕಡೆಗೆ ಸದ್ದಿಲ್ಲದೆ ಸಾಗಿಸಲಾಗುತ್ತಿದೆಯಾ? ಎಂಬ ಸಂಶಯ ಮಹಾರಾಷ್ಟ್ರ ಮಾದಕ ವಸ್ತು ನಿಗ್ರಹ ದಳ ಪೊಲೀಸರು ಮೈಸೂರು ನಗರ ಪೊಲೀಸರ ಸಹಕಾರದಿಂದ ನಡೆಸಿರುವ ಕಾರ್ಯಾಚರಣೆಯಿಂದ ವ್ಯಕ್ತವಾಗಿದೆ.

ಮೈಸೂರಿನ ನರಸಿಂಹರಾಜ ಠಾಣೆ ವ್ಯಾಪ್ತಿಗೆ ಒಳಪಟ್ಟ, ರಿಂಗ್ ರಸ್ತೆಗೆ ಹೊಂದಿಕೊಂಡಂತಿರುವ ನಿಗೂಢ ಸ್ಥಳವೊಂದರಲ್ಲಿ ಕೋಟ್ಯಾಂತರ ರೂ. ಮೌಲ್ಯದ ಕೆಜಿಗಟ್ಟಲೆ ಎಂಡಿಎಂಎ ಡ್ರಗ್ಸ್ ಪತ್ತೆಯಾಗಿದೆ ಎಂದು ಖಚಿತ ಮೂಲಗಳು ತಿಳಿಸಿವೆ.

ಮಹಾರಾಷ್ಟ್ರ ಮಾದಕ ವಸ್ತು ನಿಗ್ರಹ ದಳದ ಪೊಲೀಸರಿಗೆ ಸಿಕ್ಕಿಬಿದ್ದ ಪ್ರಮುಖ ಪೆಡ್ಲರ್‌ವೊಬ್ಬ ನೀಡಿದ ಮಾಹಿತಿಯನ್ನಾಧರಿಸಿ ಮಹಾರಾಷ್ಟ್ರ ಹಿರಿಯ ಪೊಲೀಸ್ ಅಧಿಕಾರಿಗಳು ಕರ್ನಾಟಕದ ಹಿರಿಯ ಅಧಿಕಾರಿಗಳನ್ನು ಸಂಪರ್ಕಿಸಿ ಸಹಕಾರ ಕೋರಲಾಗಿ, ನಂತರ ಮೈಸೂರು ನಗರ ಪೊಲೀಸರ ಸಹಕಾರದೊಂದಿಗೆ ಶನಿವಾರ ಸಂಜೆ 7 ಗಂಟೆ ಸುಮಾರಿನಲ್ಲಿ ಮಹಾರಾಷ್ಟ್ರ ಮತ್ತು ಮೈಸೂರು ನಗರ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ, ಕೆಜಿಗಟ್ಟಲೆ ಎಂಡಿಎಂಎ ಡ್ರಗ್ಸ್ ಅನ್ನು ವಶಪಡಿಸಿಕೊಂಡಿದ್ದಾರೆ ಎನ್ನಲಾಗಿದೆ. ಎಂಡಿಎಂಎ ಡ್ರಗ್ಸ್ ಭಾರಿ ಮೊತ್ತಕ್ಕೆ ಮಾರಾಟವಾಗುತ್ತಿದ್ದು, ಮಾತ್ರೆಗಳು ಅಥವಾ ಪೌಡರ್ ರೂಪದಲ್ಲಿ ಪೆಡ್ಲರ್‌ಗಳು ಅದನ್ನು ಮಾರಾಟ ಮಾಡುತ್ತಾರೆ. ಆದರೆ ಮೈಸೂರಿನಲ್ಲಿ ದೊರೆತಿರುವ ಎಂಡಿಎಂಎ ಡ್ರಗ್ಸ್ ದ್ರವರೂಪದಲ್ಲಿದೆ ಎಂದು ಹೇಳಲಾಗಿದ್ದು, ಅದನ್ನು ಮಾತ್ರೆ ಅಥವಾ ಪೌಡರ್ ರೂಪಕ್ಕೆ ಪರಿವರ್ತಿಸಿದ ನಂತರ ಸಾಗಾಟ ನಡೆಸಲಾಗುತ್ತದೆ ಎಂದು ಹೇಳಲಾಗಿದೆ. ಮೈಸೂರಿನಲ್ಲೇ ದ್ರವರೂಪದ ಎಂಡಿಎಂಎ ಅನ್ನು ಪೌಡರ್ ಅಥವಾ ಮಾತ್ರೆ ರೂಪಕ್ಕೆ ಪರಿವರ್ತಿಸಲಾಗುತ್ತಿತ್ತೇ? ಅಥವಾ ಅದನ್ನು ಬೇರೆಡೆಗೆ ಸಾಗಿಸಿ ನಂತರ ಮುಂದಿನ ಚಟುವಟಿಕೆಗಳನ್ನು ನಡೆಸಲಾಗುತ್ತಿತ್ತೇ ಎಂಬುದರ ಬಗ್ಗೆ ವಿಚಾರಣೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.



ಸಾಂದರ್ಭಿಕ ಚಿತ್ರ

ಭಯೋತ್ಪಾದಕರು ತಮ್ಮ ಸುರಕ್ಷಿತ ತಾಣವಾಗಿ ಯಾವುದಾದರೊಂದು ಸ್ಥಳವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅವರು ಆ ಸ್ಥಳದಲ್ಲಿ ಯಾವುದೇ ರೀತಿಯ ಭಯೋತ್ಪಾದನಾ ಕೃತ್ಯಗಳನ್ನು ಎಸಗದೇ ಸಂಚು ರೂಪಿಸಲು ಅಥವಾ ತಮ್ಮ ಕೃತ್ಯಗಳಿಗೆ ಬೇಕಾಗಿರುವ ವಸ್ತುಗಳನ್ನು ಸಂಗ್ರಹಿಸಲು, ಹಾಗೆಯೇ ಸಂಗ್ರಹಿಸಿದ ವಸ್ತುಗಳನ್ನು ಬೇರೆಡೆಗೆ ಸಾಗಿಸಲು ಮಾತ್ರ ಸುರಕ್ಷಿತ ತಾಣಗಳನ್ನು ಬಳಸಿಕೊಳ್ಳುತ್ತಾರೆ. ಇಂತಹುದ್ದೇ ಕಾರ್ಯತಂತ್ರವನ್ನು ಡ್ರಗ್ಸ್ ಮಾಫಿಯಾದವರೂ ಅನುಸರಿಸುತ್ತಿದ್ದಾರೆ ಎನ್ನಲಾಗಿದ್ದು, ಈ ಮಾಫಿಯಾಗೆ ಮೈಸೂರನ್ನು ಸುರಕ್ಷಿತ ತಾಣವಾಗಿ ಬಳಸಿಕೊಳ್ಳುತ್ತಿದೆಯೇ ಎಂಬ ಅನುಮಾನ ದಟ್ಟವಾಗಿದೆ.

ಇಂದು ಸಂಜೆ ಮೈಸೂರು ನಗರ ಪೊಲೀಸರ ಸಹಕಾರದೊಂದಿಗೆ ಮಹಾರಾಷ್ಟ್ರ ಮಾದಕ ವಸ್ತು ನಿಗ್ರಹ ದಳದ ಅಧಿಕಾರಿಗಳು ▶ 6ನೇ ಪುಟಕ್ಕೆ

ಏಷ್ಯಾ ಕಪ್ ಕ್ರಿಕೆಟ್ 2025 ವೇಳಾಪಟ್ಟಿ ಪ್ರಕಟ

ಸೆ.14ಕ್ಕೆ ಭಾರತ–ಪಾಕ್ ಸೆಣಸಾಟ

ನವದೆಹಲಿ: ಈ ವರ್ಷದ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಏಷ್ಯಾಕಪ್ ಕ್ರಿಕೆಟ್‌ನಲ್ಲಿ ಭಾರತ ಮತ್ತು ಪಾಕಿಸ್ತಾನ ಸೆ.14ರಂದು ಮುಖಾಮುಖಿಯಾಗಲಿವೆ.



ಈ ಎರಡೂ ತಂಡಗಳು ಸೂಪರ್ ಫೋರ್ ಹಂತದಲ್ಲಿ ಮತ್ತೊಮ್ಮೆ ಮುಖಾಮುಖಿಯಾಗಲಿದ್ದು ಈ ಪಂದ್ಯ ಸೆ.21ರಂದು ನಡೆಯಲಿದೆ. ಏಷ್ಯಾಕಪ್ ಸೆ.9ರಿಂದ 28ರವರೆಗೆ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆಯಲಿದೆ ಎಂದು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷ ಮೊಹ್ಸಿನ್ ನಖ್ವಿ ಘೋಷಿಸಿದರು.

ಟೂರ್ನಮೆಂಟ್‌ನಲ್ಲಿ ಭಾರತ ಮತ್ತು ಪಾಕಿಸ್ತಾನ ಒಂದೇ ಗುಂಪಿನಲ್ಲಿ ಸ್ಥಾನ ಪಡೆದಿವೆ. ಈ ಪಂದ್ಯವು ಸೆ.14ರಂದು ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿದೆ. ವೇಳಾಪಟ್ಟಿಯ ಪ್ರಕಾರ, ಭಾರತ ತಂಡವು ಸೆ.10ರಂದು ಯುಎಇ ವಿರುದ್ಧ ತನ್ನ ಅಭಿಯಾನವನ್ನು ಪ್ರಾರಂಭಿಸುತ್ತದೆ. ಪಂದ್ಯಾವಳಿಯಲ್ಲಿರುವ ಎಂಟು ತಂಡಗಳನ್ನು 2 ಗುಂಪುಗಳಾಗಿ ವಿಂಗಡಿಸಲಾಗಿದೆ. ಗುಂಪು ಎನಲ್ಲಿ ಭಾರತ, ಪಾಕಿಸ್ತಾನ, ಯುಎಇ ಮತ್ತು ಓಮನ್, ಇನ್ನು ಗುಂಪು ಬಿನಲ್ಲಿ ಶ್ರೀಲಂಕಾ, ಬಾಂಗ್ಲಾದೇಶ, ಅಫ್ಘಾನಿಸ್ತಾನ, ಹಾಂಗ್‌ಕಾಂಗ್ ತಂಡಗಳಿದ್ದು ಎಲ್ಲಾ ಪಂದ್ಯಗಳನ್ನು ದುಬೈ ಮತ್ತು ಅಬುಧಾಬಿಯಲ್ಲಿ ನಡೆಯಲಿವೆ.

ವೇಳಾಪಟ್ಟಿ

- ಸೆ.9: ಅಫ್ಘಾನಿಸ್ತಾನ vs ಹಾಂಗ್‌ಕಾಂಗ್
- ಸೆ.10: ಭಾರತ vs ಯುಎಇ
- ಸೆ.11: ಬಾಂಗ್ಲಾದೇಶ vs ಹಾಂಗ್‌ಕಾಂಗ್
- ಸೆ.12: ಪಾಕಿಸ್ತಾನ vs ಓಮನ್
- ಸೆ.13: ಬಾಂಗ್ಲಾದೇಶ vs ಶ್ರೀಲಂಕಾ
- ಸೆ.14: ಭಾರತ vs ಪಾಕಿಸ್ತಾನ
- ಸೆ.15: ಶ್ರೀಲಂಕಾ vs ಹಾಂಗ್‌ಕಾಂಗ್
- ಸೆ.15: ಯುಎಇ vs ಓಮನ್
- ಸೆ.16: ಬಾಂಗ್ಲಾದೇಶ vs ಅಫ್ಘಾನಿಸ್ತಾನ
- ಸೆ.17: ಪಾಕಿಸ್ತಾನ vs ಯುಎಇ
- ಸೆ.18: ಶ್ರೀಲಂಕಾ vs ಅಫ್ಘಾನಿಸ್ತಾನ
- ಸೆ.19: ಭಾರತ vs ಓಮನ್

ಸೂಪರ್ ಫೋರ್

- ಸೆ.20: ಬಿ 1 vs ಬಿ 2
- ಸೆ.21: ಎ 1 vs ಎ 2 (ಭಾರತ vs ಪಾಕಿಸ್ತಾನ)
- ಸೆ.23: ಎ 2 vs ಬಿ 1
- ಸೆ.24: ಎ 1 vs ಬಿ 2
- ಸೆ.25: ಎ 2 vs ಬಿ 2
- ಸೆ.26: ಎ 1 vs ಬಿ 1
- ಸೆ.28: ಫೈನಲ್ ಪಂದ್ಯ

ಧರ್ಮಸ್ಥಳದಲ್ಲಿ ನಿಗೂಢ ಸಾವು ಪ್ರಕರಣ

ಎಸ್‌ಐಟಿ ತನಿಖೆ ಆರಂಭ

ಮಂಗಳೂರು, ಜು.26– ಧರ್ಮಸ್ಥಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿರುವ ನಿಗೂಢ ಸರಣಿ ಸಾವುಗಳ ತನಿಖೆಗಾಗಿ ಕರ್ನಾಟಕ ಸರ್ಕಾರ ರಚಿಸಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಶನಿವಾರ ತನ್ನ ತನಿಖೆಯನ್ನು ಪ್ರಾರಂಭಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಐಟಿ ತನ್ನ ಕಚೇರಿಯನ್ನು ಧರ್ಮಸ್ಥಳದ ಬದಲಿಗೆ ಬೆಳ್ತಂಗಡಿಯಲ್ಲಿ ಆರಂಭಿಸಿದೆ. ಮಲ್ಲಿಕಟ್ಟೆಯಲ್ಲಿರುವ ಗುಪ್ತಚರ ಬ್ಯೂರೋ ಆವರಣದಲ್ಲಿ ಸ್ಥಾಪಿಸಲಾದ ಎಸ್‌ಐಟಿ ಕಚೇರಿಗೆ ಹಿರಿಯ ಅಧಿಕಾರಿಗಳು ಆಗಮಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಸ್ಥಳಗಳಿಗೆ ಭೇಟಿ ನೀಡಿದೆ ಎಂದು ಮೂಲಗಳು ತಿಳಿಸಿವೆ.

ತನಿಖೆಯ ಮೇಲ್ವಿಚಾರಣೆ ನಡೆಸುತ್ತಿರುವ ಪೊಲೀಸ್ ಉಪ ಮಹಾನಿರ್ದೇಶಕ (ಡಿಐಜಿ) ಎಂ.ಎನ್.ಅನುಚೇತ್ ಮಂಗಳೂರಿಗೆ ಆಗಮಿಸಿದ್ದು, ಎಸ್‌ಐಟಿಗೆ ನಿಯೋಜಿಸಲಾದ ▶ 6ನೇ ಪುಟಕ್ಕೆ

ಕೋಡಿಶ್ರೀಗಳ ಭೇಟಿ ಮಾಡಿದ ಡಿಕೆಶಿ



ಡಿಸಿಎಂ ಡಿ.ಕೆ.ಶಿವಕುಮಾರ್ ಕೋಡಿಶ್ರೀ ಮಠಕ್ಕೆ ಭೇಟಿ ನೀಡಿ, ಶ್ರೀಗಳಿಂದ ಆಶೀರ್ವಾದ ಪಡೆದರು.

ಹಾಸನ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದಿಢೀರ್ ಕೋಡಿಶ್ರೀಗಳ ಭೇಟಿ ಮಾಡಿದ್ದಾರೆ. ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಹಾರನಹಳ್ಳಿಯಲ್ಲಿರುವ ಕೋಡಿ ಮಠಕ್ಕೆ ಭೇಟಿ ನೀಡಿ ದರ್ಶನ ಮಾಡಿದ್ದಾರೆ. ಕೋಡಿಶ್ರೀಗಳ ಭೇಟಿ ಬಳಿಕ ಮಾತನಾಡಿದ ಡಿ.ಕೆ.ಶಿವಕುಮಾರ್, ಏನು ಪ್ರಾರ್ಥನೆ ಮಾಡಬೇಕು ಮಾಡಿದ್ದೇನೆ ಎಂದಿದ್ದಾರೆ. ಇದೇ ವೇಳೆ ಸ್ವಾಮೀಜಿಗಳು ಊರಿನಲ್ಲಿ ಇದ್ದಾರೆ ಎಂಬುದು ಗೊತ್ತಾಯ್ತು. ಹೀಗಾಗಿ ಭೇಟಿಗೆ ಬಂದಿದ್ದೇನೆ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಮಠಕ್ಕೆ ಭೇಟಿ ನೀಡಿ, ದರ್ಶನ ಪಡೆದ ಡಿ.ಕೆ.ಶಿವಕುಮಾರ್ ಬಳಿಕ ▶ 6ನೇ ಪುಟಕ್ಕೆ

ಮೂರ್ನಾಲ್ಕು ದಿನದಲ್ಲಿ 29 ನಿಗಮ, ಮಂಡಳಿ

ಅಧ್ಯಕ್ಷ, ಉಪಾಧ್ಯಕ್ಷರ ನೇಮಕ!

ಬೆಂಗಳೂರು,ಜು.26–ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಕರ್ನಾಟಕ ಕಾಂಗ್ರೆಸ್ ಉಸ್ತುವಾರಿಯೂ ಆದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು 29 ಮಂಡಳಿಗಳು, ನಿಗಮಗಳಿಗೆ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಪಟ್ಟಿಯನ್ನು ಅಂತಿಮಗೊಳಿಸಿದ್ದು, ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೇಮಕಾತಿ ಪಟ್ಟಿಗೆ ಅಂಕಿತ ಹಾಕುವ ಸಾಧ್ಯತೆ ಇದೆ.



ಸಿದ್ದರಾಮಯ್ಯ

ನಾಳೆ ಸಿಎಂ ಅಂಕಿತ ಸಾಧ್ಯತೆ

ಶಿವಕುಮಾರ್ ಮತ್ತು ನಾನು ನಮ್ಮ ಸಲಹೆಗಳನ್ನು ನೀಡಿದ್ದೇವೆ ಮತ್ತು ಹೈಕಮಾಂಡ್ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತದೆ. ಶೀಘ್ರದಲ್ಲೇ ನಿಗಮ, ಮಂಡಳಿ ಅಧ್ಯಕ್ಷರ ಪಟ್ಟಿ ಪ್ರಕಟವಾಗುವ ಸಾಧ್ಯತೆ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸುದ್ದಿಗಾರರಿಗೆ ತಿಳಿಸಿದರು.

ನಿಗಮ ಮಂಡಳಿಯಲ್ಲಿ ಈ ಬಾರಿ ಕಾರ್ಯಕರ್ತರಿಗೆ ಅವಕಾಶ ಕಲ್ಪಿಸಬೇಕು ಎಂಬ ಬೇಡಿಕೆ ಇದೆ. ಪಕ್ಷದ ಪರವಾಗಿ ಸಾಕಷ್ಟು ಜನರು ಕೆಲಸ ಮಾಡುತ್ತಿದ್ದಾರೆ. ಪಕ್ಷದ ಪರವಾಗಿ ಧ್ವನಿ ಎತ್ತುತ್ತಿರುತ್ತಾರೆ. ಅಂತಹವರನ್ನು ಪರಿಗಣಿಸಲಾಗಿದೆ ಎಂದರು.

ಆಗಸ್ಟ್ 11ರ ವಿಧಾನ ಮಂಡಲದ ಜಂಟಿ ಅಧಿವೇಶನಕ್ಕೆ ಮುಂಚಿತವಾಗಿ ನಾಲ್ಕು ಎಂಎಲ್‌ಸಿಗಳ ನಾಮನಿರ್ದೇಶನ ಮಾಡಲಾಗುತ್ತದೆಯೇ ಎಂದು ಕೇಳಿದಾಗ, ಬಹುಶಃ ಆಗಬಹುದು ಎಂದರು. ಕರ್ನಾಟಕ ಭವನದಲ್ಲಿ ಅಧಿಕಾರಿಗಳ ನಡುವಿನ ಜಗಳಕ್ಕೆ ಪ್ರತಿಕ್ರಿಯಿಸಿದ ಅವರು, ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ಈ ವಿಷಯವನ್ನು ಪರಿಶೀಲಿಸುವುದಾಗಿ ಹೇಳಿದರು.

ಶುಕ್ರವಾರ ರಾತ್ರಿಯೇ ದೆಹಲಿಯಿಂದ ಬೆಂಗಳೂರಿಗೆ ಆಗಮಿಸಿರುವ ಮುಖ್ಯಮಂತ್ರಿಗಳು ಶನಿವಾರ ಹಾಸನ ಜಿಲ್ಲೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಭಾನುವಾರ ಮದ್ದೂರಿನಲ್ಲಿ ಪಕ್ಷದ ಸ್ಥಳೀಯ ಶಾಸಕರು ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ವಿವಿಧ ಅಭಿವೃದ್ಧಿ ಕೆಲಸಗಳಿಗೆ ಚಾಲನೆ ನೀಡಲಿದ್ದಾರೆ. ಹೀಗಾಗಿ ಈ ಎರಡು ದಿನ ಪ್ರವಾಸದಲ್ಲಿ ರುವುದರಿಂದ ಸೋಮವಾರ ಮತ್ತೊಮ್ಮೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ▶ 6ನೇ ಪುಟಕ್ಕೆ

ಕೊಡಗಲ್ಲಿ ಬಿರುಗಾಳಿ ಸಹಿತ ಭಾರಿ ಮಳೆ

ಮನೆ ಗೋಡೆ ಕುಸಿದು ಮಹಿಳೆ ಸಾವು, ಮೂವರು ಮಕ್ಕಳು ಸೇರಿ ಹಲವರಿಗೆ ಗಾಯ



ಕೊಡಗಿನ ಹಾನಗಲ್ಲು ಗ್ರಾಮದಲ್ಲಿ ಮನೆಯ ಗೋಡೆ ಕುಸಿದು ಬಿದ್ದಿರುವುದು.

ಮಡಿಕೇರಿ, ಜು.26–ಕೊಡಗಿನಲ್ಲಿ ಬಿರುಗಾಳಿ ಸಹಿತ ಪುಷ್ಯ ಮಳೆ ಆರ್ಭಟಿಸುತ್ತಿದ್ದು, ಮನೆ ಗೋಡೆ ಕುಸಿದು ಕಾರ್ಮಿಕ ಮಹಿಳೆ ಸಾವನ್ನಪ್ಪಿ, ಮೂವರು ಮಕ್ಕಳು ಸೇರಿ ನಾಲ್ವರು ಗಾಯಗೊಂಡಿದ್ದಾರೆ. ಹಲವು ವಾಸದ ಮನೆಗಳಿಗೆ ಹಾನಿಯಾಗಿದೆ. ಭಾರಿ ಗಾಳಿಯೊಂದಿಗೆ ಮಳೆ ಸುರಿಯುತ್ತಿರುವ ಕಾರಣ ವಿದ್ಯುತ್ ಕಂಬ ಹಾಗೂ ತಂತಿಗಳಿಗೂ ತೀವ್ರ ಹಾನಿಯಾಗಿದ್ದು ನಗರ, ಪಟ್ಟಣಗಳಲ್ಲೂ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಕಂಡು ಬಂದಿದೆ. ಇನ್ನು ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಸಂಪರ್ಕ ಮರುಸ್ಥಾಪನೆಯಾಗದ ಹಿನ್ನೆಲೆಯಲ್ಲಿ ಕತ್ತಲೆಯಲ್ಲಿ ಮುಳುಗಿವೆ. ಸೋಮವಾರಪೇಟೆ ತಾಲೂಕಿನ ಹಾನಗಲ್ಲು ಗ್ರಾಮದಲ್ಲಿ ಮನೆಯ ಗೋಡೆ ಕುಸಿದುಬಿದ್ದು, ಕಾರ್ಮಿಕ ಮಹಿಳೆ ಸಾವನ್ನಪ್ಪಿದ್ದಾರೆ. ಕಲಬುರಗಿ ಅಫ್ಜಲ್‌ಪುರ ಮೂಲದವರಾಗಿದ್ದು, 2 ವರ್ಷಗಳಿಂದ ಪಟ್ಟಣದಲ್ಲಿ ವಾಸವಾಗಿದ್ದ ಸುಷ್ಮಾ (35) ಮೃತಪಟ್ಟ ದುರ್ದೈವಿ. ಸುಷ್ಮಾ ತಮ್ಮ ಕುಟುಂಬದೊಂದಿಗೆ ಹಾನಗಲ್ಲು ಗ್ರಾಮದ ಎ.ಎನ್. ಸಚಿನ್ ಎಂಬುವರ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಶನಿವಾರ ಬೆಳಿಗ್ಗೆ 5.30ರ ಸಮಯದಲ್ಲಿ ▶ 6ನೇ ಪುಟಕ್ಕೆ

ನಿವೃತ್ತಿ ನಂತರ ಯಾವುದೇ ಸರ್ಕಾರಿ ಹುದ್ದೆ ಸ್ವೀಕರಿಸಲ್ಲ

ಸಿಜೆಐ ಗವಾಯಿ ಘೋಷಣೆ



ಸಿಜೆಐ ಗವಾಯಿ

ನವದೆಹಲಿ: ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ತಮ್ಮ ನಿವೃತ್ತಿಯ ನಂತರ ಯಾವುದೇ ಸರ್ಕಾರಿ ಹುದ್ದೆಯನ್ನು ಸ್ವೀಕರಿಸುವುದಿಲ್ಲ ಎಂದು ಘೋಷಿಸಿದರು. ಬದಲಿಗೆ ಅವರು ಸಮಾಲೋಚನೆ ಮತ್ತು ಮಧ್ಯಸ್ಥಿಕೆ ಕ್ಷೇತ್ರದಲ್ಲಿ ಕೆಲಸ ಮಾಡುವುದಾಗಿ ಹೇಳಿದ್ದಾರೆ.

ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯಲ್ಲಿ ದಿವಂಗತ ಟಿ.ಆರ್. ಗಿಲ್ಡ್ ಸ್ಮಾರಕ ಇ–ಗ್ರಂಥಾಲಯದ ಉದ್ಘಾಟನಾ ಸಮಾರಂಭದಲ್ಲಿ ಸಿಜೆಐ ಗವಾಯಿ ಈ ಹೇಳಿಕೆ ನೀಡಿದ್ದು, ಅವರು 2025ರ ನವೆಂಬರ್ 23ರಂದು ನಿವೃತ್ತರಾಗಲಿದ್ದಾರೆ. ಅಮರಾವತಿಯ ತಮ್ಮ ಹುಟ್ಟೂರು ದಾರಾಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನವೆಂಬರ್ 24ರ ನಂತರ ನಾನು ಯಾವುದೇ ಸರ್ಕಾರಿ ಹುದ್ದೆಯನ್ನು ಸ್ವೀಕರಿಸುವುದಿಲ್ಲ. ಆದರೆ ನಾನು ಸಮಾಲೋಚನೆ ಮತ್ತು ಮಧ್ಯಸ್ಥಿಕೆ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತೇನೆ. ನಿವೃತ್ತಿಯ ನಂತರ ತಮ್ಮ ಹೆಚ್ಚಿನ ಸಮಯವನ್ನು ದಾರಾಪುರ, ಅಮರಾವತಿ ಮತ್ತು ನಾಗ್ಪುರದಲ್ಲಿ ಕಳೆಯಲು ಯೋಜಿಸುತ್ತಿರುವುದಾಗಿಯೂ ಅವರು ಹೇಳಿದರು.

ನ್ಯಾಯಾಂಗ ಸ್ವಾತಂತ್ರ್ಯದ ಬಗ್ಗೆ ಮಾತನಾಡಿದ ಅವರು, ನಿವೃತ್ತಿಯ ನಂತರ ಸರ್ಕಾರಿ ▶ 6ನೇ ಪುಟಕ್ಕೆ

ಬೆಂಗಳೂರು ಅರಮನೆ ಮೈದಾನದ ಟಿಡಿಆರ್ ವಿವಾದ: ಆ.18ಕ್ಕೆ ಸುಪ್ರೀಂ ವಿಚಾರಣೆ

ನವದೆಹಲಿ: ಬೆಂಗಳೂರಿನ ಅರಮನೆ ಮೈದಾನದ 15.36 ಎಕರೆಗೆ 3,400 ಕೋಟಿಯ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ಪ್ರಮಾಣಪತ್ರಗಳನ್ನು ಮೈಸೂರಿನ ರಾಜವಂಶಸ್ಥರಿಗೆ ಹಸ್ತಾಂತರಿಸುವಂತೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ನೀಡಿರುವ ತೀರ್ಪು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿರುವ ಪುನರ್ ಪರಿಶೀಲನಾ ಅರ್ಜಿಯನ್ನು ತ್ರಿಸದಸ್ಯ ಪೀಠ ಆ.18ರಂದು ವಿಚಾರಣೆ ನಡೆಸಲಿದೆ. ರಾಜವಂಶಸ್ಥರಿಗೆ ಟಿಡಿಆರ್ ನೀಡಬೇಕೆಂದು ದ್ವಿಸದಸ್ಯ ಪೀಠದ ಆದೇಶವನ್ನು ತ್ರಿಸದಸ್ಯ ಪೀಠವು ಮೇ 29ರಂದು ಅಮಾನತುಗೊಳಿಸಿತ್ತು. ಮುಖ್ಯ ಸಿವಿಲ್ ಮೇಲ್ಮನವಿಯ ವಿಚಾರಣೆಯನ್ನು ಆಗಸ್ಟ್ 18ರಂದು ನಡೆಸುವುದಾಗಿಯೂ ಪೀಠ ತಿಳಿಸಿತ್ತು.



ಸಂವಿಧಾನ ಧಿಕ್ಕರಿಸಿ ತುರ್ತು ಪರಿಸ್ಥಿತಿ ಹೇರಿದವರಿಂದ ಕೇಂದ್ರ ಸರ್ಕಾರದ ವಿರುದ್ಧ ಈಗ ಸಂವಿಧಾನ ಬದಲಾವಣೆ ಅಪಪ್ರಚಾರ

- ಆರ್‌ಎಸ್‌ಎಸ್ ಜೇಷ್ಠ ಪ್ರಚಾರಕ ದಾ.ಮ.ರವೀಂದ್ರ ಅಸಮಾಧಾನ
- ತುರ್ತು ಪರಿಸ್ಥಿತಿ ವಿರುದ್ಧ ಹೋರಾಟ ಕುರಿತ ಮರು ಮುದ್ರಿತ 'ಭುಗಿಲು' ಕೃತಿ ಬಿಡುಗಡೆ

ಮೈಸೂರು,ಜು.26(ಪಿಎಂ)–ತುರ್ತು ಪರಿಸ್ಥಿತಿ ಮೂಲಕ ದೇಶದ ಸಂವಿಧಾನ ಧಿಕ್ಕರಿಸಿದವರೇ ಇಂದು ಸಂವಿಧಾನ ಬದಲಾವಣೆ ಮಾಡಲಾಗುತ್ತಿದೆಯೆಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ವಿರುದ್ಧ ಪ್ರಚಾರ ಮಾಡುತ್ತಿದ್ದು, ಕಾಂಗ್ರೆಸ್ಸಿಗರ ಈ ಸುಳ್ಳು ಪ್ರಚಾರಕ್ಕೆ ಎಡಪಂಥೀಯರು ಮತ್ತು ಪ್ರಗತಿಪರರ ಹೆಸರಿನಲ್ಲಿ ಮತ್ತಷ್ಟು ಪುಷ್ಟಿ ನೀಡಲಾಗುತ್ತಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಜೇಷ್ಠ ಪ್ರಚಾರಕ ದಾ.ಮ.ರವೀಂದ್ರ ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನ ಬಿಎಸ್‌ಎಸ್ ವಿದ್ಯೋದಯ ಶಾಲೆ ಸಭಾಂಗಣದಲ್ಲಿ ಶ್ರೀ ಜನ ಜಾಗರಣ ಟ್ರಸ್ಟ್, ಮಂಥನ ಮೈಸೂರು ವತಿಯಿಂದ ಹಮ್ಮಿಕೊಂಡಿದ್ದ 'ತುರ್ತು ಪರಿಸ್ಥಿತಿ ವಿರುದ್ಧದ ಹೋರಾಟದ ರೋಚಕ ಸತ್ಯ ಕಥನವನ್ನು ಒಳಗೊಂಡ ಮರು ಮುದ್ರಿತ' ಕೃತಿ 'ಭುಗಿಲು' ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಇಂದಿನ ಯುವ ಪೀಳಿಗೆ ಸೇರಿದಂತೆ ಎಷ್ಟೋ ಜನರಿಗೆ ತುರ್ತು ಪರಿಸ್ಥಿತಿ ಬಗ್ಗೆ ಗೊತ್ತಿಲ್ಲ. ಆದರೆ ಒಂದು ವಿದ್ಯಮಾನ ಮತ್ತೆ ಅದನ್ನು ನೆನಪು ಮಾಡುತ್ತಿದೆ. ಅದೇಂದರೆ, ಸಂವಿಧಾನ ಕುರಿತು ದೊಡ್ಡ ಪ್ರಮಾಣದಲ್ಲಿ ಚರ್ಚೆ ಈಗ ನಡೆಯುತ್ತಿರುವುದಾಗಿದೆ. ಸಂವಿಧಾನವನ್ನು ಮೋದಿ ಸರ್ಕಾರ ಹಾಳು ಮಾಡುತ್ತಿದ್ದು, ಪ್ರಜಾಪ್ರಭುತ್ವ ನಾಶ ಮಾಡುತ್ತಿದೆ ಎನ್ನುವ ರೀತಿಯಲ್ಲಿ ಕಾಂಗ್ರೆಸ್ ಪಕ್ಷದಿಂದ ಪ್ರಚಾರ ನಡೆಯುತ್ತಿದೆ. ಇದಕ್ಕೆ ಎಡಪಂಥೀಯರು ಮತ್ತು ಪ್ರಗತಿಪರರ ಹೆಸರಿನಲ್ಲಿ ಮತ್ತಷ್ಟು ಪುಷ್ಟಿ ನೀಡಲಾಗುತ್ತಿದೆ ಎಂದು ಛೇಡಿಸಿದರು. 1971ರಲ್ಲಿ ಯುದ್ಧ ಮುಖೇನ ಪಾಕಿಸ್ತಾನ ಒಡೆದು ಬಾಂಗ್ಲಾದೇಶದ ರಚನೆಯಾಗುವಂತೆ ಮಾಡಿದ್ದು ಇಂದಿರಾ ಗಾಂಧಿ ಸರ್ಕಾರದ ದೊಡ್ಡ ಸಾಧನೆಯೇ. ಹಾಗಾಗಿ ಅವರಿಗೆ ಅದ್ಭುತವಾದ ಜನಬೆಂಬಲವೂ ಸಿಕ್ಕಿತು. ಅದರ ಪರಿಣಾಮ 1972ರ ಚುನಾವಣೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಬಹುಮತದಿಂದ ಮತ್ತೆ ಇಂದಿರಾ ಗಾಂಧಿ ಸರ್ಕಾರ ಅಧಿಕಾರಕ್ಕೆ ಬಂದಿತು. ಆದರೆ ಇಂದಿರಾ ಗಾಂಧಿ ಅವರಲ್ಲಿ ತಾನು ಹೇಳಿದ್ದೇ ನಡೆಯಬೇಕೆನ್ನುವ ಮನೋಭಾವ ಬೆಳೆಯಿತು. ಸಂಸದರು ಮತ್ತು ಪ್ರಧಾನಮಂತ್ರಿ ಸ್ಥಾನದಿಂದ ಕೆಳಗಿಳಿಯಬೇಕಾದ ಪರಿಸ್ಥಿತಿ ಉದ್ಭವಿಸಿದಾಗ, 1975 ಜೂ.25ರ ಮಧ್ಯರಾತ್ರಿ ರಾಷ್ಟ್ರಪತಿಗಳ ಅಂಕಿತ ಪಡೆದು ತುರ್ತು ಪರಿಸ್ಥಿತಿ ಜಾರಿಗೊಳಿಸಿದರು ಎಂದರು. ತುರ್ತು ಪರಿಸ್ಥಿತಿ ಪರಿಣಾಮ ಒಂದೇ ದಿನದಲ್ಲಿ ದೇಶಾದ್ಯಂತ ಹತ್ತಾರು ▶ 6ನೇ ಪುಟಕ್ಕೆ



ಮೈಸೂರಿನ ಬಿಎಸ್‌ಎಸ್ ವಿದ್ಯೋದಯ ಶಾಲೆ ಸಭಾಂಗಣದಲ್ಲಿ ತುರ್ತು ಪರಿಸ್ಥಿತಿ ವಿರುದ್ಧದ ಹೋರಾಟ ಕುರಿತ ಮರು ಮುದ್ರಿತ 'ಭುಗಿಲು' ಕೃತಿ ಬಿಡುಗಡೆ ಮಾಡಲಾಯಿತು. (ಎಡದಿಂದ) ಆರ್‌ಎಸ್‌ಎಸ್ ಮುಖಂಡ ದಾ.ಮ.ರವೀಂದ್ರ, ವಿಶ್ರಾಂತ ಕುಲಪತಿ ಪ್ರೊ.ಹರೀಶ್ ರಾಮಸ್ವಾಮಿ, ಶ್ರೀ ಜನ ಜಾಗರಣ ಟ್ರಸ್ಟ್ ಅಧ್ಯಕ್ಷ ವಾಸುದೇವ ಭಟ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಹಿಂದುತ್ವದಿಂದ ಇಡೀ ಜಗತ್ತಿಗೇ ಮಂಗಳ

ಹಿಂದುತ್ವ ಅಂದರೆ ಅದು ಸಾಂಸ್ಕೃತಿಕ ರಾಷ್ಟ್ರೀಯತೆ. ಸಂಸ್ಕೃತಿ ಹಾಗೂ ರಾಷ್ಟ್ರೀಯತೆ ಎರಡೂ ಇಲ್ಲಿದೆ. ಇದನ್ನೇ ಭಾರತೀಯ ಜನತಾ ಪಕ್ಷ ಪ್ರತಿಪಾದಿಸುತ್ತಿರುವುದು. ಹಿಂದುತ್ವ ಯಾವುದರ ವಿರೋಧವೂ ಅಲ್ಲ. ಹಿಂದುತ್ವವು ಜಗತ್ತಿಗೆ ಮಂಗಳವನ್ನು ತರುವಂತದ್ದು. ಅದು ಜಗತ್ತಿಗೆ ಹಿಂದುತ್ವ ರಕ್ಷಣೆ ಕೊಡಲಿದೆ ಎಂದು ದಾ.ಮ.ರವೀಂದ್ರ ಹೇಳಿದರು.

ಸ್ವಯಂ ಸೇವಕರು ಅಧಿಕಾರದಲ್ಲಿ ಕುಳಿತು 11 ವರ್ಷವಾಯಿತು. ಈಗ ಜಗತ್ತಿಗೆ ಭಾರತ ಬೇಕು. ಭಾರತಕ್ಕೆ ಹಿಂದುತ್ವ ಬೇಕು. ಯೋಗ ಹಿಂದುತ್ವದ ಒಂದು ಭಾಗವಾಗಿದ್ದು, 175ಕ್ಕೂ ಹೆಚ್ಚು ದೇಶಗಳಲ್ಲಿ ಇಂದು ಯೋಗ ದಿನಾಚರಣೆ ಮಾಡಲಾಗುತ್ತಿದೆ. ಮುಸ್ಲಿಂ ದೇಶಗಳು ಒಳಗೊಂಡಂತೆ 22 ದೇಶಗಳು ಪ್ರಧಾನಿಯವರಿಗೆ ತಮ್ಮ ದೇಶದ ಅತ್ಯುನ್ನತ ಪ್ರಶಸ್ತಿ ಕೊಡಮಾಡಿವೆ. ಸಂಸ್ಕೃತವನ್ನು ಭಾರತದ ಹೊರಗೆ 140ಕ್ಕೂ ಹೆಚ್ಚು ವಿವಿಗಳಲ್ಲಿ ಕಲಿಸಲಾಗುತ್ತಿದೆ. ಹಿಂದುತ್ವ ಅರಳಿ ಬೆಳೆಯಬೇಕು. ಇದರಲ್ಲಿ ವೇದಗಳಲ್ಲಿ ಹೇಳಿರುವಂತೆ ವಸುದೈವ ಕುಟುಂಬಕಂ ಎಂಬ ವಿಶಾಲವಾದ ದೃಷ್ಟಿಯಿದೆ. ಕಳೆದ ಒಂದು ಸಾವಿರ ವರ್ಷಗಳಲ್ಲಿ ಜಗತ್ತಿನಲ್ಲಿ ಭಾರತ ಮಾತ್ರ ಇನ್ನೊಂದು ದೇಶ ಮೇಲೆ ಯುದ್ಧ ಮಾಡಲಿಲ್ಲ. ಶಸ್ತ್ರ ಇಲ್ಲದೇ ನಡುವಳಿಕೆಯಿಂದ ಜಗತ್ತನ್ನು ಗೆಲ್ಲುವ ಸಂಸ್ಕೃತಿ ಹಿಂದುತ್ವದಲ್ಲಿದೆ. ಹಾಗಾಗಿ ಹಿಂದುತ್ವ ಎಂದಾಗ ಕೋಮುವಾದಿ ಹಾಗೂ ಅನ್ಯ ಧರ್ಮೀಯರ ವಿರೋಧಿ ಎಂದು ಹೇಳುವುದು ತಪ್ಪು ಎಂದು ದಾ.ಮ.ರವೀಂದ್ರ ಪ್ರತಿಪಾದಿಸಿದರು.



ಮೈಸೂರು ಮಿತ್ರ

ಡಿ.ದೇವರಾಜ ಅರಸು ಪ್ರತಿಮೆ ಲೋಕಾರ್ಪಣೆಗೆ ಭರದ ಸಿದ್ಧತೆ



ಡಿ.ದೇವರಾಜ ಅರಸು ಪ್ರತಿಮೆ ಅನಾವರಣ ಸಂಬಂಧ ಸಮಿತಿಯಿಂದ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪರೊಂದಿಗೆ ಚರ್ಚೆ.

ಮೈಸೂರು, ಜು. 26– ಸಾಮಾಜಿಕ ನ್ಯಾಯದ ಹರಿಕಾರರು, ಹಿಂದುಳಿದ ವರ್ಗಗಳ ಆಶಾಕಿರಣ ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಅವರ ಪ್ರತಿಮೆಯನ್ನು ಮೈಸೂರಿನ ಜಿಲ್ಲಾಧಿಕಾರಿಗಳ ಆವರಣದಲ್ಲಿ ಪ್ರತಿಷ್ಠಾಪಿಸುವ ಪ್ರಕ್ರಿಯೆ ಅಂತಿಮ ಘಟ್ಟ ತಲುಪಿದೆ.

ಉಳುವವನಿಗೆ ಭೂಮಿ, ಹಿಂದುಳಿದ–ಶೋಷಿತ ಸಮುದಾಯಗಳ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ, ಜೀತ ವಿಮುಕ್ತಿ, ಹಿಂದುಳಿದವರು, ಅಲ್ಪಸಂಖ್ಯಾತರು, ದಲಿತರಿಗೆ ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ನೀಡಿ ರಾಷ್ಟ್ರಕ್ಕೆ ಮಾದರಿ ಆದವರು ಡಿ. ದೇವರಾಜ ಅರಸು. ಬೆಂಗಳೂರಿಗೆ ತಂತ್ರಜ್ಞಾನ ಪರಿಚಯಿಸಿದವರು. ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದವರು.

ಈ ನೆಲೆ ಹಿನ್ನೆಲೆಯಲ್ಲಿ ಮೈಸೂರು ನಗರದಲ್ಲಿ ಅವರ ಪ್ರತಿಮೆ ಇಲ್ಲದಿರುವ ಕೊರತೆಯನ್ನು ಮನಗಂಡು ಅರಸು ಪ್ರತಿಮೆ ಪ್ರತಿಷ್ಠಾನ ಸಮಿತಿ ಈ ಪ್ರಯತ್ನಕ್ಕೆ ಕೈ ಹಾಕಿತ್ತು. ಇದೀಗ ಡಿ.ದೇವರಾಜು ಅರಸು ಅವರ ಪ್ರತಿಮೆ ಸಿದ್ಧವಾಗಿದ್ದು ಇದರ ಉದ್ಘಾಟನೆಯನ್ನು ಅರಸು ಅವರ ಜನ್ಮದಿನವಾದ ಆಗಸ್ಟ್ 20ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೆರವೇರಿಸಲು ಕೋರಲು ಸಮಿತಿ ರಾಜ್ಯಾಧ್ಯಕ್ಷ ಜಾಕಿರ್ ಹುಸೇನ್ ಇತರರು ನಿರ್ಧರಿಸಿದ್ದಾರೆ.

ಈ ಸಂಬಂಧ ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ, ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಬಳಿ ಚರ್ಚೆ ಸಹ ನಡೆಸಲಾಗಿದೆ.

ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿಯಲ್ಲಿ ಗೌರವಾಧ್ಯಕ್ಷ ಎಂ.ಚಂದ್ರಶೇಖರ್, ಸಮಿತಿ ಗೌರವ ಸಲಹೆಗಾರ ಡಾ.ವೈ.ಡಿ.ರಾಜಣ್ಣ, ರಾಜ್ಯ ಪ್ರಧಾನ ಸಂಚಾಲಕ ಡೈರಿ ವೆಂಕಟೇಶ್ ಇದ್ದಾರೆ.

ಇಂದು ಧಮ್ಮಂ ನಮಾಯಿ ಕಾರ್ಯಕ್ರಮ




ಪುರುಷೋತ್ತಮ್

ಮೈಸೂರು, ಜು.26(ಎಂಟಿವೈ)– ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ನಾಳೆ(ಜು.27) ಬೆಳಗ್ಗೆ 10ಕ್ಕೆ 'ಡಾ.ಅಂಬೇಡ್ಕರ್ ಅರಿವಿನ ಮಾರ್ಗದ ಧಮ್ಮ ಪಯಣದ ಹಾದಿಯಲ್ಲಿ ಧಮ್ಮಂ ನಮಾಯಿ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ರೈಟ್ಸ್ ಬುದ್ದಿಸ್ಟ್ ಕಾನ್ಫರೇಷನ್, ಡಾ.ಅಂಬೇಡ್ಕರ್ ಸಾಹಿತ್ಯ ಅಕಾಡೆಮಿ, ವಿಶ್ವ ಮೈತ್ರಿ ಬುದ್ಧ ವಿಹಾರ ಮತ್ತು ಮೈಸೂರು ವಿವಿ ಸಂಶೋಧಕರ ಸಂಘದ ಸಹಯೋಗದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದ್ದು, ಅಂದು ಬೆಳಿಗ್ಗೆ 10ಕ್ಕೆ ಹಿರಿಯ ಚಿಂತಕ ಕೋಟಗಾನಹಳ್ಳಿ ರಾಮಯ್ಯ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಶ್ರೀ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ನಟ ಅಹಿಂಸಾ ಚೇತನ್, ಪತ್ರಕರ್ತ ರಾ.ಚಿಂತನ್, ಪುಟ್ಟಮಣಿ ಸೇರಿದಂತೆ ನಾಡಿನ ವಿವಿಧ ಭಾಗಗಳ ಬೌದ್ಧ ಚಿಂತಕರು, ಡಾ.ಅಂಬೇಡ್ಕರ್ ವಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಬುದ್ಧ ಧಮ್ಮ ವಿಧಿ ವಿಧಾನಗಳಲ್ಲಿ ಮದುವೆಯಾದ 50ಕ್ಕೂ ಹೆಚ್ಚು ದಂಪತಿ ಮತ್ತು ಬುದ್ಧ ಧಮ್ಮದ ಆಚರಣೆಯಂತೆ ಗೃಹ ಪ್ರವೇಶ ನಡೆಸಿದ ಕುಟುಂಬಗಳನ್ನು ವೇದಿಕೆಯಲ್ಲಿ ಗೌರವಿಸಿ ಸಂವಾದ ನಡೆಸಲಾಗುವುದು. ಇದೆ ಸಂದರ್ಭದಲ್ಲಿ 'ಬುದ್ಧ ಬೆಳಕು' ನಾಟಕ ಪ್ರದರ್ಶನಗೊಳ್ಳಲಿದೆ. ಕಳೆದ 10 ತಿಂಗಳಿಂದ ಆರಂಭವಾದ ಧಮ್ಮ ಪಯಣವು ಬುದ್ಧ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಚಿಂತನೆಗಳು ಸಾಮಾಜಿಕ ಸಾಮರಸ್ಯ ಕುರಿತ, ಜೂಜು, ದುಶ್ಚಟಗಳ ಹಾಗೂ ಸಾಮಾಜಿಕ ಪಿಡುಗುಗಳ ವಿರುದ್ಧ 11600 ಕಿ.ಮೀ. ಸಂಚರಿಸಿ 170 ಹಳ್ಳಿಗಳಲ್ಲಿ ಜಾಗೃತಿ ಮೂಡಿಸಲಾಗಿದೆ. 18ರಿಂದ 40 ವರ್ಷದೊಳಗಿನ ಯುವ ಸಮೂಹಕ್ಕೆ ಮುಖ್ಯವಾಗಿ ವೇದಿಕೆ ಕಲ್ಪಿಸಲಾಗುತ್ತಿದೆ ಎಂದರು. ಗೋಷ್ಠಿಯಲ್ಲಿ ಲೇಖಕ ಸಿ.ಹರಕುಮಾರ್, ಪತ್ರಕರ್ತ ಸೋಮಯ್ಯ ಮಲೆಯೂರು, ಸಂಶೋಧಕ ಮಹೇಶ್ ಇದ್ದರು.

ಹುಟ್ಟುಹಬ್ಬದ ಶುಭಾಶಯ...



ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬದ ಅಂಗವಾಗಿ ಕೆ.ಜಿ.ಕೊಪ್ಪಲಿನ ಮುಖಂಡ ದೀಪುಗೌಡ ಶುಭಾಶಯ ಕೋರಿದರು. ಈ ವೇಳೆ ಹರೀಶ್‌ಗೌಡರ ಧರ್ಮಪತ್ನಿ ಶ್ರೀಮತಿ ಗೌರಿ, ಮುಖಂಡರಾದ ಅವಿನಾಶ್, ರಾಜುಗೌಡ, ಪುನೀತ್ ಉಪಸ್ಥಿತರಿದ್ದರು.

ಹಡಪದ ಅಪ್ಪಣ್ಣ ಜಯಂತಿ



ವರುಣ ಕ್ಷೇತ್ರ ಸವಿತಾ ಸಮಾಜ ಕ್ಷೇಮಾಭಿವೃದ್ಧಿ ಸಂಘದಿಂದ ಎಸ್.ಹೊಸಕೋಟೆಯಲ್ಲಿ ಶಿವಶರಣ ಹಡಪದ ಅಪ್ಪಣ್ಣ ಜಯಂತಿ ಆಚರಿಸಲಾಯಿತು. ಈ ವೇಳೆ ಅಧ್ಯಕ್ಷ ಮಹದೇವ, ಗೌರವಾಧ್ಯಕ್ಷ ಮಹದೇವು, ಉಪಾಧ್ಯಕ್ಷ ಗೋವಿಂದಯ್ಯ, ಕಾರ್ಯದರ್ಶಿ ಮಹೇಶ್, ಖಜಾಂಚಿ ನಾಗರಾಜು, ಮಂಜಪ್ಪ, ಚಾಮರಾಜು, ಶಿವನಾಗ, ಮಣಿಕಂಠ, ಮಹೇಶ್, ಮಹೇಂದ್ರ ಸೇರಿದಂತೆ ಎಲ್ಲಾ ಪದಾಧಿಕಾರಿಗಳು, ಗ್ರಾಮಸ್ಥರು ಇದ್ದರು.

ನಾಳೆಯಿಂದ ವಿವಿಸಿಇಯಲ್ಲಿ 5 ದಿನಗಳ ತರಬೇತಿ

ಮೈಸೂರು,ಜು.26–ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಮೈಸೂರಿನ ವಿದ್ಯುತ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗವು ISTE ಮತ್ತು IEEE PELS ಬೆಂಗಳೂರು ಶಾಖೆಯ ಸಹಯೋಗದೊಂದಿಗೆ ಐದು ದಿನಗಳ ಫ್ಯಾಕಲ್ಟಿ ಡೆವಲಪ್ಮೆಂಟ್ ಪ್ರೋಗ್ರಾಂ ಅನ್ನು ಜುಲೈ 28ರಿಂದ ಆಯೋಜಿಸಲಾಗಿದೆ. ಕಾರ್ಯಕ್ರಮವು ವಿವಿಸಿಇ ಬಿ.ಸಿ.ಲಿಂಗಯ್ಯ ಸಭಾಂಗಣದಲ್ಲಿ ಬೆಳಗ್ಗೆ 9.45ಕ್ಕೆ ನಡೆಯಲಿದೆ.

ಪ್ರಥಮ ಶ್ರಾವಣ ಶನಿವಾರದ ಅಂಗವಾಗಿ

ಮೈಸೂರು ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ರಾಗಿ ಮುದ್ದೆ, ಒಣ ಅವರೇಕಾಳು ಸಾರಿನ ಊಟ

10 ಸಾವಿರಕ್ಕೂ ಹೆಚ್ಚು ಭಕ್ತಾದಿಗಳಿಂದ ಮುದ್ದೆ ಊಟ ಸೇವನೆ



ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಪ್ರಥಮ ಶ್ರಾವಣ ಶನಿವಾರದ ಅಂಗವಾಗಿ ಭಕ್ತರಿಗೆ ಅವರೇಕಾಳು ಸಾರು ಹಾಗೂ ಮುದ್ದೆ ಊಟ ವಿತರಿಸಲಾಯಿತು.

ಮೈಸೂರು, ಜು.26 (ಜಿಎ)–ಮೈಸೂರಿನಲ್ಲಿ ಮೊದಲ ಶ್ರಾವಣ ಶನಿವಾರವನ್ನು ಒಣ ಅವರೇ ಕಾಳು ಸಾರು ಮತ್ತು ರಾಗಿ ಮುದ್ದೆ ಸವಿಯುವ ಮೂಲಕ ಭಕ್ತಾದಿಗಳು ಸಂಭ್ರಮದಿಂದ ಆಚರಿಸಿದರು.

ಮೈಸೂರಿನ ವಿಜಯನಗರದ ಪಕ್ಕ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಪ್ರಥಮ ಶ್ರಾವಣ ಶನಿವಾರದ ಅಂಗವಾಗಿ ನಡೆದ ಅವರೇಕಾಳು ಸಾರು ಮತ್ತು ಮುದ್ದೆ ಊಟ ಕಾರ್ಯಕ್ರಮದಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿ ರುಚಿ ರುಚಿಯಾದ ಒಣ ಅವರೇಕಾಳು ಸಾರು ಮತ್ತು ಮುದ್ದೆಯನ್ನು ಸವಿದರು.

ಶ್ರಾವಣ ಶನಿವಾರವಾದ್ದರಿಂದ ದೇವಾಲಯಕ್ಕೆ ಭಕ್ತರ ದಂಡೆ ಹರಿದು ಬಂದಿತ್ತು. ಯೋಗಾನರಸಿಂಹಸ್ವಾಮಿ ದರ್ಶನ ಪಡೆದು ಪೂಜೆ ಸಲ್ಲಿಸಿದ ನಂತರ ಮುದ್ದೆ ಊಟ ಮಾಡಿದರು. ಮಂಡ್ಯ ಜಿಲ್ಲೆಯ ಮೈಸೂರು ನಿವಾಸಿಗಳು, ಪುಣ್ಯಕೋಟಿ ಸೇವಾ ಟ್ರಸ್ಟ್ ಮತ್ತು ಮೈಸೂರು ಜಿಲ್ಲೆಯ ನಾಗರಿಕರ ಸಹಯೋಗದೊಂದಿಗೆ ನಾಡೋಜ ಶ್ರೀ ಭಾಷ್ಯಂ ಸ್ವಾಮೀಜಿ ಅವರ ಆಶೀರ್ವಾದದೊಂದಿಗೆ ಶ್ರಾವಣ ಮಾಸದ ಪ್ರಯುಕ್ತ ಶನಿವಾರ ವಿಜಯನಗರದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಲಾಗಿದ್ದ ಅವರೇಕಾಳು ಸಾರು ಮತ್ತು ಮುದ್ದೆ ಊಟದ ಕಾರ್ಯಕ್ಕೆ ಯೋಗಾನರಸಿಂಹ ಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಪ್ರಥಮ ಶ್ರಾವಣ ಶನಿವಾರದ ಅಂಗವಾಗಿ ವಿಭಿನ್ನವಾಗಿ ಪ್ರಸಾದದ ವ್ಯವಸ್ಥೆ ಮಾಡಿರುವುದು ಶ್ಲಾಘನೀಯವಾದುದು. ಆರೋಗ್ಯದಾಯಕವಾದ ರಾಗಿ ಮುದ್ದೆ ಮತ್ತು ರುಚಿ ಶುಚಿಯಾದ ಒಣ ಅವರೇಕಾಳು ಸಾರು ಮಾಡಿ ಭಕ್ತಾದಿಗಳಿಗೆ ಹಂಚಿದ್ದು, ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ಭಕ್ತರು ತಮ್ಮ ಗ್ರಾಮೀಣ ಪ್ರದೇಶದ ಸೊಗಡಿನ ಊಟ ಸವಿದರು ಎಂದರು.

ಕಳೆದ ಮೂರು ವರ್ಷಗಳಿಂದ ಅವರೇಕಾಳು ಸಾರು ಮತ್ತು ಮುದ್ದೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದ್ದು, 20 ಬಾಣಸಿಗರು 10 ಕ್ವಿಂಟಾಲ್ ಒಣ ಅವರೇಕಾಳಿನಿಂದ ಸಾರು ಮತ್ತು 7 ಕ್ವಿಂಟಾಲ್ ರಾಗಿ ಹಿಟ್ಟು ಬಳಸಿಕೊಂಡು 10 ಸಾವಿರಕ್ಕೂ ಹೆಚ್ಚು ಮುದ್ದೆಗಳನ್ನು ಮಾಡಲಾಗಿದೆ. ದೇವಸ್ಥಾನದ ಪಕ್ಕದಲ್ಲಿರುವ ಸ್ಥಳದಲ್ಲಿ ಸೌದೆ ಬಳಸಿ ಸಾಂಪ್ರದಾಯಕವಾಗಿ ಮುದ್ದೆ, ಸಾರು ತಯಾರಿಸಿ, ನಂತರ ಅಡಿಕೆ ತಟ್ಟೆಯಲ್ಲಿ ಭಕ್ತರಿಗೆ ಊಟ ಬಡಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ಪಾಲಿಕೆಯ ಆರೋಗ್ಯಾಧಿಕಾರಿಗಳು ಆಹಾರದ ಗುಣಮಟ್ಟ ಪರಿಶೀಲನೆ ಮಾಡಿದ ನಂತರವೇ ವಿತರಿಸಲಾಯಿತು.

ಇದಕ್ಕೂ ಮೊದಲು ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಶ್ರಾವಣ ಶನಿವಾರದ ಪೂಜೆಯನ್ನು ನೆರವೇರಿಸಿ ನಂತರ ಮುದ್ದೆ ಊಟ ತಯಾರಿಕೆಗೆ ಚಾಲನೆ ನೀಡಿ ನಂತರ ಭಕ್ತರಿಗೆ ಊಟ ಬಡಿಸಲಾಯಿತು.

ಈ ವೇಳೆ ಮಾಜಿ ಸಂಸದ ಪ್ರತಾಪ್‌ಸಿಂಹ, ಡಾ.ಶುಶ್ರುತ್ ಗೌಡ, ಪಾಲಿಕೆ ಮಾಜಿ ಸದಸ್ಯ ಎಂ.ಯು.ಸುಬ್ಬಯ್ಯ, ಪುಣ್ಯಕೋಟಿ ಸೇವಾ ಟ್ರಸ್ಟ್ ಅಧ್ಯಕ್ಷರೂ ಹಾಗೂ ಆಯೋಜಕರಾದ ಹನುಮಂತೇಶ್, ಟ್ರಸ್ಟಿ ಧರ್ಮ, ರಾ.ಪರಮೇಶಗೌಡ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಜು.30, ಮಹಮ್ಮದ್ ರಫಿ ಸ್ಮರಣಾರ್ಥ ಹಿಂದಿ ಚಲನಚಿತ್ರ ಗೀತೆಗಳ ಗಾಯನ



ಮೈಸೂರು, ಜು.26– ಮೈಸೂರಿನ ಗಾಯಕ ಜೂನಿಯರ್ ರಫೀ ಎಂದೇ ಖ್ಯಾತರಾದ ರಾಘವೇಂದ್ರ ರತ್ನಾಕರ್ ಅರ್ಪಿಸುವ ಸಂಗೀತ ಸಾಮ್ರಾಟ್ ಮಹಮ್ಮದ್ ರಫಿರವರ ಸ್ಮರಣಾರ್ಥ ಹಿಂದಿ ಚಿತ್ರಗೀತೆಗಳ ಗಾಯನ ಕಾರ್ಯಕ್ರಮವನ್ನು ಜು.30ರಂದು ಸಂಜೆ 6 ಗಂಟೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಆಯೋಜಿಸಲಾಗಿದೆ.

ಕಲಾಪೋಷಕರಾದ ಟಿ.ಆರ್.ಹರೀಶ್ ಪ್ರಸಾದ್, ಕರ್ನಾಟಕ ಸುಗಮ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷ ನಾಗರಾಜ್.ವಿ ಬೈರಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಗೋಪಿನಾಥ್, ರಾಷ್ಟ್ರಕವಿ ಕುವೆಂಪು ಕಲಾನಿಕೇತನ ಅಧ್ಯಕ್ಷ ಕುವೆಂಪು ಪ್ರಕಾಶ್, ಸೋಮಶೇಖರ್ ಆರಾಧ್ಯ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷ ಶೇಷಾದ್ರಿ, ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.07.2025 ಭಾನುವಾರ, ಮಳೆ ನಕ್ಷತ್ರ: ಪುಷ್ಯ, 20.07.2025 ರಿಂದ 2.08.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಮಖ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಮಂಗಳಸೂತ್ರ ಫೌಂಡೇಷನ್, ಶ್ರೀರಾಮಮಂದಿರ, ಮಹಾಜನ ಸಭಾ, ಗ್ಲೋಬಲ್ ಬ್ರಾಹ್ಮಿನ್ಸ್ ಫೌಂಡೇಷನ್** : 12ನೇ ವಾರ್ಷಿಕೋತ್ಸವ ಪ್ರಯುಕ್ತ ರಾಜ್ಯ ಮಟ್ಟದ ಬೃಹತ್ ಬ್ರಾಹ್ಮಣ ವಧು–ವರಾನ್ವೇಷಣಾ ಸಮಾವೇಶ, ಸಾನ್ನಿಧ್ಯ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಪ್ರೊ. ಭಾಷ್ಯಂ ಸ್ವಾಮೀಜಿ, ಜ್ಯೋತಿಷಿ ಮೈ. ಕುಮಾರ್, ಶ್ರೀ ಯೋಗನರಸಿಂಹ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್, ಅಧ್ಯಕ್ಷತೆ : ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಿರಿಯ ರಾಜ್ಯ ಉಪಾಧ್ಯಕ್ಷ ಆರ್. ಲಕ್ಷ್ಮೀಕಾಂತ್, ಮುಖ್ಯ ಅತಿಥಿಗಳು : ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ, ಎಸ್. ರಘುನಾಥ್, ಹೆಚ್.ವಿ. ರಾಜೀವ್, ರಘುರಾಂ ವಾಜಪೇಯಿ, ಎಸ್.ಎಸ್. ಪ್ರಸಾದ್, ಡಿ.ಟಿ. ಪ್ರಕಾಶ್, ಅನಿಲ್ ಕುಮಾರ್, ಎನ್.ಎಂ. ನವೀನ್ ಕುಮಾರ್, ಸ್ಥಳ:ಶ್ರೀರಾಮ ಮಂದಿರ, ಕೃಷ್ಣಮೂರ್ತಿಪುರಂ, ಬೆಳಗ್ಗೆ 8.30 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಹೈಪೋಥೈರಾಯ್ಡಿಸಮ್ ಯೋಗ ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಮತ್ತು ಅಲ್ಸರ್, ಇಸುಬು, ಆರ್ಥರೈಟಿಸ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ಕ್ಕೆ.

■ **ಮೈಸೂರಿನ ಹಾರ್ಟ್ ಸಂಸ್ಥೆ** : ಉಚಿತ ಸಂಧಿವಾತ, ಮೂಳೆರೋಗ ತಪಾಸಣಾ ಹಾಗೂ ಚಿಕಿತ್ಸೆ ಶಿಬಿರ, ಸ್ಥಳ: ಸಂಧಿವಾತ ಮತ್ತು ಕೀಲು ರೋಗ ಕ್ಲಿನಿಕ್, ಅಗ್ರಹಾರ, ಬೆಳಗ್ಗೆ 9 ರಿಂದ.

■ **ಡಾ.ಬಿ.ಆರ್.ಅಂಬೇಡ್ಕರ್ ರೈಟ್ಸ್ ಬುದ್ದಿಸ್ಟ್ ಕಾನ್ಫರೇಷನ್, ಡಾ.ಅಂಬೇಡ್ಕರ್ ಸಾಹಿತ್ಯ ಅಕಾಡೆಮಿ, ವಿಶ್ವ ಮೈತ್ರಿ ಬುದ್ಧ ವಿಹಾರ ಮತ್ತು ಮೈಸೂರು ವಿವಿ ಸಂಶೋಧಕರ ಸಂಘ** : 'ಡಾ.ಅಂಬೇಡ್ಕರ್ ಅರಿವಿನ ಮಾರ್ಗದ ಧಮ್ಮ ಪಯಣದ ಹಾದಿಯಲ್ಲಿ ಧಮ್ಮಂ ನಮಾಯಿ' ಕಾರ್ಯಕ್ರಮ, ಚಾಲನೆ : ಹಿರಿಯ ಚಿಂತಕ ಕೋಟಗಾನಹಳ್ಳಿ ರಾಮಯ್ಯ, ಉಪಸ್ಥಿತರು :ಶ್ರೀ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, ನಟ ಅಹಿಂಸಾ ಚೇತನ್, ಪತ್ರಕರ್ತ ರಾ.ಚಿಂತನ್, ಪುಟ್ಟಮಣಿ, ಸ್ಥಳ: ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ** : ಪತ್ರಕರ್ತರ ಕ್ರೀಡಾಕೂಟ, ಬಹುಮಾನ ವಿತರಣಾ ಸಮಾರಂಭ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ. ದೀಪಕ್, ಬಹುಮಾನ ವಿತರಣೆ : ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಸಾಧಕರಿಗೆ ಸನ್ಮಾನ : ಶಾಸಕ ಡಿ. ರವಿಶಂಕರ್, ಮುಖ್ಯ ಅತಿಥಿಗಳು : ಮೈಮುಲ್ ಅಧ್ಯಕ್ಷ ಆರ್. ಚಲುವರಾಜು, ಎಸಿಪಿ ರವಿಪ್ರಸಾದ್, ಎಪಿಎನ್ ಪ್ರಾಪರ್ಟೀಸ್ ಮ್ಯಾನೇಜಿಂಗ್ ಪಾರ್ಟ್ನರ್ ಎ.ಪಿ. ನಾಗೇಶ್, ಜೆಎಸ್‌ಎಸ್ ಸಮೂಹ ಸಂಸ್ಥೆ ಮುಖ್ಯಸ್ಥರಾದ ಶ್ರೀಹರಿ ದ್ವಾರಕಾನಾಥ್, ಪಬ್ಲಿಕ್ ವಾಯ್ಸ್ ಮುಖ್ಯಸ್ಥ ರಾಜು ಕಾರ್ಯ, ಅಭಿನಂದಿತರು : ಅಂತರರಾಷ್ಟ್ರೀಯ ಬ್ಯಾಸ್ಕೆಟ್ ಬಾಲ್ ಕ್ರೀಡಾಪಟು ಕಲಿಯಂಡ ಡಾ. ರೇಷ್ಮಾ ಚೆಂಗಪ್ಪ, ಕ್ರೀಡಾ ವರದಿಗಾರ ಗಿರೀಶ್ ದೊಡ್ಡಮನಿ, ಸ್ಥಳ: ಓವಲ್ ಮೈದಾನ, ಕ್ರಾಫರ್ಡ್ ಹಾಲ್ ಎದುರು, ಮಧ್ಯಾಹ್ನ 3.30ಕ್ಕೆ.

■ **ಪರಮಹಂಸ** : ಕುಂಡಲಿನಿ ಶಕ್ತಿಯ ಜಾಗೃತಿಯಿಂದ ಆತ್ಮದ ಬೆಳಕು ಕಾಣುವ ದಿವ್ಯೋಪನ್ಯಾಸ ಮತ್ತು ಅಂತರ ಶಾಲಾ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಸಮಾರಂಭ, ಉಪಸ್ಥಿತರು : ಶಾಸಕ ಟಿ.ಎಸ್. ಶ್ರೀವತ್ಸ, ಜಿಲ್ಲಾ ಆಯುಷ್ ಅಧಿಕಾರಿ ಡಾ. ಸಿ. ರೇಣುಕಾದೇವಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಡಾ. ಎಸ್.ಪಿ. ಯೋಗಣ್ಣ, ಎಂ.ಬಿ. ಶ್ರೀಕಂಠಸ್ವಾಮಿ, ಶಿವಪ್ರಕಾಶ್ ಗುರೂಜಿ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ನಾಗನವ ಕಲಾ ಸಾಹಿತ್ಯ ವೇದಿಕೆ** : ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಉದ್ಘಾಟನೆ : ಜೆಸಿಇ ಕಾಲೇಜು ಕನ್ನಡ ಪ್ರಾಧ್ಯಾಪಕ ಪ್ರೊ. ಅಂಬಿಕಾ ಶಿವನಂಜಪ್ಪ, ಮುಖ್ಯ ಅತಿಥಿಗಳು : ಹಿರಿಯ ಸಮಾಜ ಸೇವಕ ಡಾ. ರಘುರಾಮ್ ವಾಜಪೇಯಿ, ಅಧ್ಯಕ್ಷತೆ : ನಾಗನವ ಕಲಾ ಸಾಹಿತ್ಯ ವೇದಿಕೆ ಗೌರವಾಧ್ಯಕ್ಷೆ ಶ್ರೀಮತಿ ಎ. ಹೇಮಗಂಗಾ, ಉಪಸ್ಥಿತರು : ವೇದಿಕೆ ಅಧ್ಯಕ್ಷ ಹೊಮ್ಮ ಮಂಜುನಾಥ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಮತ್ತು ಜಿಲ್ಲಾ ಘಟಕ, ಕದಳಿ ಮಹಿಳಾ ವೇದಿಕೆ** : ಬೆಳಗ್ಗೆ 10.30ಕ್ಕೆ ರಜತ ಮಹೋತ್ಸವ ಹಾಗೂ ಕದಳಿಶ್ರೀ ಪ್ರಶಸ್ತಿ ಪ್ರದಾನ, ಸಾನ್ನಿಧ್ಯ : ಸುತ್ತೂರು ಶ್ರೀ ದೇಶಿಕೇಂದ್ರ ಸ್ವಾಮೀಜಿ, ಶ್ರೀ ತೋಂಟದ ಸಿದ್ದರಾಮ ಸ್ವಾಮೀಜಿ, ಉದ್ಘಾಟನೆ : ಮಾಜಿ ಸಚಿವೆ ಡಾ. ಲೀಲಾದೇವಿ ಆರ್. ಪ್ರಸಾದ್, ಕೃತಿ ಲೋಕಾರ್ಪಣೆ : ನಾಡೋಜ ಗೊ.ರು. ಚನ್ನಬಸಪ್ಪ, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಿ. ಸೋಮಶೇಖರ, ಕದಳಿಶ್ರೀ ಪ್ರಶಸ್ತಿ ಪುರಸ್ಕಾರ : ಡಾ. ವಿಜಯಲಕ್ಷ್ಮಿ ದೇಶಮಾನೆ, ಬೆಳದಿಂಗಳು ಸವಿಸಂಚಿಕೆ ಬಿಡುಗಡೆ: ಚಲನಚಿತ್ರ ನಟಿ ಶ್ರೀಮತಿ ಮಾಳವಿಕ ಅವಿನಾಶ್, ಉಪಸ್ಥಿತರು : ಡಾ. ಹೆಳವರಹುಂಡಿ ಸಿದ್ದಪ್ಪ, ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ; ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ : ಶ್ರೀ ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವಾ, ಸಮಾರೋಪ ನುಡಿ : ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್, ಶ್ರೀಮತಿ ಛಾಯಾ ನಂಜಪ್ಪ, ಡಾ.ಉಷಾ ಹೆಗ್ಡೆ, ಸ್ಥಳ: ಕರ್ನಾಟಕ ಕಲಾಮಂದಿರ.

■ **ಮೈಸೂರು ರತ್ನ ಸಾಂಸ್ಕೃತಿಕ ಪ್ರತಿಷ್ಠಾನ** : ಕೃತಿ ಲೋಕಾರ್ಪಣೆ, ಸನ್ಮಾನ, ಸಂವಾದ, ಸಾನ್ನಿಧ್ಯ : ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಕೃತಿ ಕುರಿತು : ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜ್, ಮುಖ್ಯ ಅತಿಥಿಗಳು : ಪ್ರಸನ್ನ, ಡಾ. ಎಸ್. ಶ್ರೀಕಾಂತ್, ಅಧ್ಯಕ್ಷತೆ : ಹರಿಹರ ಆನಂದಸ್ವಾಮಿ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಹಿಮಾಲಯ ಪ್ರತಿಷ್ಠಾನ, ಪರಮಹಂಸ ಯೋಗ ಮಹಾವಿದ್ಯಾಲಯ** : ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರ ಸ್ವಾಮೀಜಿ ಅವರ ಜಯಂತ್ಸತ್ಸವ, ಉದ್ಘಾಟನೆ : ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಕೆ.ಜಿ. ದೇವರಾಜ್, ಪುಷ್ಪಾರ್ಚನೆ : ಹಿರಿಯ ಸಂಸ್ಕೃತ ವಿದುಷಿ ಡಾ. ಕೆ. ಲೀಲಾಪ್ರಕಾಶ್, ಅಧ್ಯಕ್ಷತೆ : ಪರಮಹಂಸ ಯೋಗ ಮಹಾವಿದ್ಯಾಲಯ ಸಂಸ್ಥಾಪಕ ಶಿವಪ್ರಕಾಶ್ ಗುರೂಜಿ, ಮುಖ್ಯ ಅತಿಥಿಗಳು : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ ಕಾರ್ಯದರ್ಶಿ ಕೆಂಪಲಿಂಗರಾಜು, ಬಿ. ಶಾಂತಾರಾಂ, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ, ಸಂಜೆ 5.30ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ** : ಪೂಜ್ಯ ಸ್ವಾಮಿ ದಿವ್ಯಾನಂದಜೀ ಮಹಾರಾಜ್ ಅವರಿಂದ ಆಶೀರ್ವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ** : ಡಾ. ವಸುಂಧರಾ ದೊರೆಸ್ವಾಮಿಯವರ ಶಿಷ್ಯಂದಿರಿಂದ ಸನ್ಮಾರ್ಗ ವಸುಂಧರ ಬಾನಿ ಶೈಲಿಯಲ್ಲಿ ಭರತನಾಟ್ಯ ಕಾರ್ಯಕ್ರಮ, ಉಪಸ್ಥಿತರು : ವಿದುಷಿ ಡಾ. ಲಕ್ಷ್ಮೀರೇಖಾ ಅರುಣ್, ವಿದುಷಿ ವಿಭಾ ಗಿರೀಶ್, ವಿದುಷಿ ಶ್ರೀಲಕ್ಷ್ಮೀ, ವಿದುಷಿ ಸೌಂದರ್ಯ ಎಸ್. ಪನಪಿಲ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್** : ವೈ.ಎನ್. ಅನಂತ್ ಸಂಸ್ಮರಣಾ ಸಂಗೀತ ಕಛೇರಿ, ವಿದ್ವಾನ್ ಪಟ್ಟಾಭಿರಾಮ ಪಂಡಿತ್ ಅವರಿಂದ ಗಾಯನ, ವಿದ್ವಾನ್ ಹೆಚ್.ಎನ್. ಭಾಸ್ಕರ್–ಪಿಟೀಲು, ವಿದ್ವಾನ್ ಕೆ.ಯು. ಜಯಚಂದ್ರರಾವ್–ಮೃದಂಗ, ವಿದ್ವಾನ್ ಓಂಕಾರ್‌ರಾವ್–ಘಟಂ, ಸ್ಥಳ: ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯ ಭವನ, ನಾದಬ್ರಹ್ಮ ಸಂಗೀತ ಸಭಾ, ಸಂಜೆ 6 ರಿಂದ.

■ **ತರಂಗಂ ಟ್ರಸ್ಟ್** : 'ತರಂಗಂ ನಾಟಕೋತ್ಸವ', ಉಪಸ್ಥಿತರು : ಸಾಹಿತಿ ನಾ.ನಾಗಚಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಾಪಕರಾದ ಎಚ್.ಆರ್.ಪವಿತ್ರ, ಸಾಮಾಜಿಕ ಹೋರಾಟಗಾರ್ತಿ ಸವಿತ ಪ.ಮಲ್ಲೇಶ್, ಸನ್ಮಾನ : ಹಿರಿಯ ರಂಗಕರ್ಮಿ ಪ್ರೊ.ಹೆಚ್.ಎಸ್.ಉಮೇಶ್, ರಂಗಭೂಮಿ ಛಾಯಾಗ್ರಾಹಕ ಶ್ರೀನಿವಾಸ್ ಪಾಲಹಳ್ಳಿ, ಯುವ ರಂಗನಿರ್ದೇಶಕ ಕಿರಣ್ ಗಿರ್ಗಿ, ಸಂಜೆ 7ಕ್ಕೆ ಸಂಚಲನ ಮೈಸೂರು ತಂಡದ ಕಲಾವಿದರಿಂದ 'ಹರಕೆಯ ಕುರಿ' ನಾಟಕ ಪ್ರದರ್ಶನ, ನಿರ್ದೇಶನ : ಡಾ. ಚಂದ್ರಶೇಖರ ಕಂಬಾರ, ಸ್ಥಳ: ಕಿರುರಂಗ ಮಂದಿರ, ಜು.27ರಂದು ಸಂಜೆ 6.30ಕ್ಕೆ

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ)** : ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರಿಂದ ಪ್ರವಚನ, ವಾಚನ : ವಿಶ್ರಾಂತ ಕಾರ್ಯಪಾಲಕ ಅಭಿಯಂತರ ಗಮಕ ವಿದ್ವಾನ್ ಕೃ ರಾಮಚಂದ್ರ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ರಂಗಾಯಣ** : ಸಿಜಿಕೆ ನೆನಪಿನ ಗ್ರೀಷ್ಮ ರಂಗೋತ್ಸವ, ಮೈಸೂರಿನ ಅಭಿಯಂತರರು ತಂಡದಿಂದ ಕಳಸೂತ್ರ ನಾಟಕ ಪ್ರದರ್ಶನ, ರಚನೆ : ಅನಿಕೇತ ಬೋಲೆ, ನಿರ್ದೇಶನ : ಹೆಚ್.ಎಸ್. ಸುರೇಶ್‌ಬಾಬು, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ಮೈಸೂರು ವಿಜ್ಞಾನ ನಾಟಕೋತ್ಸವ ಟ್ರಸ್ಟ್, ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ ಮತ್ತು ಎಸ್‌ವಿವೈಎಂ**: 8ನೇ ಮೈಸೂರು ವಿಜ್ಞಾನ ನಾಟಕೋತ್ಸವ, ಸಂಜೆ 5 ರಿಂದ ಆಕಸ್ಮಿಕ ವಿಜ್ಞಾನ : ರಸಪ್ರಶ್ನೆ, ಲೇಖಕ ಡಾ. ಬರ್ಟಿ ಆಲ್ಲಿ ಅವರಿಂದ, ಬಿ.ಎಸ್. ಕೃಷ್ಣಮೂರ್ತಿ ಅವರಿಂದ ಗಣಿತ ಕುಣಿತ, ಸಂಜೆ 6.30ಕ್ಕೆ ಪರಿವರ್ತನ ರಂಗ ಸಮಾಜ ತಂಡದಿಂದ ಮೂರನೇ ಕಿವಿ ನಾಟಕ ಪ್ರದರ್ಶನ, ರಚನೆ : ರವೀಂದ್ರ ಭಟ್ ಕಥನದಿಂದ ಅಳವಡಿಕೆ, ನಿರ್ದೇಶನ : ಪ್ರೊ. ಎಸ್.ಆರ್. ರಮೇಶ್, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ – ಡಾ.ವರದರಾಜ ಚಂದ್ರಗಿರಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವಪಾಟೀಲ್, ಜಯಂತಿ.ವಿ.ಭಟ್, ವ್ಯಾಖ್ಯಾನ–ಪ್ರೊ.ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.05 ಸರ್ಕೋಮ– ಜಾಗೃತಿ ಕುರಿತ ಪ್ರಾಯೋಜಿತ ಕಾರ್ಯಕ್ರಮ, 9.40 ನಮ್ಮ ಆರೋಗ್ಯ– ವಿಶ್ವಹೆಪಟೈಟಿಸ್ ದಿನಾಚರಣೆಯ ಸಂಬಂಧವಾಗಿ ಹೆಪಟೈಟಿಸ್ ವಿಧಗಳು ಲಕ್ಷಣಗಳು ಮತ್ತು ಚಿಕಿತ್ಸೆ ಈ ಕುರಿತು ಮೈಸೂರಿನ ಜೆ.ಎಸ್.ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಅಣುಜೀವಿ ಶಾಸ್ತ್ರಜ್ಞರಾಗಿದ್ದ ಡಾ.ಮಾಧುರಿ ಕುಲಕರ್ಣಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಆಕ್ಸ್‌ಫರ್ಡ್ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 KRISH TRISH and Balty boy ನಾವು ಭಾರತೀಯರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.55 ಮನ್ ಕೀ ಬಾತ್– ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತು

ಮಧ್ಯಾಹ್ನ: 12.00 ವನಿತಾ ವಿಹಾರ, 12.35 ದೇವರನಾಮ : ರಕ್ಷಣಾ. ಆರ್., 12.45 ಜನಪದ ಸಂಗೀತ :ಎಂ.ಸುಮಿತ್ರ ಮತ್ತು ಸಂಗಡಿಗರಿಂದ ಗೀಜಗನ ಹಾಡು ಹಾಗೂ ಭಜನೆ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ – ನೀಲಿಕ್ರಾಂತಿ ಕುರಿತು ಮಾಹಿತಿ ನೀಡುತ್ತಾರೆ ಡಾ.ಚೇತನ್, 1.20 ಭಾವಗೀತೆಗಳು–ಸಾಯಿ ತೇಜಸ್ ಚಂದ್ರಶೇಖರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ. ಭಾಗವಹಿಸುತ್ತಾರೆ: ಖ್ಯಾತ ನಿರ್ದೇಶಕ ಮಹೇಶ್ ಬಾಬು, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ ಹಾಗೂ ಶ್ರೀಮಾನ್ ಎಸ್., 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ : ಕೆ.ಎಸ್.ಹೇರಂಭ ಹಾಗೂ ಕೆ.ಎಸ್.ಹೇಮಂತ–ಯುಗಳ ವೇಣುವಾದನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಟಿ.ವಿ. ವಿದ್ಯಾಶಂಕರ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತು ಕಾರ್ಯಕ್ರಮದ ಕನ್ನಡ ಅವತರಣಿಕೆಯ ಮರುಪ್ರಸಾರ, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಚಿನ್ನಯ್ಯ, 9.30 ರಾಷ್ಟ್ರೀಯ ವಿಜ್ಞಾನ ಸಂಚಿಕೆ, 10.00 ರವಿವಾಸರೀಯ ಅಖಿಲ ಭಾರತ ಸಂಗೀತ ಸಭಾ–ಶಿಲ್ಪಾ ಮಿಶ್ರ–ಠುಮ್ರಿ, ದಾದ್ರ ಗಾಯನ

ಖ್ಯಾತ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪರಿಗೆ ಭಾರತದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಅತ್ಯುನ್ನತ ಗೌರವ

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮತ್ತೊಂದು ಗರಿ



ಪ್ರೊ.ಕೆ.ಎಸ್.ರಂಗಪ್ಪ

ಮೈಸೂರು,ಜು.26(ಪಿಎಂ)– ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್, ಇಂಡಿಯಾ (ಎನ್‌ಎಎಸ್‌ಐ/ ಭಾರತದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ) ಕೊಡಮಾಡುವ 'ಎನ್‌ಎಎಸ್‌ಐ ಡಿಸ್ಟಿಂಗ್ವಿಶ್ಡ್ ಚೇರ್ ಪ್ರೊಫೆಸರ್' ಅತ್ಯುನ್ನತ ಗೌರವಕ್ಕೆ ಮೈಸೂರು ವಿವಿ ವಿಶ್ರಾಂತ ಕುಲಪತಿಗಳೂ ಆದ ಖ್ಯಾತ ವಿಜ್ಞಾನಿ ಪ್ರೊ.ಕೆ. ಎಸ್.ರಂಗಪ್ಪ ಭಾಜನರಾಗಿದ್ದಾರೆ. ಆ ಮೂಲಕ ಅವರು ತಾವು ಸೇವೆ ಸಲ್ಲಿಸಿದ ಮೈಸೂರು ವಿವಿಗೂ ಬಹುದೊಡ್ಡ ಗೌರವ ತಂದಿದ್ದಾರೆ.

ಶತಮಾನದಷ್ಟು ಇತಿಹಾಸ ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರೂ ಆದ ಪ್ರೊ.ಕೆ. ಎಸ್.ರಂಗಪ್ಪ ಅವರಿಗೆ ಈ ಗೌರವ ಸಂದಿದ್ದು, ಇದು ಮೈಸೂರು ವಿವಿಗೂ ಮಹತ್ವದ ಮೈಲಿಗಲ್ಲು ಎನ್ನಬಹುದಾಗಿದೆ. ಇದು ಮೈಸೂರು ವಿವಿಯ ಇತಿಹಾಸದಲ್ಲಿ ಬಹಳ ಕಾಲ ದಾಖಲಾಗುವ ಪ್ರಮುಖ ಸಾಧನೆಯಾಗಿದೆ.

ಎನ್‌ಎಎಸ್‌ಐ (ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್ ಇಂಡಿಯಾ, ಭಾರತದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ) ಭಾರತದ ಮೊದಲ ವಿಜ್ಞಾನ ಅಕಾಡೆಮಿಯಾಗಿದ್ದು, ಇದನ್ನು 1930ರಲ್ಲಿ ಸ್ಥಾಪಿಸಲಾಯಿತು. ಭಾರತೀಯ ವಿಜ್ಞಾನಿಗಳು ನಡೆಸಿದ ಸಂಶೋಧನಾ ಕಾರ್ಯಗಳ ಪ್ರಕಟಣೆಗೆ ರಾಷ್ಟ್ರೀಯ ವೇದಿಕೆಯನ್ನು ಒದಗಿಸುವುದು ಮತ್ತು ಅವರ ನಡುವೆ ಅಭಿಪ್ರಾಯಗಳ ವಿನಿಮಯಕ್ಕೆ ಅವಕಾಶಗಳನ್ನು ಒದಗಿಸುವುದು ಇದರ ಉದ್ದೇಶ.

ಎನ್‌ಎಎಸ್‌ಐ ಅನ್ನು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (ಡಿಎಸ್‌ಟಿ) ಆರ್ಥಿಕವಾಗಿ ಬೆಂಬಲಿಸುತ್ತದೆ ಮತ್ತು ಭಾರತ ಸರ್ಕಾರದ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಇಲಾಖೆ (ಡಿಎಸ್‌ಐಆರ್)ಯಿಂದ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆಯಾಗಿಯೂ ಗುರುತಿಸಲ್ಪಟ್ಟಿದೆ.

ನಿವೃತ್ತ ಪ್ರಾಧ್ಯಾಪಕರ ಜೀವಿತಾವಧಿಯ ಸಾಧನೆಗಳು ಹಾಗೂ ವಿಜ್ಞಾನಕ್ಕೆ ಅವರು ನೀಡಿದ ಮಹತ್ವದ ಕೊಡುಗೆಗಳನ್ನು ಪರಿಗಣಿಸಿ ಅವರನ್ನು ಗೌರವಿಸಲು ಎನ್‌ಎಎಸ್‌ಐನಿಂದ 2025ರಲ್ಲಿ 'ಎನ್‌ಎಎಸ್‌ಐ ಡಿಸ್ಟಿಂಗ್ವಿಶ್ಡ್ ಚೇರ್ ಪ್ರೊಫೆಸರ್' ಎಂದು ಹೆಸರಿಸಲಾದ 10 ಪೀಠಗಳನ್ನು ಸ್ಥಾಪಿಸಲಾಯಿತು. ಪ್ರತಿಯೊಂದು ಪೀಠವು ಈ ಕ್ಷೇತ್ರಗಳಲ್ಲಿ ಜ್ಞಾನವನ್ನು ಮುಂದುವರೆಸಲು ಶ್ರೇಷ್ಠತೆ ಮತ್ತು ಸಮರ್ಪಣೆಯ ಪ್ರತಿಷ್ಠಿತ ಸ್ವೀಕೃತಿಯನ್ನು ಪ್ರತಿನಿಧಿಸುತ್ತವೆ. ಆಯ್ಕೆ ಮಾನದಂಡಗಳ ಪ್ರಕಾರ ಯಾವುದೇ ವರ್ಷದಲ್ಲಿ ಮೂರಕ್ಕಿಂತ ಹೆಚ್ಚು ಜನರನ್ನು ಆಯ್ಕೆ ಮಾಡುವುದಿಲ್ಲ ಮತ್ತು ಯಾವುದೇ ಕಾಲಘಟ್ಟದಲ್ಲಿ ಇಡೀ ದೇಶದಲ್ಲಿ 10 ಜನಕ್ಕಿಂತ ಹೆಚ್ಚು ಎನ್‌ಎಎಸ್‌ಐ ಡಿಸ್ಟಿಂಗ್ವಿಶ್ಡ್ ಚೇರ್ ಪ್ರೊಫೆಸರ್‌ಗಳು ಇರುವುದಿಲ್ಲ.

ವೃತ್ತಿಜೀವನ ಮತ್ತು ಮಹತ್ವದ ಸಂಶೋಧನಾ ಕೊಡುಗೆಗಳನ್ನು ಪರಿಗಣಿಸಿ ಈ ಮನ್ನಣೆಗೆ ಪ್ರೊ.ರಂಗಪ್ಪರನ್ನು ಆಯ್ಕೆ ಮಾಡಿರುವುದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೀಡಲಾದ ಶ್ರೇಷ್ಠ ಗೌರವಗಳಲ್ಲಿ ಒಂದಾಗಿದೆ. ಈ ಪ್ರಾಧ್ಯಾಪಕ ಹುದ್ದೆಯು ಪ್ರೊ.ರಂಗಪ್ಪ ಅವರಿಗೆ ಆರಂಭದಲ್ಲಿ ಮೂರು ವರ್ಷಗಳ ಕಾಲ ಸಂಶೋಧನೆ ನಡೆಸಲು ಅನುವು ಮಾಡಿಕೊಡುತ್ತದೆ ಮತ್ತು ಅದನ್ನು ಇನ್ನು ಎರಡು ವರ್ಷಗಳ ಕಾಲ ವಿಸ್ತರಿಸುವ ಸಾಧ್ಯತೆಯೂ ಇರಲಿದೆ. ಉದಾರ ಅನುದಾನಗಳೊಂದಿಗೆ ಈ ಸ್ಥಾನ ಅಲಂಕರಿಸಿದವರ ಸಂಶೋಧನೆಗಳಿಗೆ ಉತ್ತೇಜನ ನೀಡಲಾಗುತ್ತದೆ.

ಇದರ ಹೊರತಾಗಿ ಇತ್ತೀಚೆಗೆ ಪ್ರೊ.ರಂಗಪ್ಪ ಅವರನ್ನು ಯುನೆಸ್ಕೋದ ವಿಶ್ವ ವಿಜ್ಞಾನ ಅಕಾಡೆಮಿ (ಟಿಡಬ್ಲ್ಯೂಎಎಸ್)ನ ಫೆಲೋ ಆಗಿ ಆಯ್ಕೆ ಆಗಿದ್ದನ್ನು ಸ್ಮರಿಸಬಹುದು. ಈ ಸಾಧನೆ ಮಾಡಿದ ಭಾರತೀಯರು ವಿರಳ. 2025ರ ಸೆಪ್ಟೆಂಬರ್ 29ರಿಂದ ಅಕ್ಟೋಬರ್ 2ರವರೆಗೆ ಬ್ರೆಜಿಲ್‌ನಲ್ಲಿ ನಡೆಯಲಿರುವ ಟಿಡಬ್ಲ್ಯೂಎಎಸ್ ಸಾಮಾನ್ಯ ಸಮ್ಮೇಳನದಲ್ಲಿ ಭಾಗವಹಿಸಲು ಪ್ರೊ.ರಂಗಪ್ಪ ಅವರನ್ನು ಆಹ್ವಾನಿಸಲಾಗಿದೆ. ಪ್ರೊ. ರಂಗಪ್ಪನವರು ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ವಿಜಯ ವಿಠಲ ಶಾಲೆಯಲ್ಲಿ 'ಕಾರ್ಗಿಲ್ ವಿಜಯ ದಿನ'



ಮೈಸೂರಿನ ವಿಜಯ ವಿಠಲ ವಿದ್ಯಾಶಾಲೆಯಲ್ಲಿ ಕಾರ್ಗಿಲ್ ವಿಜಯ ದಿನವನ್ನು ಆಚರಿಸಲಾಯಿತು.

ಮೈಸೂರು, ಜು.26– ಮೈಸೂರಿನ ವಿಜಯ ವಿಠಲ ವಿದ್ಯಾಶಾಲೆಯಲ್ಲಿ ಶನಿವಾರ 'ಕಾರ್ಗಿಲ್ ವಿಜಯ ದಿನ'ವನ್ನು ಆಚರಿಸಲಾಯಿತು.

ಹುತಾತ್ಮ ಯೋಧರಿಗೆ ಗೌರವ ನಮನ ಸಲ್ಲಿಸುವುದರೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ 'ಏ ಮೇರೆ ವತನ್ ಕೆ ಲೋಗೋನ್...' ದೇಶಭಕ್ತಿ ಗೀತೆಯನ್ನು ಭಕ್ತಿಪೂರ್ವಕವಾಗಿ ಪ್ರಸ್ತುತಪಡಿಸಲಾಯಿತು. ಇದೇ ವೇಳೆ ಹುತಾತ್ಮ ಸಿಪಾಯಿ ಎನ್.ಸುಂದ್ರ ಅವರ ಹೆಮ್ಮೆಯ ಪೋಷಕರಾದ ನಾಗೇಶ್ ಹಾಗೂ ಶ್ರೀಮತಿ ಮಹಾದೇವಿ ಅವರನ್ನು, ಗೌರವಿಸಲಾಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನಿವೃತ್ತ ಕರ್ನಲ್ ರವಿ ಅವರು ಕಾರ್ಗಿಲ್ ಯುದ್ಧದ ಅನುಭವಗಳನ್ನು ಹಂಚಿಕೊಂಡರು.

ವಿಜಯ ವಿಠಲ ವಿದ್ಯಾಸಂಸ್ಥೆಗಳ ಗೌರವ ಕಾರ್ಯದರ್ಶಿ ಸಿ.ಎ.ವಿಶ್ವನಾಥ್ ಮಾತನಾಡಿ, ಭಾರತದ ಸಾರ್ವಭೌಮತ್ವದ ರಕ್ಷಣೆಗೆ ತಮ್ಮ ಪ್ರಾಣವನ್ನೇ ಸಮರ್ಪಿಸಿದ ವೀರ ಸೈನಿಕರ ತ್ಯಾಗ–ಬಲಿದಾನವನ್ನು ಸದಾ ಸ್ಮರಿಸಿಕೊಳ್ಳಬೇಕು. ಯುವ ಮನಸ್ಸುಗಳಲ್ಲಿ ದೇಶಭಕ್ತಿ ಅಚಲವಾಗಿರಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಜಯ ವಿಠಲ ವಿದ್ಯಾ ಸಂಸ್ಥೆಗಳ ಅಧ್ಯಕ್ಷ ಆರ್.ವಾಸುದೇವ್ ಭಟ್, ಪ್ರಾಂಶುಪಾಲೆ ಶ್ರೀಮತಿ ಎಸ್.ಎ.ವೀಣಾ, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನಾಲ್ವಡಿಯವರಿಗೆ ತಂದೆಯ ಸಾಧನೆ ಸರಿಗಟ್ಟಿದ ಯತೀಂದ್ರ ಹೇಳಿಕೆಗೆ ಕಟುಟೀಕೆ

ಮುಖ್ಯಮಂತ್ರಿಯಾಗಿ 10 ವರ್ಷ ಪೂರೈಸಿದರೆ ಚಾಮುಂಡೇಶ್ವರಿಗೂ ಮೇಲು ಅಂದುಕೊಳ್ಳಬಹುದು!

ಮಾಜಿ ಸಂಸದ ಪ್ರತಾಪ್ ಸಿಂಹ ವ್ಯಂಗ್ಯ



ಮೈಸೂರು, ಜು.26– ಸಿದ್ದರಾಮಯ್ಯನವರು ಈ ಹಿಂದೆ ದೇವರಾಜ ಅರಸು ಅವರಿಗಿಂತ ದೊಡ್ಡವ ಎಂದಿದ್ದರು. ಈಗ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗಿಂತ ದೊಡ್ಡವರಾಗಿದ್ದಾರೆ. ಇನ್ನು ಮುಖ್ಯಮಂತ್ರಿಯಾಗಿ 10 ವರ್ಷ ಪೂರೈಸಿದರೆ ನಾಡದೇವತೆ ಚಾಮುಂಡೇಶ್ವರಿಗಿಂತ ನಾನೇ ದೊಡ್ಡವನು ಎಂದು ಹೇಳಿಕೊಳ್ಳುತ್ತಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಟೀಕಿಸಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಮನಾಗಿ ಇಲ್ಲವೇ ಅವರಿಗಿಂತ ಹೆಚ್ಚು ಅಭಿವೃದ್ಧಿ ಕಾರ್ಯಗಳಿಗೆ ಸಿದ್ದರಾಮಯ್ಯನವರು ಅನುದಾನ ನೀಡಿದ್ದಾರೆ ಎಂಬ ಡಾ.ಯತೀಂದ್ರ ಹೇಳಿಕೆ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಅವರು, ಸಿದ್ದರಾಮಯ್ಯನವರ ಸರ್ಕಾರದ ಅನಧಿಕೃತ ವರ್ಗಾವಣೆ ಖಾತೆಯ ಸಚಿವರಾಗಿರುವ ಯತೀಂದ್ರ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗಿಂತ ತಮ್ಮ ತಂದೆಯವರಾದ ಸಿದ್ದರಾಮಯ್ಯನವರೇ ದೊಡ್ಡವರು, ಇನ್ನೂ ಜಾಸ್ತಿ ಕೊಡುಗೆ ನೀಡಿದ್ದಾರೆ ಎಂದು ಹೇಳಿಕೆ ನೀಡಿದ್ದಾರೆ. ಈ ಹಿಂದೆ ನಾನು ಇನ್ನೊಬ್ಬ ದೇವರಾಜ ಅರಸು ಎಂದಿದ್ದ ಸಿದ್ದರಾಮಯ್ಯನವರು ಬರಬರುತ್ತಾ ಅವರಿಗಿಂತ ನಾನೇ ದೊಡ್ಡವನು ಎಂದರು. ಇನ್ನೇನಾದರೂ ಹತ್ತು ವರ್ಷ ಅಧಿಕಾರ ಪೂರ್ಣಗೊಳಿಸಿದರೆ ನಾಡದೇವಿ ಚಾಮುಂಡೇಶ್ವರಿಗಿಂತ ನಾನೇ ದೊಡ್ಡವನು ಎಂದರೂ ಆಶ್ಚರ್ಯವಿಲ್ಲ ಎಂದಿದ್ದಾರೆ.

ಯತೀಂದ್ರ ಅವರ ಬಾಯಿಂದ ಬಂದಿರುವ ಮನದಾಳದ ಮಾತು ಮಾತ್ರವಲ್ಲ. ಸಿದ್ದರಾಮಯ್ಯ ಅವರ ಈ ಹಿಂದಿನ ನಡೆ ಹಾಗೂ ಮಾತುಗಳನ್ನು ಗಮನಿಸಿದರೆ ಸಿದ್ದರಾಮಯ್ಯರ ಅಂತರಾಳದ ಭಾವನೆಯೂ ಕೂಡ ಇದೇ ಆಗಿದೆ ಎಂಬುದು ಸ್ಪಷ್ಟ. ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ದೇವರಾಜ ಮಾರುಕಟ್ಟೆ ಸಂರಕ್ಷಣೆಗೆ ಕೆಲವರು ಒತ್ತಾಯಿಸಿದ್ದಾಗ ಮಹಾರಾಜ ಮನೆಯಿಂದ ದುಡ್ಡು ತಂದು ಕಟ್ಟಿದರಾ ಎಂದು ಏಕವಚನದಲ್ಲಿ ಪ್ರಶ್ನಿಸಿದ್ದರು. ನಂತರದಲ್ಲಿ ಮಹಾರಾಜರ ಪದಚ್ಯುತಗೊಳಿಸಿ ಅಧಿಕಾರ ನಡೆಸಿದ ಟಿಪ್ಪುಸುಲ್ತಾನ್ ಜಯಂತಿ ಆಚರಿಸಿದರು. ಸಿದ್ದರಾಮಯ್ಯನವರಿಗೆ ಮಹಾರಾಜರು ಹಾಗೂ ಅವರ ಕುಟುಂಬದವರ ಬಗ್ಗೆ ಅಪಾರವಾದ ದ್ವೇಷ ಹಾಗೂ ಅಪಥ್ಯದ ಭಾವನೆ ಇದೆ ಎನ್ನುವುದಕ್ಕೆ ಆ ಎರಡೂ ಘಟನೆಗಳೇ ನಿದರ್ಶನವಾಗಿವೆ ಎಂದರು.

ಯತೀಂದ್ರ, ನೀವು ವೈದ್ಯಕೀಯ ಪದವೀಧರರಾಗಿದ್ದೀರಿ. ನಿಮ್ಮಪ್ಪ ಎಂಟ್ರೀ ಮಾಡಿದ್ದಾರೆ. ಮೈಸೂರಿಗೆ ಏನು ಕೊಡುಗೆ ಕೊಟ್ಟಿದ್ದಾರೆ ಹೇಳಿ. ಮೊದಲ ಅವಧಿಯಲ್ಲಿ ಶ್ರೀನಿವಾಸ ಪ್ರಸಾದ್ ಅವರು ಇಲ್ಲಿನ ಉಸ್ತುವಾರಿ ಸಚಿವರಾಗಿದ್ದ ಕಾರಣಕ್ಕಾಗಿ ಹೊಸ ಡಿಸಿ ಕಚೇರಿ, ವಾಸು ಅವರು ಶಾಸಕರಾಗಿದ್ದಾಗ ಮಹಾರಾಣಿ ಕಾಮರ್ಸ್ ಕಾಲೇಜಿಗೆ ಹೊಸ ಕಟ್ಟಡ ಬಂತು. ಈ ಹಿಂದೆ ಯಡಿಯೂರಪ್ಪನವರು ಮೈಸೂರಿಗೆ ಜಯದೇವ ಆಸ್ಪತ್ರೆ ಮಂಜೂರು ಮಾಡಿದರು. ರಾಮದಾಸ್ ಅವರು ಪ್ರಯತ್ನ ಮಾಡಿದರು. ಶಂಕರಲಿಂಗೇಗೌಡರು ಜಾಗ ಗುರುತಿಸಿದರು. ಅಲ್ಲಿ ಕಟ್ಟಡ ಕಟ್ಟಲು ನಿಮ್ಮಪ್ಪ 180 ಕೋಟಿ ಕೊಟ್ಟರು. ಅಲ್ಲೇ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಖಾಲಿ ಬಿಲ್ಡಿಂಗ್ ಕಟ್ಟಲು 127 ಕೋಟಿ ಕೊಟ್ಟಿದ್ದನ್ನು ಬಿಟ್ಟರೆ ಇನ್ನೇನು ಕೊಡುಗೆ ಕೊಟ್ಟಿದ್ದಾರೆ.

ಮಹಾರಾಜರು ಕಟ್ಟಿದ ಕೆ.ಆರ್.ಆಸ್ಪತ್ರೆಗೆ ಸುಣ್ಣಬಣ್ಣ ಹೊಡೆಸಲು ಆಗಿಲ್ಲ. ಶತಮಾನೋತ್ಸವ ಆಚರಿಸಿಕೊಂಡ ಮೈಸೂರು ಮೆಡಿಕಲ್ ಕಾಲೇಜಿಗೆ ನೂರು ರೂಪಾಯಿಯನ್ನೂ ಕೊಡಲಿಲ್ಲ. ಮಹಾರಾಜರ ಸಂಸ್ಥಾನದಲ್ಲಿ ಯಾರಾದರೂ ನಿಧನರಾದರೆ ಗೌರವಯುತವಾಗಿ ಅಂತ್ಯಸಂಸ್ಕಾರ ಮಾಡಲು ಸುಸಜ್ಜಿತ ಶವಾಗಾರ ಕಟ್ಟಿದರು. ಆದರೆ ಈಗ ಡೆತ್ ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೂ ಹಣ ಹೆಚ್ಚಿಸಿದರು. ಮೈಸೂರು ಮಹಾರಾಜರು ಕಟ್ಟಿಸಿದ ವಿವಿಯಲ್ಲಿ ನಿಮ್ಮಪ್ಪ ಓದಿದರು. ಆದರೆ ಒಂದು ಶಾಲೆ ಅಥವಾ ಕಾಲೇಜು ಕಟ್ಟಿಸಿಲ್ಲ. ನಾಲ್ವಡಿ ಅವರು ನಾಡನ್ನು ಬೆಳಗುವ ಕೆಲಸ ಮಾಡಿದರೆ ನಿಮ್ಮ ತಂದೆ ಕತ್ತಲು ಮೂಡಿಸುವ ಎಲ್ಲಾ ಕೆಲಸಗಳನ್ನೂ ಮಾಡುತ್ತಿದ್ದಾರೆ ಎಂದು ಟೀಕಾ ಪ್ರಹಾರ ನಡೆಸಿದ್ದಾರೆ.

ರಾಜ್ಯದಲ್ಲಿ ಎಂಥಹ ಮನಃಸ್ಥಿತಿಯ ವ್ಯಕ್ತಿಗಳು ಆಳ್ವಿಕೆ ನಡೆಸುತ್ತಿದ್ದಾರೆ ಎನ್ನುವುದು ಯತೀಂದ್ರ ಮಾತುಗಳಲ್ಲಿ ಬಹಳ ಸ್ಪಷ್ಟವಾಗಿದೆ. ನೀವು ಅನಧಿಕೃತ ವರ್ಗಾವಣೆ ಖಾತೆ ಸಚಿವರಾಗಿ ಮೈಸೂರಿನ ಪಿಡಿಓಯಿಂದ ಬೆಂಗಳೂರಿನ ಪೊಲೀಸ್ ಆಯುಕ್ತರವರೆಗೂ ವರ್ಗಾವಣೆ, ನೇಮಕಾತಿ, ನಿಯೋಜನೆ ಮೂಲಕ ಚೆನ್ನಾಗಿ ಕವಾಯಿ ಮಾಡಿಕೊಂಡಿದ್ದೀರಿ. ಇದರಾಚೆಗೆ ನಿಮ್ಮ ಮತ್ತು ನಿಮ್ಮಪ್ಪನ ಕೊಡುಗೆ ಏನಿಲ್ಲ. ನಿಮ್ಮ ಹೇಳಿಕೆ, ಶುದ್ಧ ಕುಡಿಯುವ ನೀರಿನ ಘಟಕ ಮಾಡಿದವರು ಕನ್ನಂಬಾಡಿ ಕಟ್ಟೆ ಕಟ್ಟಿದವರಿಗಿಂತ ದೊಡ್ಡವನು ಎನ್ನುವಂತಿದೆ ಎಂದು ಪ್ರತಾಪ್ ಸಿಂಹ ವ್ಯಂಗ್ಯವಾಡಿದ್ದಾರೆ.

ಮಹಾರಾಜರಿಗೂ, ಮುಡಾ ಸೈಟ್ ಕೊಳ್ಳೆ ಹೊಡೆದವರಿಗೂ ಹೋಲಿಕೆ ಮಾಡಬಾರದು

ಡಾ.ಯತೀಂದ್ರಗೆ ವಿಪಕ್ಷ ನಾಯಕ ಆರ್.ಅಶೋಕ್ ಟಾಂಗ್




ಬೆಂಗಳೂರು, ಜು.26– ಚಿನ್ನಾಭರಣ ಅಡವಿಟ್ಟು ಜಲಾಶಯ ನಿರ್ಮಿಸಿದ ಮಹಾರಾಜರಿಗೂ, ಮುಡಾದಲ್ಲಿ 14 ಸೈಟುಗಳನ್ನು ಕೊಳ್ಳೆ ಹೊಡೆದವರಿಗೂ ಹೋಲಿಕೆ ಮಾಡಬಾರದು ಎಂದು ವಿಪಕ್ಷ ನಾಯಕ ಆರ್. ಅಶೋಕ್ ಟಾಂಗ್ ನೀಡಿದ್ದಾರೆ.

ಬೆಂಗಳೂರಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಹಳೆ ಮೈಸೂರು ಭಾಗಕ್ಕೆ ನೀಡಿದ ಕೊಡುಗೆಯನ್ನು ನಾವು ಸ್ಮರಿಸಬೇಕು. ಕೆಆರ್‌ಎಸ್ ಜಲಾಶಯದಿಂದಾಗಿ ಜನರಿಗೆ ಜೀವಜಲ ದೊರೆತಿದೆ. ಅವರ ಸಾಧನೆಗಳಿಂದಾಗಿ ಜನರು ಅನ್ನ ತಿನ್ನುತ್ತಿದ್ದಾರೆ ಎಂದಿದ್ದಾರೆ.

ಸೋಪ್ ಫ್ಯಾಕ್ಟರಿ, ವಿಶ್ವವಿದ್ಯಾಲಯಗಳ ನಿರ್ಮಾಣ, ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದವರೇ ಅವರು. ಚಿನ್ನಾಭರಣ ಅಡವಿಟ್ಟು ಜಲಾಶಯ ನಿರ್ಮಿಸಿದವರಿಗೂ, ಮುಡಾದಲ್ಲಿ 14 ಸೈಟುಗಳನ್ನು ಕೊಳ್ಳೆ ಹೊಡೆದವರಿಗೂ ಹೋಲಿಕೆ ಮಾಡಬಾರದು. ಡಾ.ಯತೀಂದ್ರ ಸಿದ್ದರಾಮಯ್ಯ ಮಹಾರಾಜರ ಕುಟುಂಬಕ್ಕೆ ಅಪಮಾನ ಮಾಡಿದ್ದಾರೆ. ಕೂಡಲೇ ಅವರು ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದ್ದಾರೆ.

ಸಿದ್ದರಾಮಯ್ಯನವರ ಇಷ್ಟಪಡುವವರಿಗೂ ಡಾ॥ ಯತೀಂದ್ರರ ಈ ಮಾತು ಇಷ್ಟವಾಗಲ್ಲ...!

ಸಾಹಿತಿ ಪ್ರೊ.ಕೃಷ್ಣೇಗೌಡರ ಬೇಸರದ ನುಡಿ



ಮೈಸೂರು, ಜು.26– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಹೋಲಿಸಿ ತಂದೆಯವರನ್ನು ಬಣ್ಣಿಸಿದ್ದಕ್ಕೆ ಸಾಹಿತಿ– ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡರು ಬೇಸರ ವ್ಯಕ್ತಪಡಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಗಾಂಧೀಜಿ ಅವರು 'ರಾಜರ್ಷಿ' ಎಂದು ಕರೆದರೆ, ಪ್ರಖ್ಯಾತ ಬ್ರಿಟಿಷ್ ಲೇಖಕ ಪಾಲ್ ಬ್ರಂಟನ್ 'ತತ್ವಜ್ಞಾನಿ ದೊರೆ' ಎಂದು ವರ್ಣಿಸಿದ್ದರು. ಮತ್ತೊಬ್ಬ ಬ್ರಿಟಿಷ್ ಮುತ್ಸದ್ದಿ ಹರ್ಬರ್ಟ್ ಸ್ಯಾಮ್ಯುಯೆಲ್ 'ಅಶೋಕ ಚಕ್ರವರ್ತಿ'ಗೆ ಹೋಲಿಸಿದ್ದರು. ಲಂಡನ್‌ನಲ್ಲಿ ನಡೆದ ಮೊದಲನೇ ದುಂಡು ಮೇಜಿನ ಸಭೆಯಲ್ಲಿ ಜಾನ್ ಸ್ಯಾಂಕಿ ಎಂಬುವವರು 'ಮೈಸೂರ್ ಈಸ್ ದ ಬೆಸ್ಟ್ ಅಡ್ಮಿನಿಸ್ಟರ್ಡ್ ಸ್ಟೇಟ್ ಇನ್ ದ ವರ್ಲ್ಡ್' ಎಂದು ಕೊಂಡಾಡಿದರು. ನಾಲ್ವಡಿ ನಿಧನ ವಾರ್ತೆಯನ್ನು ಬಿತ್ತರಿಸಿದ ದಿ ಟೈಮ್ಸ್ ಪತ್ರಿಕೆ 'ಮೈಸೂರಿನ ದೊರೆ ನಾಲ್ವಡಿ ಕೃಷ್ಣರಾಜ ಒಡೆಯರ್, ಆಡಳಿತ ಮತ್ತು ದಾರ್ಶನಿಕತೆಯಲ್ಲಿ ಜಗತ್ತಿನ ಯಾವ ದೊರೆಗೂ ಎರಡನೆಯವರಲ್ಲ' ಎಂದು ಸ್ಮರಿಸಿಕೊಂಡಿತ್ತು. ನಾಲ್ವಡಿ ಅವರು ಕಟ್ಟಿದ ಮೈಸೂರು ಇಡೀ ಏಷ್ಯಾದಲ್ಲೇ ಶ್ರೇಷ್ಠ ಯೋಜಿತ ನಗರ ಎಂದು ಜಗತ್ತಿನ ಹಲವು ನಗರ ಯೋಜಕರು ಶ್ಲಾಘಿಸಿದ್ದಾರೆ.

ಆದರೆ ಈಗ ಡಾ.ಯತೀಂದ್ರ ಅವರು ಮೈಸೂರಿನ ಅಭಿವೃದ್ಧಿಗೆ ನಾಲ್ವಡಿಯವರಿಗಿಂತಲೂ ಸಿದ್ದರಾಮಯ್ಯನವರ ಕೊಡುಗೆ ದೊಡ್ಡದು ಅಂದಿದ್ದಾರೆ. ಮುಂದೆ ಮತ್ಯಾರೋ ನಗರಪಾಲಿಕೆ ಸದಸ್ಯನ ಹಿಂಬಾಲಕ 'ನಮ್ಮ ಅಣ್ಣ ಮೈಸೂರಿಗೆ ಮಾಡಿರುವ ಕೆಲಸವನ್ನು ಯಾವ ಸಿದ್ದರಾಮಯ್ಯ ಕೂಡಾ ಮಾಡಿಲ್ಲ' ಅನ್ನುತ್ತಾನೆ. ಅವನಿಗೂ ನಾಲ್ಕು ಜನ ಚಪ್ಪಾಳೆ ತಟ್ಟುತ್ತಾರೆ. ಯತೀಂದ್ರ ಕಾಂಗ್ರೆಸ್ ಪಕ್ಷದ ಎಮ್ಮೆಲ್ಸಿ ಅನ್ನುವುದು ಹಾಗಿರಲಿ, ಅವರೊಬ್ಬ ಡಾಕ್ಟರು, ವಿದ್ಯಾವಂತ. ಅವರಿಗೆ ಹಾಗೇ ಅನ್ನಿಸಿದರೂ ಸಿದ್ದರಾಮಯ್ಯನವರು ಅವರ ತಂದೆ ಅನ್ನುವ ಕಾರಣಕ್ಕಾದರೂ ಸಭ್ಯತೆ, ವಿನಯವನ್ನು ತೋರಿಸಬೇಕಿತ್ತು. ಸಾರ್ವಜನಿಕವಾಗಿ ಹೀಗೆ ಮಾತಾಡಬಾರದಿತ್ತು. ಸಿದ್ದರಾಮಯ್ಯನವರನ್ನು ಇಷ್ಟಪಡುವವರಿಗೂ ಈ ಮಾತು ಇಷ್ಟವಾಗುವುದಿಲ್ಲ ಎಂದು ಬೇಸರದಿಂದ ನುಡಿದಿದ್ದಾರೆ.

ಶಾಸಕ ಹರೀಶ್‌ಗೌಡರಿಗೆ ಅಭಿನಂದನೆ...



ಶಾಸಕ ಹರೀಶ್‌ಗೌಡರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮೈಸೂರು ಮಂಚೇಗೌಡನಕೊಪ್ಪಲಿನಲ್ಲಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅಂಧರು, ರೈತರಿಗೆ ಹಸು ಖರೀದಿಗೆ ಧನ ಸಹಾಯ ಮಾಡಲಾಯಿತು. ಇದೇ ವೇಳೆ ಶಾಸಕರನ್ನು ಅದ್ದೂರಿಯಾಗಿ ಸನ್ಮಾನಿಸಿ, ಶುಭಾಶಯ ಕೋರಲಾಯಿತು. ಈ ವೇಳೆ ಗ್ರಾಮದ ಮುಖಂಡರಾದ ರವಿ (ಡೆಲ್ಲಿ), ರವಿ ಮಂಚೇಗೌಡನಕೊಪ್ಪಲು, ರಾಮಚಂದ್ರು, ಲಂಕೇಗೌಡ, ಮಹದೇವಪ್ಪ, ಶ್ರೀಧರ್, ಲೋಕೇಶ್ ಮೂರ್ತಿ, ಸೋಮು, ಕರಿಯಪ್ಪ, ಮಂಜು, ಅನಿತ, ಗ್ರಾಮಸ್ಥರು ಉಪಸ್ಥಿತರಿದ್ದಾರೆ.

ಕಸಾಪದ ಅವ್ಯವಹಾರಗಳ ವಿಚಾರಣೆಗೆ ತಡೆ ನೀಡಲು ಹೈಕೋರ್ಟ್ ನಕಾರ

ಬೆಂಗಳೂರು, ಜು.26– ಕನ್ನಡ ಸಾಹಿತ್ಯ ಪರಿಷತ್‌ನ (ಕಸಾಪ) 2023–24ನೇ ಸಾಲಿನ ಆದಾಯ, ಅನುದಾನ, ಖರೀದಿ ಮತ್ತು ಮಾರಾಟ ಸೇರಿದಂತೆ ಆರ್ಥಿಕ ವಹಿವಾಟಿನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ನೇಮಿಸಿ ಬೆಂಗಳೂರು ನಗರ ಜಿಲ್ಲಾ 2ನೇ ವಲಯದ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ನೋಂದಣಾಧಿಕಾರಿ ಹೊರಡಿಸಿರುವ ಆದೇಶಕ್ಕೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಸಹಕಾರ ಸಂಘಗಳ ನಿಬಂಧಕರ ಆದೇಶಕ್ಕೆ ತಡೆ ನೀಡಬೇಕು ಎಂದು ಕೋರಿ ಕಸಾಪ ಅಧ್ಯಕ್ಷ ಮಹೇಶ ಜೋಶಿ ಸಲ್ಲಿಸಿದ್ದ ರಿಟ್ ಅರ್ಜಿಯ ಮಧ್ಯಂತರ ಮನವಿ ಬಗ್ಗೆ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರಕಟಿಸಿದೆ. ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಕಸಾಪದ 2023–24ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆ ನಡೆಸುವುದನ್ನು ರದ್ದುಪಡಿಸಿರುವ ಸಹಕಾರ ಸಂಘಗಳ ಉಪ ನಿಬಂಧಕರ ಕ್ರಮವನ್ನು ಪೀಠ ಅಮಾನ್ಯಗೊಳಿಸಿದೆ. ವಿಚಾರಣಾಧಿಕಾರಿ ನೇಮಿಸಿರುವ ಬಗೆಗಿನ ನಿಯಮಗಳು ಹಾಗೂ ಪ್ರಕರಣದ ದಾಖಲೆಗಳ ಆಧಾರದ ಮೇಲೆ ವಿಸ್ತೃತವಾಗಿ ವಿಚಾರಣೆ ನಡೆಸಿ ತೀರ್ಮಾನ ಕೈಗೊಳ್ಳಬೇಕಿದೆ. ಹಾಗಾಗಿ, ಆದೇಶಕ್ಕೆ ತಡೆ ನೀಡಲು ಇದು ಸೂಕ್ತವಾದ ಹಂತವಲ್ಲ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ವಿಚಾರಣಾಧಿಕಾರಿ ನೇಮಕಾತಿ ಆದೇಶವು ಅರ್ಜಿಯ ಕುರಿತಂತೆ ಹೈಕೋರ್ಟ್ ಹೊರಡಿಸಲಿರುವ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ ಎಂದು ಸ್ಪಷ್ಟಪಡಿಸಿದೆ.

ಮೈಸೂರಿನ ಶ್ರೀರಾಂಪುರ ಮನೆಯಲ್ಲಿ ಬಚ್ಚಿಟ್ಟಿದ್ದ ಸರ್ಕಾರಿ ದಾಖಲೆಗಳು

ಮೈಸೂರು, ಜು.26(ಬಿಎಲ್‌ಯು)– ಮೈಸೂರಿನ ಶ್ರೀರಾಂಪುರದ ಮನೆಯೊಂದರಲ್ಲಿ ಸರ್ಕಾರಿ ದಾಖಲೆಗಳನ್ನು ಬಚ್ಚಿಡಲಾಗಿತ್ತು ಎಂದು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ತಿಳಿಸಿದ್ದಾರೆ.

ಲೋಕಾಯುಕ್ತ ಪೊಲೀಸರು ಶುಕ್ರವಾರ ವಿವಿಧ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಕಾರ್ಯಾಚರಣೆ ನಡೆಸಿದ ವೇಳೆ ಖಾಸಗಿ ಮನೆಯೊಂದರಲ್ಲಿ ಇ–ಖಾತೆಗಳು ಪತ್ತೆಯಾಗಿರುವ ಮಾಹಿತಿ ಲಭ್ಯವಾಗಿದ್ದರ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಟಿ.ಜೆ.ಉದೇಶ್, ಶ್ರೀರಾಂಪುರದ ಮನೆಯೊಂದರಲ್ಲಿ ಪತ್ತೆಯಾಗಿರುವುದು ಈ ಹಿಂದಿನ ಶ್ರೀರಾಂಪುರ ಗ್ರಾಮ ಪಂಚಾಯ್ತಿಗೆ ಸಂಬಂಧಿಸಿದ ದಾಖಲೆಗಳಾಗಿವೆ ಎಂದು ಸ್ಪಷ್ಟಪಡಿಸಿದ್ದಾರೆ.

ಶ್ರೀರಾಂಪುರ ಪಟ್ಟಣ ಪಂಚಾಯ್ತಿಯಾಗಿ ಮೇಲ್ದರ್ಜೆಗೇರಿಸುವುದಕ್ಕಿಂತ ಹಿಂದಿನ ಕೆಲ ವರ್ಷಗಳ ಬಹಳಷ್ಟು ದಾಖಲೆಗಳನ್ನು ಆ ಮನೆಯಲ್ಲಿ ಇಡಲಾಗಿತ್ತು. ದಾಖಲೆಗಳ ಶೋಧನೆ ಜೊತೆಗೆ ಅವು ಯಾರಿಗೆ ಸಂಬಂಧಿಸಿವೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಈ ಬಗ್ಗೆ ಸಮಗ್ರ ಮಾಹಿತಿ ಕಲೆಹಾಕಿದ ನಂತರ ಮೇಲಧಿಕಾರಿಗಳಿಗೆ ವರದಿ ನೀಡಲಾಗುವುದು ಎಂದರು.

ವಿಲೇವಾರಿಯಾಗದೇ ಹಾಗೆ ಇಟ್ಟುಕೊಂಡಿದ್ದ 5,832 ಇ–ಖಾತೆ!

ಮೈಸೂರು ನಗರ ಪಾಲಿಕೆ ವಲಯ ಕಚೇರಿ 1ರಲ್ಲಿ 43 ಇ–ಖಾತೆ, ವಲಯ ಕಚೇರಿ 3ರಲ್ಲಿ 364, ವಲಯ ಕಚೇರಿ 7ರಲ್ಲಿ 398, ವಲಯ ಕಚೇರಿ 8ರಲ್ಲಿ 390 ಹಾಗೂ ವಲಯ ಕಚೇರಿ 9ರಲ್ಲಿ 400, ಬೋಗಾದಿ ಪಟ್ಟಣ ಪಂಚಾಯ್ತಿಯಲ್ಲಿ 448, ಹೂಟಗಳ್ಳಿ ನಗರ ಸಭೆಯಲ್ಲಿ 60, ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿಯಲ್ಲಿ 1837, ಶ್ರೀರಾಂಪುರ ಪಟ್ಟಣ ಪಂಚಾಯ್ತಿಯಲ್ಲಿ 1076, ಕಡಕೊಳ ಪಟ್ಟಣ ಪಂಚಾಯ್ತಿಯಲ್ಲಿ 152 ಸೇರಿದಂತೆ ಶುಕ್ರವಾರದ ಕಾರ್ಯಾಚರಣೆ ವೇಳೆ ವಿಲೇವಾರಿ ಒಟ್ಟು 5,832 ಇ–ಖಾತೆಗಳನ್ನು ಸಾರ್ವಜನಿಕರಿಗೆ ವಿತರಣೆ ಮಾಡದೆ, ಕಚೇರಿಯಲ್ಲೇ ಇಟ್ಟುಕೊಂಡಿರುವುದು ಬೆಳಕಿಗೆ ಬಂದಿದೆ.

ನಿನ್ನೆಯ ಕಾರ್ಯಾಚರಣೆ ಬಗ್ಗೆ ಲೋಕಾಯುಕ್ತ ಪ್ರಧಾನ ಕಚೇರಿಗೆ ವರದಿ ಸಲ್ಲಿಸಲಾಗುವುದು. ಇಷ್ಟು ಸಂಖ್ಯೆಯ ಇ–ಖಾತೆಗಳನ್ನು ಸಾರ್ವಜನಿಕರಿಗೆ ವಿತರಿಸದೆ ಕಚೇರಿಯಲ್ಲೇ ಇಟ್ಟುಕೊಂಡಿದ್ದಕ್ಕೆ ವಿವರಣೆ ಕೇಳಿ ಸಂಬಂಧಿಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಲೋಕಾಯುಕ್ತ ಪ್ರಧಾನ ಕಚೇರಿಯಿಂದ ನೋಟಿಸ್ ಜಾರಿ ಮಾಡಲಾಗುತ್ತದೆ. ಅದಕ್ಕೆ ಅಧಿಕಾರಿಗಳು ನೀಡುವ ಉತ್ತರವನ್ನು ಪರಾಮರ್ಶೆ ಮಾಡಿದ ನಂತರ ಪ್ರಧಾನ ಕಚೇರಿ ಸೂಚನೆ ಮೇರೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಉದೇಶ್ ತಿಳಿಸಿದರು.

ಮಹಿಳೆ ಏನೇ ಸಾಧನೆ ಮಾಡಿದರೂ ಲಘುವಾಗಿ ನೋಡುವ ದೃಷ್ಟಿಕೋನ ಬದಲಾಗಲಿ

ಅಜೀಂ ಪ್ರೇಮ್‌ಜಿ ವಿವಿ ವಿಜ್ಞಾನಿ ನಂದಿತಾ ಜಯರಾಜ್ ಅಭಿಮತ



ರಮಾಗೋವಿಂದ ರಂಗಮಂದಿರಲ್ಲಿ ನಡೆದ ಸಂವಾದದಲ್ಲಿ ಡಾ. ಬಿತಸ್ತಾ ದಾಸ್ ಹಾಗೂ ನಂದಿತಾ ಜಯರಾಜ್ ಮಾತನಾಡಿದರು.

ಮೈಸೂರು, ಜು.26(ವಿವಿಹೆಚ್)– ಭಾರತದಲ್ಲಿ ಮಹಿಳೆಯರಿಗೆ ಎಲ್ಲಾ ರಂಗದಲ್ಲಿಯೂ ಸರಿಸಮಾನವಾದ ಆದ್ಯತೆ ನೀಡದೆ ತಾರತಮ್ಯ ಮಾಡಲಾಗುತ್ತಿದೆ. ಪ್ರಮುಖವಾಗಿ ವಿಜ್ಞಾನ ಕ್ಷೇತ್ರದಲ್ಲಿ ಈ ಕೊರತೆ ಎದ್ದು ಕಾಣುತ್ತಿದೆ. ಮಹಿಳೆಯೊಬ್ಬರು ಮಾಡುವ ಕಾಯಕವನ್ನು ಹೆಣ್ಣು ಮಾಡಿದ್ದು ಎಂದು ಲಘುವಾಗಿ ನೋಡುವ ದೃಷ್ಟಿ ಕೋನವನ್ನು ಬದಲಾಯಿಸಿಕೊಂಡು ಆಕೆ ಮಾಡುವ ಕಾರ್ಯವನ್ನು ಗುರುತಿಸುವ ಕೆಲಸ ಈಗ ಆಗಬೇಕಿದೆ ಎಂದು ಅಜೀಂ ಪ್ರೇಮ್‌ಜಿ ವಿವಿ ವಿಜ್ಞಾನಿ ನಂದಿತಾ ಜಯರಾಜ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಮೈಸೂರು ವಿಜ್ಞಾನ ನಾಟಕೋತ್ಸವ ಟ್ರಸ್ಟ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ ಮತ್ತು ಎಸ್‌ವಿವೈಎಂ ಸಹಯೋಗದೊಂದಿಗೆ ಆಯೋಜಿಸಲಾಗಿರುವ 8ನೇ ಮೈಸೂರು ವಿಜ್ಞಾನ ನಾಟಕೋತ್ಸವದ ಮೂರನೇ ದಿನದ ಸಂವಾದ ಕಾರ್ಯಕ್ರಮದಲ್ಲಿ 'ವಿಜ್ಞಾನದಲ್ಲಿ ಭಾರತೀಯ ಮಹಿಳೆಯರಿಗಿರುವ ಭವಿಷ್ಯ' ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.

ಭಾರತದ ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಹೆಸರು ಕಾಣಸಿಗುವುದು ಕೇವಲ ಬೆರಳೆಣಿಕೆಯಷ್ಟು ಮಾತ್ರ. ಮಹಿಳೆಯರಿಗೂ ವಿಜ್ಞಾನಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಈ ಸಮಾಜ ಭಾವಿಸಿದಂತಿದೆ. ಆದರೆ ಪ್ರತಿಯೊಂದು ರಂಗದಲ್ಲಿಯೂ ಮಹಿಳೆಯರು ಸಾಧನೆ ಮಾಡಿದ್ದು, ಅದನ್ನು ಸಮಾಜ ಗುರುತಿಸುತ್ತಿಲ್ಲ ಎಂದು ಬೇಸರಿಸಿದರು.

ಕಮಲಾ ಸೋಹೋನಿ ಅವರು ಸರ್ ಸಿ.ವಿ.ರಾಮನ್ ಅವರ ಮೊದಲ ಮಹಿಳಾ ವಿದ್ಯಾರ್ಥಿಯಾಗಿದ್ದರು. ಹೆಣ್ಣು ಎಂಬ ಕಾರಣಕ್ಕೆ ಮೊದಲಿಗೆ ಅವರಿಗೂ ಅವಕಾಶ ನೀಡಿರಲಿಲ್ಲ. ಭಾರತೀಯ ವಿಜ್ಞಾನ ಸಂಸ್ಥೆ ಮುಂದೆ ಧರಣಿ ಕುಳಿತು ಅವಕಾಶ ಗಿಟ್ಟಿಸಿಕೊಂಡರು. ನಂತರ ಅವರು ಪಿಹೆಚ್.ಡಿ ಮಾಡುವ ಮೂಲಕ ಎಲ್ಲರ ಹುಬ್ಬೇರಿಸುವಂತೆ ಮಾಡಿದರು.

ಇಂತಹ ಅದೆಷ್ಟೋ ನಾಯಕಿಯರ ಹೋರಾಟದ ಫಲವಾಗಿ ನಾವಿಲ್ಲಿ ಸ್ವತಂತ್ರವಾಗಿ ಮಾತನಾಡುತ್ತಾ, ಸಮಾಜದಲ್ಲಿ ಕೆಲಸಗಳ ಮೂಲಕ ಗುರುತಿಸಿಕೊಳ್ಳಲು ಸಾಧ್ಯವಾಗುತ್ತಿದೆ. ಹೆಣ್ಣೆಂಬ ಕಾರಣಕ್ಕೆ ಅವಕಾಶ ನೀಡದೆ ಇರುವುದು ಸರಿಯಲ್ಲ ಎಂದು ತಿಳಿಸಿದರು.

ಮಹಿಳೆಯರಿಗೆ ವಿಜ್ಞಾನದ ಅರಿವಿಲ್ಲ ಎಂದು ಅನಾದಿ ಕಾಲದಿಂದಲೂ ಹೇಳಿಕೊಂಡು ಬರಲಾಗುತ್ತಿದೆ. ಈ ಕಲ್ಪನೆಯನ್ನು ಸುಳ್ಳು ಮಾಡುವತ್ತ ಶ್ರಮಿಸಬೇಕು. ಮಹಿಳೆ ಎಲ್ಲಾ ರಂಗದಲ್ಲೂ ಸಬಲೆ ಎಂಬುದನ್ನು ಮನದಟ್ಟು ಮಾಡುವ ಧ್ಯೇಯ ಪ್ರತಿಯೊಬ್ಬರಲ್ಲಿಯೂ ಮೂಡಬೇಕು. ವಿಜ್ಞಾನ ವಿಭಾಗದಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶಗಳಿದ್ದು, ಅವುಗಳ ಸಮರ್ಪಕ ಬಳಕೆ ಮಾಡಿಕೊಳ್ಳುವತ್ತ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಭಾರತೀಯ ವಿಜ್ಞಾನ ಸಂಸ್ಥೆಯ ಮಾನವಿಕ ಶಿಕ್ಷಕರಾದ ಡಾ. ಬಿತಸ್ತಾ ದಾಸ್ ಮಾತನಾಡಿ, ಪ್ರಬಲವಾಗಿ ಬೆಳೆಯುತ್ತಿರುವ ವಿದ್ಯಮಾನದಲ್ಲಿ ಮಕ್ಕಳಿಗೆ ಮಾನವೀಯ ಮೌಲ್ಯಗಳನ್ನು ಕಲಿಸುವ ಅಗತ್ಯತೆ ತುಂಬಾ ಇದೆ. ಮೇಲು–ಕೀಳು, ಹೆಣ್ಣು–ಗಂಡು ಎಂಬ ಭೇದ ಭಾವ ಮರೆಯಲು ಎಲ್ಲಾ ಕೋರ್ಸ್‌ಗಳ ಜೊತೆಗೆ ಮಾನವಿಕ ವಿಕಸನ ಕೋರ್ಸ್‌ಗಳನ್ನು ಅಧ್ಯಯನ ಮಾಡಿಸಬೇಕಿದೆ ಎಂದರು.

ಮಾನವಿಕ ಅಧ್ಯಯನ ಮತ್ತು ಸಮಾಜ ವಿಜ್ಞಾನ ವಿಷಯಗಳನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡಬೇಕು. ಮಾನವಿಕ ಅಧ್ಯಯನ ಮಾನವ ಸಂಸ್ಕೃತಿ, ಇತಿಹಾಸ, ತತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆಗಳ ಅಧ್ಯಯನವನ್ನು ಒಳಗೊಂಡಿರುತ್ತವೆ. ಸಮಾಜ ವಿಜ್ಞಾನಗಳು ಸಮಾಜದ ವಿವಿಧ ಅಂಶಗಳು, ಸಾಮಾಜಿಕ ಸಂಬಂಧಗಳು, ನಡವಳಿಕೆಗಳು ಮತ್ತು ಮಾನವ ಸಂಸ್ಕೃತಿಗಳನ್ನು, ವೈಜ್ಞಾನಿಕವಾಗಿ ಅಧ್ಯಯನ ಮಾಡುತ್ತವೆ. ಇಂದಿನ ಸಮಾಜ ಇವುಗಳ ಬಗ್ಗೆ ಜ್ಞಾನ ಹೊಂದುವುದು ಬಹಳ ಮುಖ್ಯ ಎಂದು ಅವರು ಹೇಳಿದರು.

ಬಳಿಕ ಶಶಿಧರ್ ಡೋಂಗ್ರೆ ರಚನೆಯ, ಪ್ರೊ ಎಚ್.ಎಸ್.ಉಮೇಶ್ ನಿರ್ದೇಶನದ 'ರಾಮನ್: ಬೆಳಕು, ಶಬ್ದ, ಸಿಡಿಲು' ನಾಟಕವು ಕಲಾಸುರುಚಿ ತಂಡದಿಂದ ಪ್ರದರ್ಶನಗೊಂಡಿತು.

ಆಂಧ್ರಪ್ರದೇಶದ ರಸ್ತೆ ಅಪಘಾತದಲ್ಲಿ ಇಬ್ಬರು ಡಿವೈಎಸ್‌ಪಿಗಳು ಸಾವು

ಹೈದರಾಬಾದ್, ಜು.26– ಶನಿವಾರ ಸಂಭವಿಸಿದ ಅಪಘಾತದಲ್ಲಿ ಆಂಧ್ರಪ್ರದೇಶ ಪೊಲೀಸ್ ಇಲಾಖೆಯ ಡಿವೈಎಸ್‌ಪಿಗಳು ಸಾವನ್ನಪ್ಪಿದ್ದು, ಹಿರಿಯ ಪೊಲೀಸ್ ಅಧಿಕಾರಿ ಸೇರಿದಂತೆ ಇಬ್ಬರು ಗಾಯಗೊಂಡಿದ್ದಾರೆ.

ಪೊಲೀಸ್ ಅಧಿಕಾರಿಗಳು ಅಧಿಕೃತ ಕೆಲಸದ ನಿಮಿತ್ತ ವಿಜಯವಾಡದಿಂದ ಹೈದರಾಬಾದ್‌ಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಹೈದರಾಬಾದ್ ಬಳಿಯ ಚೌಟುಪ್ಪಲ್‌ನಲ್ಲಿ ಚಾಲಕ ಹಠಾತ್ ಬ್ರೇಕ್ ಹಾಕಿದಾಗ, ಮುಂದೆ ಹೋಗುತ್ತಿದ್ದ ವಾಹನಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಪ್ರಯತ್ನಿಸುವಾಗ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ.

ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ನಂತರ, ಕಾರು ರಸ್ತೆಯ ಇನ್ನೊಂದು ಬದಿಗೆ ಬಿದ್ದು, ಎದುರಿನಿಂದ ಬರುತ್ತಿದ್ದ ವಾಹನಕ್ಕೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಂಧ್ರಪ್ರದೇಶ ಪೊಲೀಸರ ಗುಪ್ತಚರ ಭದ್ರತಾ ವಿಭಾಗದಲ್ಲಿ ಕೆಲಸ ಮಾಡುವ ಇಬ್ಬರು ಪೊಲೀಸ್ ಉಪ ವರಿಷ್ಠಾಧಿಕಾರಿಗಳು (ಡಿಎಸ್‌ಪಿಗಳು) ಅಪಘಾತದಲ್ಲಿ ಸಾವನ್ನಪ್ಪಿದರು, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮತ್ತು ವಾಹನ ಚಾಲಕ ಗಾಯಗೊಂಡಿದ್ದಾರೆ. ಗಾಯಗೊಂಡವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ನಕ್ಕರೆ ಅದೇ ಸ್ವರ್ಗ

ಟೀಚರ್ : ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೆ?
ವಿದ್ಯಾರ್ಥಿ : ಯಾಕಾಗಲ್ಲ ಟೀಚರ್, ಚಿಕ್ಕ ವಯಸ್ಸಿನಲ್ಲಿ ಬಗ್ಗದ ನಮ್ಮ ಅಜ್ಜ ಈಗ ತುಂಬಾ ಬಗ್ಗಿದ್ದಾರೆ!

ಮೈಸೂರು ಮಿತ್ರ
ಭಾನುವಾರ, 27 ಜುಲೈ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬದುಕಲ್ಲಿ ಕೆಲವೊಮ್ಮೆ ಕನಸು ತುಂಬಿದವರೇ ಕಣ್ಣೀರಿಗೂ ಕಾರಣವಾಗುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕರೆದುಣ್ಣುವ ಕೆಚ್ಚಲನ್ನು ಕೊರೆದುಂಡ ಹಾಗೆ.

ನಿಮ್ಮ ಪತ್ರಗಳು

ಪ್ರಾಣ ಉಳಿಸಿಕೊಳ್ಳಲು ಹೆಲ್ಮೆಟ್ ಧರಿಸಿ

ಮಾನ್ಯರೆ,



ಇತ್ತೀಚೆಗೆ ಮೈಸೂರಿನ ವಿವೇಕಾನಂದನಗರ ವೃತ್ತದ ಬಳಿ ಸಾರಿಗೆ ಬಸ್ಸೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಸವಾರ ಸ್ಥಳದಲ್ಲಿಯೇ ಅಸು ನೀಗಿದ ಹೃದಯ ವಿದ್ರಾವಕ ಘಟನೆ ನಡೆದಿದೆ. ಬಹುಶಃ ಆ ಸವಾರ ಹೆಲ್ಮೆಟ್ ಧರಿಸಿದ್ದರೆ ಪ್ರಾಣ ಉಳಿಯುತ್ತಿತ್ತೇನೋ. ಪೊಲೀಸ್ ಇಲ್ಲದ ಕಡೆ ಅಥವಾ ಸಿಸಿ ಕ್ಯಾಮೆರಾ ಇಲ್ಲದ ಕಡೆ ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸುವುದನ್ನು ಕಡೆಗಣಿಸುತ್ತಿದ್ದಾರೆ. ಇದರಿಂದ ಎಂತಹ ಅಪಾಯ ಕಾದಿದೆ ಎಂಬ ಅರಿವು ಅವರಿಗಿಲ್ಲ. ಕೇವಲ ದಂಡ ಕಟ್ಟುವುದಕ್ಕಾಗಿ ಹೆಲ್ಮೆಟ್ ಧರಿಸುವುದಲ್ಲ, ನಿಮ್ಮ ಪ್ರಾಣ ಉಳಿಸುವುದಕ್ಕಾಗಿ ಹೆಲ್ಮೆಟ್ ಧರಿಸಬೇಕು. ನೀವು ಮನೆ ಬಿಡುವಾಗ ಕಂದಮ್ಮಗಳನ್ನು ಶಾಲೆಗೆ ಕರೆದುಕೊಂಡು ಹೋಗುವಾಗ, ಹಾಲು, ಮೊಸರು, ತರಕಾರಿ ತರುವಾಗ ಇಲ್ಲೇ ಸಮೀಪವಿದೆ ಎಂದು ಹೆಲ್ಮೆಟ್ ಧರಿಸುವುದನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ಮಾಡಬೇಡಿ. ಯಾವ ಸಮಯದಲ್ಲಿ ಏನಾದರೂ ಆಗಬಹುದು. ವಾಹನ ಚಾಲಕರೇ ನಿಮ್ಮನ್ನು ನಂಬಿರುವ, ನಿಮ್ಮ ಪ್ರೀತಿಸುವ ಬಂಧು-ಬಳಗಕ್ಕೋಸ್ಕರ ಎಚ್ಚರಿಕೆಯಿಂದ ಚಾಲನೆ ಮಾಡಿ. ವಾಹನಗಳ ಮಧ್ಯೆ ಅಂತರವಿರಲಿ. ಅಪಾಯ ಕಟ್ಟಿಟ್ಟಬುತ್ತಿ. ಜೀವ ಇದ್ದರೆ ಜೀವನ !!

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

ಇ ಖಾತೆ ಪಾಲಿಕೆಯ ದಾಖಲೆ ಬಳಸಿಕೊಂಡೇ ಮಾಡಲಿ

ಮಾನ್ಯರೆ,

ಪಾಲಿಕೆಯಲ್ಲಿ ಇ ಖಾತೆ ಮಾಡಲು ಲಂಚವನ್ನು ಬೇಡುವ ಶೋಚನೀಯ ಪರಿಸ್ಥಿತಿಯ ಬಗ್ಗೆ ಕೇಳಿದ್ದೆವು. ಆದರೆ ಇ ಖಾತೆಯ ಅರ್ಜಿ ವಗೈರೆಗಳು ಖಾಸಗಿ ಮನೆಯಲ್ಲಿ ಪತ್ತೆಯಾದ ಸುದ್ದಿ ಓದಿ ಇನ್ನೂ ಅಚ್ಚರಿಯಾಯಿತು. ಹಣದ ಆಸೆಗಾಗಿ ಪಾಲಿಕೆಯ ಸಿಬ್ಬಂದಿ ಮಾಡುವ ಹೇಯ ಕೃತ್ಯ ಹೇಸಿಗೆ ತರಿಸುತ್ತದೆ.

ಇ ಖಾತೆ ಮಾಡಲು ಮನೆ ಮಾಲೀಕರಿಂದ ಅರ್ಜಿ ಪಡೆಯುವ ಬದಲು ಪಾಲಿಕೆಯಲ್ಲಿ ಲಭ್ಯವಿರುವ ದಾಖಲೆಗಳನ್ನೇ ಬಳಸಿಕೊಂಡು (ಯು.ಪಿ.ಓ.ಆರ್. ರೀತಿ) ಇ ಖಾತೆಯನ್ನು ಮಾಡಿ ಮನೆಯ ಮಾಲೀಕರಿಂದ ನಿಗದಿತ ಶುಲ್ಕ ಪಡೆದು ಮನೆ ಮನೆಗೇ ಇ ಖಾತೆಯ ದಾಖಲೆಗಳನ್ನು ವಿತರಣೆ ಮಾಡಲು ಪಾಲಿಕೆ ಮುಂದಾಗಲಿ. ಸಾರ್ವಜನಿಕರಿಗೆ ಪಾಲಿಕೆ ಅನುಕೂಲವಾದ ನಿರ್ಣಯವನ್ನು ತೆಗೆದುಕೊಂಡು ಕೆಲಸ ಮಾಡಲಿ. ಇದರಿಂದಾಗಿ ಸಾರ್ವಜನಿಕರು ಪಾಲಿಕೆ ಕಚೇರಿಗೆ ಅಲೆಯುವುದು ತಪ್ಪುತ್ತದೆಯಲ್ಲದೇ ಮನೆಯ ಇರುವಿಕೆಯ ಬಗ್ಗೆ ಪಾಲಿಕೆ ಪರಿಶೀಲಿಸಿದಂತೆಯೂ ಆಗುತ್ತದೆ. ಮನೆಯು ಪರಭಾರೆಯಾಗಿದ್ದಲ್ಲಿ ಮಾತ್ರ ಸೂಕ್ತ ದಾಖಲೆಯೊದಗಿಸಲು ಪಾಲಿಕೆ ಹೇಳಲಿ.

–ಕೊ.ಸು.ನರಸಿಂಹ ಮೂರ್ತಿ, ಚಾಮರಾಜಪುರಂ, ಮೈಸೂರು

ಅಭಿಮನ್ಯುವಿಗೆ ಸುಸ್ವಾಗತ

ಮಾನ್ಯರೆ,

ಈ ಬಾರಿಯ ದಸರಾ ಮಹೋತ್ಸವದಲ್ಲಿ ಜಗನ್ಮಾತೆ ಶ್ರೀ ಚಾಮುಂಡೇಶ್ವರಿಯನ್ನು 750 ಕೆಜಿ ತೂಕದ ಚಿನ್ನದ ಅಂಬಾರಿಯಲ್ಲಿ ಹೊತ್ತು ದಸರಾ ಮೆರವಣಿಗೆಯಲ್ಲಿ ಸಾಗಲಿರುವ ಅಭಿಮನ್ಯುವಿಗೆ ಸುಸ್ವಾಗತ. ಅಭಿಮನ್ಯುವಿನ ಜೊತೆ ಭೀಮ, ಕಂಜನ್, ಧನಂಜಯ, ಪ್ರಶಾಂತ್, ಮಹೇಂದ್ರ, ಏಕಲವ್ಯ ಮತ್ತು ಲಕ್ಷ್ಮಿ ಎಂಬ ಹೆಣ್ಣಾನೆಗಳು ಇತರ ಆನೆಗಳ ಜೊತೆ ದಸರಾ ಮೆರವಣಿಗೆಯಲ್ಲಿ 61 ವರ್ಷ ವಯಸ್ಸಿನ ಅಭಿಮನ್ಯುವಿನ ನಾಯಕತ್ವದಲ್ಲಿ ದಸರಾ ಮಹೋತ್ಸವವನ್ನು ಮುನ್ನಡೆಸಲಿವೆ. 5,560 ಕೆಜಿ ತೂಕದ ಅಭಿಮನ್ಯು, 8 ಅಡಿ, 11 ಇಂಚು ಉದ್ದವಿದ್ದಾನೆ. ಅಭಿಮನ್ಯುವಿನ ತೂಕ ಈಗ ಹೆಚ್ಚಾಗಿರಬಹುದು. ದಸರಾ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಿರುವ ಅನೇಕ ಆನೆಗಳಿಗೆ ಮಹಾಭಾರತದ ಶ್ರೇಷ್ಠ ಪಾತ್ರಗಳ ಹೆಸರನ್ನೇ ಇಟ್ಟಿರುವುದು ಒಂದು ಸಂತಸ ಪಡುವ ವಿಚಾರವಾಗಿದೆ. ದ್ರೋಣ, ಅರ್ಜುನ, ಭೀಮ, ಅಭಿಮನ್ಯು, ಅಶ್ವತ್ಥಾಮ ಮುಂತಾದ ಹೆಸರುಗಳು ಮಹಾಭಾರತದಲ್ಲಿ ಬರುವ ಮಹೋನ್ನತ ಪಾತ್ರಗಳಾಗಿವೆ. ಈ ಆನೆಗಳ ಪೈಕಿ ಕೆಲವು ಈಗ ಮೃತಪಟ್ಟಿರುವುದು ನೋವಿನ ಸಂಗತಿ. ಅಭಿಮನ್ಯುವಿಗೆ ಮತ್ತೊಮ್ಮೆ ಪ್ರೀತಿಪೂರ್ವಕ ಸ್ವಾಗತ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಹೊಸ ಬಾಟಲಿ, ಹಳೇ ಮದ್ಯ...

ಮಾನ್ಯರೆ,

ಮೈಸೂರು ಹಿಂದಿನ ಮುಡಾ (MUDA) ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರ ಹಗರಣಗಳ ನಂತರ, ಮೈಸೂರು ಅಭಿವೃದ್ಧಿ ಪ್ರಾಧಿಕಾರ (MDA) ಆಗಿ ಬದಲಾಗಿದೆ. ಹೆಸರಷ್ಟೇ ಬದಲಾಗಿದೆ. ಹೊಸ ಬಾಟಲಿ ಹಳೇ ಮದ್ಯ ಇದು ವಾಸ್ತವ!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಶಾಸಕ ಕೆ. ಹರೀಶ್‌ಗೌಡರಿಗೆ ಇನ್ನು ಹೆಚ್ಚಿನ ಸೇವೆ ಮಾಡುವ ಶಕ್ತಿ ಕರುಣಿಸಲಿ

ಮಾನ್ಯರೆ,

ಮೈಸೂರಿನ ಕನ್ನೇಗೌಡನ ಕೊಪ್ಪಲು ಗ್ರಾಮದ ಕೆ.ಹರೀಶ್‌ಗೌಡರು ಯಾವೊಂದು ಅಧಿಕಾರ ಇಲ್ಲದ ಹೊರತಾಗಿಯೂ ದಶಕಗಳ ಕಾಲದಿಂದ ಬಡವರ, ಶ್ರಮಿಕರ, ಅಶಕ್ತರ, ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿಯೇ ಮಿಡಿದು ದುಡಿದವರು. ಅಂದಿನಿಂದಲೂ ಸಾಮೂಹಿಕ ವಿವಾಹ, ಉದ್ಯೋಗ ಮೇಳ, ಆರೋಗ್ಯ ಶಿಬಿರಗಳಂತಹ ಜನಪರ ಕಾರ್ಯಕ್ರಮಗಳನ್ನು ಬೃಹತ್ ಮಟ್ಟದಲ್ಲಿ ಆಯೋಜಿಸುತ್ತಾ ಬಂದು, ಮಾರಣಾಂತಿಕವಾದ ಕೊರೊನಾ ಸಮಯದಲ್ಲಿ ವೈದ್ಯಕೀಯ ಪರಿಕರಗಳು ಹಾಗೂ ದಿನಸಿ ಪದಾರ್ಥಗಳನ್ನು ಕೊಟ್ಟು ತಮ್ಮ ಬದ್ಧತೆಯನ್ನು ಮೆರೆದಿದ್ದರು. ಸರ್ವ ಧರ್ಮದವರನ್ನು ಸಮನಾಗಿ ಕಾಣುವ ಇವರು ಮೊದಲ ಬಾರಿಗೆ 2018ರ ವಿಧಾನಸಭಾ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದಿಂದ ಪಕ್ಷೇತರರಾಗಿ ನಿಂತು ಸೋತರೂ ಸಹ ತಮ್ಮ ಶಕ್ತಿ ಏನೆಂಬುದನ್ನು ಪ್ರದರ್ಶಿಸಿದ್ದರು. ಅದರ ಫಲವಾಗಿಯೇ 2023ರಲ್ಲಿ ಇದೇ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿ ಜನಪರ ಕೆಲಸಗಳನ್ನು ಮಾಡುತ್ತಾ, ಜನಮಾನಸದಲ್ಲಿ ಉಳಿಯುವಂತಹ ಹಲವಾರು ಕಾರ್ಯಕ್ರಮಗಳ ಯೋಜನೆಗಳನ್ನು ರೂಪಿಸಿಕೊಂಡಿದ್ದಾರೆ. ಇವರಿಗೆ ಕೆ.ಜಿ.ಕೊಪ್ಪಲಿನ ಗ್ರಾಮದೇವತೆ ಚಾಮುಂಡೇಶ್ವರಿ ತಾಯಿ ಇನ್ನೂ ಹೆಚ್ಚಿನ ಜನಸೇವೆ ಮಾಡುವ ಶಕ್ತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. – ಬಿ. ಗಣೇಶ, ಕೆ.ಜಿ.ಕೊಪ್ಪಲು,ಮೈಸೂರು.

ನಾದಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಮುರಿದ ಮನಸ್ಸ ಜೋಡಿಸುವುದು ಸಪ್ತ ಸ್ವರಗಳ ಗಾನ ಮೋಡಿ...!

ಮನುಷ್ಯ ಹುಟ್ಟಿದಾಗಿನಿಂದ ಸಾಯುವವರೆಗೂ ಸಂಗೀತವು ಅವನ ಬದುಕಿನ ಅವಿಭಾಜ್ಯ ಅಂಗವಾಗಿರುತ್ತದೆ ಎಂಬುದರಲ್ಲಿ ಏನೇನೂ ಅತಿಶಯೋಕ್ತಿ ಇಲ್ಲ. ಯೋಚಿಸಿ, ನಮ್ಮ ಬದುಕಿನ ಅದೆಷ್ಟೋ ಸಂದರ್ಭಗಳು ಸಂಗೀತವಿಲ್ಲದೆ ಅಪೂರ್ಣ ಎಂದು ಅನ್ನಿಸಿಬಿಡುವುದಿಲ್ಲವೇ? ತೊಟ್ಟಿಲಿನಿಂದ ಮಸಣದವರೆಗೆ ನಮ್ಮ ಜೊತೆಯಲ್ಲಿಯೇ ಇರುವ ಈ ಸ್ವರಮೇಳವನ್ನು ನಾವು ಸರಿಯಾಗಿ ಗಮನಿಸಿಯೇ ಇರುವುದಿಲ್ಲ.

ತಾಯಿಯ ಜೋಗುಳದಿಂದ ಆರಂಭವಾಗುವ ಈ ಪವಿತ್ರ ಸಂಬಂಧವು ಬೆಳೆಯುತ್ತಾ ನಮ್ಮ ಬದುಕಿನ ವಿವಿಧ ಸಂದರ್ಭ, ಸನ್ನಿವೇಶಗಳಿಗೆ ತಕ್ಕಂತೆ, ಬದಲಾಗುವ ಅಭಿರುಚಿಗೆ ತಕ್ಕಂತೆ ಬದಲಾಗುತ್ತಾ ಹೋಗಬಹುದೇ ವಿನಾ ಸಂಪೂರ್ಣವಾಗಿ ಕಣ್ಮರೆ ಆಗುವುದು ಬಹುಶಃ ತೀರಾ ಅಸಂಭವವೇನೋ. ನನಗೆ ಸಂಗೀತ ಸ್ವಲ್ಪವೂ ಗೊತ್ತಿಲ್ಲ ಎಂದು ಹೇಳುವವರೂ ಸಹ ಸ್ನಾನದ ಮನೆಯ ಗಾಯಕರಂತೂ ಆಗಿಯೇ ಇರುತ್ತಾರೆ. ಈ ಸ್ನಾನಕ್ಕೂ ಹಾಡುವಿಕೆಗೂ ಅದೇನು ನಂಟಸ್ತನವೋ ತಿಳಿಯದು. ಮೈಮೇಲೆ ನೀರು ಬೀಳುತ್ತಿದ್ದಂತೆಯೇ ಬಾಯಿಂದ ಪುಂಖಾನುಪುಂಖವಾಗಿ ಗಾನವು ಹೊರಬೀಳಲು ತವಕಿಸುವುದು ವಾಸ್ತವ ಹೌದೋ... ಅಲ್ಲವೋ...

ಹಾಡು ಅಂದರೆ ಮುಖ ಗಂಟುಹಾಕುತ್ತಿದ್ದ ಒಬ್ಬಾಕೆ ಹಳ್ಳಿಯ ತಮ್ಮ ಮನೆಗೆ ಹೋದಾಗ ಸ್ನಾನ ಮಾಡುತ್ತಾ ಜೋರಾಗಿ ಹಾಡುತ್ತಿದ್ದುದನ್ನು ಕಂಡ, ಅಲ್ಲ ಕೇಳಿದ ಮನೆಯವರಿಗೆಲ್ಲಾ ಆಶ್ಚರ್ಯವೋ ಆಶ್ಚರ್ಯ. ಅದೇನು ಇವತ್ತು ಸ್ನಾನ ಮಾಡುವಾಗ ಹಾಡುತ್ತಿದ್ದೆಯಲ್ಲಾ ಎಂದು ಕೇಳಿದಾಗ ಅವಳು ಅಯ್ಯೋ ಬಚ್ಚಲುಮನೆ ಬಾಗಿಲಿಗೆ ಚಿಲಕ ಇರಲಿಲ್ಲವಲ್ಲಾ, ಅದಕ್ಕೇ ಯಾರಾದರೂ ಬಂದುಬಿಟ್ಟಾರೆಂದು ಹಾಡುತ್ತಿದ್ದೆ ಅಂದಳಂತೆ.

ಇನ್ನೊಂದು ವಿಸ್ಮಯದ ಸಂಗತಿ ಅಂದರೆ, ಜಗತ್ತಿನ ಎಲ್ಲಾ ಸಂಗೀತವೂ ಸಹ ಸಪ್ತ ಸ್ವರಗಳ ಆಧಾರದ ಮೇಲೆಯೇ ನಿಂತಿರುವುದು. ಭಾರತೀಯರು ಅದನ್ನು ಸರಿಗಮಪದನಿ ಎಂದರು. ಮತ್ತೆ ಕೆಲವರು ಅದನ್ನೇ ಬೇರೆ ಬೇರೆ ಹೆಸರಿನಿಂದ ಕರೆದರು ಅಷ್ಟೆ. ಸಿ ಡಿ ಇ ಎಫ್ ಜಿ ಎ ಬಿ ಎಂದೋ, ಡೊ ರೆ ಮಿ ಫಾ ಸೋ ಲಾ ಟಿ ಎಂದೋ ಅಥವಾ ಮತ್ತ್ಯಾವ ಹೆಸರಿನಿಂದ ಕರೆದರೂ ಅದು ಏಳು ಸ್ವರಗಳೇ ವಿನಾ ಮತ್ತೇನೋ ಅಲ್ಲ. ಇನ್ನೂ ಒಂದು ವಿಷಯ ಅಂದರೆ, ಜಗತ್ತಿನ ಅನೇಕ ನಾಗರಿಕತೆಗಳು ಇನ್ನೂ ಕಣ್ಣು ಬಿಡುವುದಕ್ಕೂ ಮುನ್ನವೇ ಭಾರತದಲ್ಲಿ ನಾಗರಿಕತೆ ಅಷ್ಟೇ ಅಲ್ಲ, ಸಂಗೀತವೂ ಸಹ ಬಹಳ ಬಹಳವಾಗಿ ಮುಂದುವರೆದು, ದಷ್ಟಪುಷ್ಟವಾಗಿ ಬೆಳೆದು ನಿಂತಿತ್ತು ಎಂಬುದು ಐತಿಹಾಸಿಕ ಸತ್ಯ. ಕ್ರಿಸ್ತಪೂರ್ವದಲ್ಲೇ ಇದ್ದನೆಂದು ನಂಬಲಾದ ಭರತಮುನಿಯು ತನ್ನ ಅಮೂಲ್ಯ ಗ್ರಂಥ 'ನಾಟ್ಯ ಶಾಸ್ತ್ರ'ದಲ್ಲಿ ಸಂಗೀತದ ಬಗ್ಗೆ ಸುದೀರ್ಘವಾಗಿ ಬರೆದಿರುವುದನ್ನು ನೋಡಿದರೆ, ನಮಗೆ ಇದರ ಕಲ್ಪನೆ ಉಂಟಾಗುತ್ತದೆ. ಸಂಗೀತದ ಲಿಪಿಯನ್ನೂ ಸಹ ಭಾರತೀಯರೇ ಮೊದಲು ಕಂಡುಹಿಡಿದದ್ದು. ಬಹಳ ಹಿಂದೆಯೇ ಸಂಗೀತದ ಸ್ವರಗಳು ಅಸಾಮಾನ್ಯವಾದುವು ಎಂಬುದನ್ನು ನಮ್ಮ ಹಿರಿಯರು ಕಂಡುಕೊಂಡಿದ್ದರು. ಸ್ವರಗಳಿಂದ ಹೊರಡುವ ನಾದವು ದೈವೀಕವಾದುದು ಎಂಬುದನ್ನೂ ಅರಿತಿದ್ದ ಅವರು ಅದರ ಮೂಲಕ, ಅಂದರೆ ನಾದೋಪಾಸನೆಯ ಮೂಲಕ ಭಗವಂತನ ಸಾಕ್ಷಾತ್ಕಾರ ಪಡೆಯಬಹುದೆಂಬುದನ್ನೂ ಕಂಡುಕೊಂಡಿದ್ದರು. ಇದೇನು ಅಂತಿಂಥ ಸಾಧನೆ ಅಲ್ಲ. ಸ್ವರಗಳೂ ಸರಿಯಾದ ರೀತಿಯಲ್ಲಿ ಬಳಸಿದಲ್ಲಿ, ಮಂತ್ರಗಳಷ್ಟೇ ಶಕ್ತಿಯುತವಾಗಬಲ್ಲದೆಂಬುದನ್ನು ಅವರು ಅರಿಯುವ ಮಟ್ಟಕ್ಕೆ ಹೋಗಿದ್ದು ಗಹನವಾದುದೇ ಸರಿ. ಸಂಗೀತಕ್ಕೆ ಸಂಬಂಧಿಸಿದ ಚಿತ್ರಗಳು, ಶಿಲ್ಪಗಳು ಭಾರತದಲ್ಲಿ ಹೇರಳವಾಗಿವೆ. ಕಲ್ಲಿನಲ್ಲೂ ಸಹ ಸಂಗೀತವನ್ನು ಹೊರಡಿಸಬಹುದೆಂಬುದನ್ನು ಅರಿತಿದ್ದ ಅವರ ಅರಿವಿಗೆ ಏನನ್ನೋಣ. ನಮ್ಮ ಹಂಪಿಯ ಸಂಗೀತ ಸ್ತಂಭಗಳೇ ಇದಕ್ಕೆ ಸಾಕ್ಷಿ.



ವೀಣೆ ಸುಬ್ಬಣ್ಣ ಹಾಗೂ ವೀಣೆ ಶೇಷಣ್ಣ

> ಸಂಗೀತದ ಪ್ರಭಾವದ ಬಗ್ಗೆ ನಡೆಸಿರುವ ಸಂಶೋಧನೆಗಳು ಅದು ಮನುಷ್ಯರ ಮೇಲಷ್ಟೇ ಅಲ್ಲದೆ, ಸಸ್ಯಗಳ ಮೇಲೂ ಪ್ರಭಾವ ಬೀರುತ್ತವೆ ಎಂಬುದನ್ನು ಸಾಬೀತು ಪಡಿಸಿವೆ. ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣಿಃ ಎಂಬ ಸಂಸ್ಕೃತದ ಉಕ್ತಿಯೇ ಇದೆಯಲ್ಲ! ಶಿಶುಗಳೂ, ಪಶುಗಳೂ ಇದರಿಂದ ಆಕರ್ಷಿತರಾಗುತ್ತಾರೆ ಅಂದ ಮೇಲೆ, ಸೂಕ್ಷ್ಮ ಮನಸಿನ ಮನುಷ್ಯರು ಅದರ ಇಂಪಿಗೆ ಮರುಳಾಗುವುದರಲ್ಲಿ ಆಶ್ಚರ್ಯವೇನು?

ಸಂಗೀತದಿಂದ ರೋಗಗಳನ್ನೂ ಗುಣ ಮಾಡಬಹುದೆಂಬುದು ಮತ್ತೊಂದು ವಿಚಾರ. ಇದನ್ನು ಎಲ್ಲ ವೈದ್ಯರೂ ಒಪ್ಪುವುದಿಲ್ಲವಾದರೂ ಅದರಲ್ಲಿ ಸಂಶೋಧನೆ ಮಾಡುತ್ತಿರುವ ಮನಃಶಾಸ್ತ್ರಜ್ಞರು ಇದನ್ನು ಒಪ್ಪುತ್ತಾರೆ. ಪ್ರಕ್ಷುಬ್ಧಗೊಂಡ ಮನಸಿಗೆ ಹಿತವಾದ ಸಂಗೀತವು ಸಾಂತ್ವನ ನೀಡುವುದರಲ್ಲಿ ಅನುಮಾನವಿಲ್ಲ. ಅಂತೆಯೇ ಸಂಗೀತದ ಹೆಸರಿನಲ್ಲಿ ನಡೆವ ಗದ್ದಲಗಳು ನಮ್ಮ ರಕ್ತದ ಒತ್ತಡವನ್ನು ಹೆಚ್ಚಿಸುವುದರಲ್ಲಿಯೂ ಅನುಮಾನವಿಲ್ಲ ಎಂದು ಹೇಳಬಹುದಲ್ಲವೇ. ಹಲವು ವೈದ್ಯಶಾಲೆಗಳು ಸಂಗೀತ ಚಿಕಿತ್ಸೆ ಎಂಬುದನ್ನು ಇತ್ತೀಚೆಗೆ ತಮ್ಮ ಚಿಕಿತ್ಸಾ ಪದ್ಧತಿಯಲ್ಲಿ ಅಳವಡಿಸಿಕೊಂಡಿರುವುದನ್ನೂ ಕಾಣಬಹುದಾಗಿದೆ.

ಸಂಗೀತದ ಪ್ರಭಾವದ ಬಗ್ಗೆ ನಡೆಸಿರುವ ಸಂಶೋಧನೆಗಳು ಅದು ಮನುಷ್ಯರ ಮೇಲಷ್ಟೇ ಅಲ್ಲದೆ, ಸಸ್ಯಗಳ ಮೇಲೂ ಪ್ರಭಾವ ಬೀರುತ್ತವೆ ಎಂಬುದನ್ನು ಸಾಬೀತುಪಡಿಸಿವೆ. ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣಿಃ ಎಂಬ ಸಂಸ್ಕೃತದ ಉಕ್ತಿಯೇ ಇದೆಯಲ್ಲ! ಶಿಶುಗಳೂ, ಪಶುಗಳೂ ಇದರಿಂದ ಆಕರ್ಷಿತರಾಗುತ್ತಾರೆ ಅಂದ ಮೇಲೆ, ಸೂಕ್ಷ್ಮ ಮನಸಿನ ಮನುಷ್ಯರು ಅದರ ಇಂಪಿಗೆ ಮರುಳಾಗುವುದರಲ್ಲಿ ಆಶ್ಚರ್ಯವೇನು? ನಮ್ಮಲ್ಲಿ ಆಗಿಹೋದ ಹಲವು ಮಹಾನ್ ಸಂಗೀತಗಾರರ ಜೀವನದಲ್ಲಿ ಪ್ರಾಣಿ ಪಕ್ಷಿಗಳು ಸಂಗೀತಕ್ಕೆ ಸ್ಪಂದಿಸಿರುವ ಉದಾಹರಣೆಗಳನ್ನು ನೋಡಬಹುದು.

ನಮ್ಮ ಮೈಸೂರಿನ ಶ್ರೇಷ್ಠ ಕಲಾವಿದರಾಗಿದ್ದ ವೀಣೆ ಶೇಷಣ್ಣ ಮತ್ತು ವೀಣೆ ಸುಬ್ಬಣ್ಣ ಅವರು ಎಷ್ಟು ಆತ್ಮೀಯರಾಗಿದ್ದರೋ ಅಷ್ಟೇ ಕೆಲವೊಮ್ಮೆ ಮುನಿಸುಗೊಳ್ಳುತ್ತಿದ್ದುದೂ ಉಂಟು. ಸುತ್ತಮುತ್ತ ಇರುತ್ತಿದ್ದ ಚಾಡಿಕೋರರು ಅವರಿಬ್ಬರ ಬಗ್ಗೆ ಅವರುಗಳ ಕಿವಿ ತುಂಬಿ, ದೂರ ಸರಿಯುವಂತೆ ಮಾಡುತ್ತಿದ್ದುದು ಉಂಟು. ಇಬ್ಬರಲ್ಲೂ ಇದ್ದ ಆಳವಾದ ಬಾಂಧವ್ಯವು ಅದು, ಅಂದರೆ ವೈಮನಸ್ಯ ಹೆಚ್ಚು ದಿನ ಉಳಿಯಲಾರದಂತೆ ನೋಡಿಕೊಳ್ಳುತ್ತಿದ್ದುದು ನಮ್ಮ ಪುಣ್ಯ. ಅವರೀರ್ವರೂ ಹೆಚ್ಚುದಿನ ಒಬ್ಬರನ್ನು ಬಿಟ್ಟು ಮತ್ತೊಬ್ಬರು ಇರಲಾರರು.

ಒಮ್ಮೆ ಸುಬ್ಬಣ್ಣನವರಿಗೆ ಹೊಸ ಚಪ್ಪಲಿ ಕಚ್ಚಿ ಅದೇ ನೆಪದಿಂದ ಉಂಟಾದ ಸಣ್ಣ ಗಾಯ ಒಂದು ಬರಬರುತ್ತಾ ಹೆಚ್ಚಾಗಿ, ವ್ರಣವಾಗಿ ಅವರಿಗೆ ಬಹಳ ಬಾಧೆ ಕೊಡಲು ಪ್ರಾರಂಭಿಸಿತು. ಎಲ್ಲ ವೈದ್ಯರಿಗೂ ತೋರಿಸಿದರೂ ಅದು ಬಗ್ಗಲಿಲ್ಲ. ಕೀವು ತುಂಬಿಕೊಂಡು ಜ್ವರದ ಬಾಧೆಯೂ ಸೇರಿ ಬಹಳ ಅಶಕ್ತರಾದರು ಸುಬ್ಬಣ್ಣ. ನಿತ್ರಾಣರಾಗಿ ಹಾಸಿಗೆ ಹಿಡಿದ ಅವರಿಗೆ ತಾವು ಇನ್ನು ಹೆಚ್ಚು ದಿನ ಬದುಕುವುದಿಲ್ಲ ಎಂದು ಅನಿಸತೊಡಗಿತು. ಸಾಯುವುದೇ ಆದರೆ, ಶೇಷಣ್ಣನವರ ವೀಣೆಯನ್ನು ಕೇಳಾದರೂ ಸಾಯೋಣ ಎಂದು ಅವರಿಗೆ ಅನಿಸಿತು. ಆಗ ಅವರಿಬ್ಬರಲ್ಲಿ ಹುಸಿಕೋಪ ಮೈದೋರಿ, ಇಬ್ಬರ ನಡುವೆ ಮಾತುಕತೆ ನಿಂತಿತ್ತು. ಆದರೆ ಇಂತಹ ಪರಿಸ್ಥಿತಿಯಲ್ಲಿ ಅದೆಲ್ಲವೂ ಗಾಳಿಯಂತೆ ಹಾರಿಹೋಗಿ, ಶೇಷಣ್ಣನವರಿಗೆ ಹೇಳಿಕಳುಹಿಸಿದರು. ಇದಕ್ಕೇ ಕಾಯುತ್ತಿದ್ದವರಂತೆ ಶೇಷಣ್ಣನವರು ಕೂಡಲೇ ತಮ್ಮ ವೀಣೆಯನ್ನು ಹೊರಿಸಿಕೊಂಡು ಸುಬ್ಬಣ್ಣನವರ ಮನೆಗೆ ಧಾವಿಸಿದರು. ಏನು ಸುಬ್ಬಣ್ಣ, ಇಷ್ಟು ಬಾಧೆ ಪಡುತ್ತಿದ್ದೀಯಲ್ಲ, ನನಗೆ ಒಂದು ಮಾತು ತಿಳಿಸಿರಬಾರದೆ ಅಂದವರೇ ವೀಣೆಯನ್ನು ತೆಗೆದುಕೊಂಡು ನುಡಿಸಲಾರಂಭಿಸಿದರು. ವೀಣೆಯ ಮೇಲೆ ಅವರು ಬೆರಳಿಟ್ಟರೆ ಸಾಕು ಸರಸ್ವತಿಯೇ ನಾದದ ಝೇಂಕಾರ ಹೊರಡಿಸುತ್ತಿದ್ದಾಳೋ ಎಂಬಂತೆ ಅವರ ವೀಣೆಯಿಂದ ನಾದ ನುಡಿಯತೊಡಗಿತು. ಅದೆಷ್ಟೋ ದಿನಗಳಿಂದ ನಿದ್ದೆ ಮಾಡಲಾಗದೆ ಹಿಂಸೆ ಪಡುತ್ತಿದ್ದ ಸುಬ್ಬಣ್ಣನವರಿಗೆ ಹಾಯಾಗಿ ನಿದ್ದೆ ಹತ್ತಿತ್ತು. ಮೆಲ್ಲಗೆ ವೀಣೆಯನ್ನು ಕೆಳಗಿಳಿಸಿದ ಶೇಷಣ್ಣನವರು ಅವರನ್ನು ಎಬ್ಬಿಸಬಾರದು ಎಂದು ಅಲ್ಲಿದ್ದವರಿಗೆ ಹೇಳಿ ತಮ್ಮ ಮನೆಗೆ ತೆರಳಿದರು.

ಸುಬ್ಬಣ್ಣನವರು ಎಚ್ಚರವಾಗುವಾಗ ಕೀವು ತುಂಬಿದ ಅವರ ಕಾಲಿನ ವ್ರಣವು ಒಡೆದು, ಅದರೊಳಗಡೆ ಇದ್ದ ಕೀವೆಲ್ಲ ಸೋರಿಹೋಗಿ, ಕೆಲವೇ ದಿನಗಳಲ್ಲಿ ಅವರು ಚೇತರಿಸಿಕೊಂಡರು. ಕೃತಜ್ಞತೆಯಿಂದ ಗುರುಗಳ ಮನೆಗೆ ಹೂವು, ಹಣ್ಣು, ಫಲ ತಾಂಬೂಲಾದಿಗಳನ್ನು ತೆಗೆದುಕೊಂಡು ಹೋಗಿ ಸಮರ್ಪಿಸಿ ನಮಸ್ಕರಿಸಿದರು. ಎರಡು ಮಹಾನ್ ಜೀವಗಳು ಮತ್ತೆ ಒಂದಾಗಿದ್ದವು. ಹೀಗೆ ಸಂಗೀತದ–ಸ್ವರಗಳ ಮಹಿಮೆಯನ್ನು ಎಷ್ಟು ಬೇಕಾದರೂ ಹೇಳಬಹುದು.

ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಇಲಾಖೆಯಲ್ಲಿ ಬಡ್ತಿ ಮೀಸಲಾತಿಗೆ ಪ್ರಾಮಾಣಿಕ ಪ್ರಯತ್ನ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭರವಸೆ

ಮೈಸೂರು, ಜು.26(ಎಂಟಿವೈ)–ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು, ನೌಕರರಿಗೆ ನಿಯಮಾನುಸಾರ ಬಡ್ತಿ ಮೀಸಲು ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭರವಸೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಶನಿವಾರ ನೂತನವಾಗಿ ಅಸ್ತಿತ್ವಕ್ಕೆ ತಂದಿರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧಿಕಾರಿಗಳ ಮತ್ತು ನೌಕರರ ಕಲ್ಯಾಣ ಸಂಘಕ್ಕೆ ಚಾಲನೆ ನೀಡಿ, ನೌಕರರ ರಾಜ್ಯ ಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಲಾಖೆಯ ಎಸ್‌ಸಿ, ಎಸ್ಟಿ ಅಧಿಕಾರಿಗಳು, ನೌಕರರಿಗೆ ಬಡ್ತಿ ಮೀಸಲು ಒದಗಿಸಲು ಸಂಬಂಧಿಸಿದ ಸಚಿವರೊಂದಿಗೆ ಚರ್ಚಿಸಲಾಗುವುದು. ಆರ್‌ಡಿಪಿಆರ್ ಸಚಿವ ಪ್ರಿಯಾಂಕ ಖರ್ಗೆ ಅವರು ಸದಾ ನೌಕರರ ಬಗ್ಗೆ ಯೋಚಿಸುತ್ತಾರೆ. ಎಸ್‌ಸಿ–ಎಸ್‌ಟಿ ವರ್ಗದ ಅಧಿಕಾರಿಗಳು, ನೌಕರರಿಗೆ ಬಡ್ತಿ ಕೊಡುವ ಬಗ್ಗೆ ಚರ್ಚೆ ಮಾಡಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಅಬ್ದುಲ್ ನಜೀರ್‌ಸಾಬ್ ಇದ್ದಾಗ ಪಂಚಾಯತ್ ರಾಜ್ ಕಾಯಿದೆಗೆ ತಿದ್ದುಪಡಿ ತಂದರು. ರಾಜೀವ್ ಗಾಂಧಿ ಪ್ರಧಾನಿಯಾಗಿದ್ದಾಗ 1972 ಮತ್ತು 1973 ಕಾಯಿದೆಗೆ ತಿದ್ದುಪಡಿ ಮಾಡಿ 3 ಹಂತದ ಆಡಳಿತ ಮತ್ತು ಪೂರ್ಣ ಪ್ರಮಾಣದಲ್ಲಿ ಆಡಳಿತ ನಡೆಸುವಂತಹ ಕ್ರಮ ಜಾರಿಗೆ ತಂದರು. ಇದರಿಂದಾಗಿ ಸಾಕಷ್ಟು ಬದಲಾವಣೆಯಾಗಿದೆ. ಗ್ರಾಪಂಗಳಲ್ಲಿ ಹಣಕಾಸಿನ ವಿವರ, ಆಡಳಿತ ಮತ್ತು ಪಾರದರ್ಶಕ ನಿರ್ವಹಣೆ ಮುಖ್ಯ. ಇದುವರೆಗೆ ಯಾವ ವರ್ಗಗಳಿಗೆ ಅಧಿಕಾರ ಸಿಗುವುದನ್ನು ನಿರ್ಲಕ್ಷ್ಯ ಮಾಡಲಾಗಿತ್ತೋ ಅಂತಹವರಿಗೆ ಮೀಸಲಾತಿ ನೀಡಲಾಗಿದೆ. ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ಕೊಡಲಾಗಿದೆ. ರಾಜ್ಯದಲ್ಲಿ 6200 ಗ್ರಾಪಂಗಳಿದ್ದು, ಒಂದು ಲಕ್ಷಕ್ಕೂ ಹೆಚ್ಚು ಸದಸ್ಯರಿದ್ದಾರೆ. ಕೆಲವು ಪಂಚಾಯಿತಿಗಳಲ್ಲಿ ಎಸ್‌ಸಿ–ಎಸ್‌ಟಿ ಸದಸ್ಯರೇ ಹೆಚ್ಚಾಗಿದ್ದಾರೆ ಎಂದು ತಿಳಿಸಿದರು.



ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ತಂದಿರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧಿಕಾರಿಗಳ ಮತ್ತು ನೌಕರರ ಕಲ್ಯಾಣ ಸಂಘಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ಸಿ ಅಂಡ್ ಆರ್ ರೂಲ್: ಈ ಹಿಂದೆ ನಾನು ಗ್ರಾಮೀಣಾಭಿವೃದ್ಧಿ ಸಚಿವನಾಗಿದ್ದಾಗ ಪಿಡಿಓಗಳಿಗೆ ಸಿ ಅಂಡ್ ಆರ್ ರೂಲ್ ತರಲಾಯಿತು. ರಾಜ್ಯದ ಎಲ್ಲಾ 27 ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯಿತಿ ಮೂಲಕ ಅನುಷ್ಠಾನಗೊಳಿಸುವ ತೀರ್ಮಾನ ಮಾಡಲಾಯಿತು. ಮೊದಲು 1931ರಲ್ಲಿ ಜಾತಿ ಗಣತಿ ನಡೆಸಲಾಯಿತು. ಜಾತಿ ಜನಗಣತಿ ಮಾಡಲು ಶುರು ಮಾಡಿದ್ದೇವೆ. ರಾಜ್ಯದಲ್ಲಿ ಯಾವ ಸಮುದಾಯದ ಜನಸಂಖ್ಯೆ ಎಷ್ಟು ಇದೆ. ಯಾವ ರೀತಿಯಲ್ಲಿ ಬದುಕುತ್ತಿದ್ದಾರೆ ಎಂಬುದನ್ನು ತಿಳಿಯಲು ಸಮೀಕ್ಷೆ ಮಾಡಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವನಾಗಿದ್ದಾಗ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳದಿದ್ದರೆ ರಾಜೀನಾಮೆ ನೀಡುವುದಾಗಿ ಹೇಳಿದ್ದೆ. ಸಿದ್ದರಾಮಯ್ಯ ಅವರು ಮೊದಲನೇ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಬಡ್ತಿ ಮೀಸಲಾತಿಗೆ ಕಾಯಿದೆ ಜಾರಿಗೆ ತಂದರು. ಗುತ್ತಿಗೆಯಲ್ಲಿ ಮೀಸಲಾತಿ, ಕೈಗಾರಿಕೆಗಳ ಸ್ಥಾಪನೆಗೆ ಜಮೀನು, ಕೆಎಸ್‌ಎಫ್‌ಸಿಯಿಂದ ಹತ್ತು ಕೋಟಿ ರೂ.ವರೆಗೆ ಸಾಲ ಕೊಡುವ ವ್ಯವಸ್ಥೆ ತರಲಾಗಿದೆ. ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣವನ್ನು ಬೇರೆ ಯೋಜನೆಗಳಿಗೆ ಬಳಸದಂತೆ ಕ್ರಮ ವಹಿಸಲಾಗಿದೆ ಎಂದ ಅವರು, ತಮ್ಮ ಬೇಡಿಕೆಗಳನ್ನು ಸಚಿವರ ಗಮನಕ್ಕೆ ತಂದು ಸಕಾರಾತ್ಮಕವಾಗಿ ಪರಿಶೀಲನೆ ನಡೆಸಿ ಕ್ರಮಕೈಗೊಳ್ಳುವೆ ಎಂದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ವಹಿಸಿದ್ದರು. ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ, ಜಿಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಸ್.ಯುಕೇಶ್‌ಕುಮಾರ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಮಾಜಿ ಮೇಯರ್ ಪುರುಷೋತ್ತಮ್, ಚಾಮರಾಜನಗರ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು, ಜಿಪಂ ಉಪ ಕಾರ್ಯದರ್ಶಿಗಳಾದ ಎಂ.ಕೃಷ್ಣರಾಜು, ಸವಿತಾ, ಮುಖ್ಯ ಯೋಜನಾಧಿಕಾರಿ ಕೆ.ಬಿ.ಪ್ರಭುಸ್ವಾಮಿ, ರಾಜ್ಯಾಧ್ಯಕ್ಷ ಎಂ.ಸುರೇಶ್ ಕುಮಾರ್, ಜಿಲ್ಲಾಧ್ಯಕ್ಷ ಸಿ.ಪ್ರಕಾಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಎನ್.ಶಿವಶಂಕರ್ ಇನ್ನಿತರರು ಹಾಜರಿದ್ದರು.

ಜಾತಿಗಣತಿ ಪೂರ್ಣಗೊಂಡ ನಂತರ ಮೀಸಲಾತಿ ಪ್ರಮಾಣ ಹೆಚ್ಚಳ

ಎಂಎಲ್‌ಸಿ ಡಾ.ಯತೀಂದ್ರ ಅಭಿಪ್ರಾಯ

ಮೈಸೂರು,ಜು.26(ಎಂಟಿವೈ)–ರಾಜ್ಯದಲ್ಲಿ ನಡೆಯುತ್ತಿರುವ ಜಾತಿ ಗಣತಿ ಪೂರ್ಣಗೊಂಡ ಬಳಿಕ ಆಯಾ ಜಾತಿಗಳ ಜನಸಂಖ್ಯೆ ನಿಖರವಾಗಿ ತಿಳಿಯುವುದರಿಂದ ಮೀಸಲಾತಿ ಪ್ರಮಾಣ ಹೆಚ್ಚಾಗಲಿದೆ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ತಿಳಿಸಿದ್ದಾರೆ.

ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಸ್ಸಿ–ಎಸ್ಟಿ ನೌಕರರ ಸಮಾವೇಶದಲ್ಲಿ ಮಾತನಾಡಿದ ಅವರು, ಜಾತಿ ಸಮೀಕ್ಷೆ ಮಾಡಿದಾಗ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕಾಗುತ್ತದೆ. ಸಮಾಜದಲ್ಲಿ ಜಾತಿ ವ್ಯವಸ್ಥೆ ಇದೆ. ಮೇಲು–ಕೀಳು ಎನ್ನುವ ತಾರತಮ್ಯ ನೀತಿಯೂ ಇದೆ. ಕೆಲವೊಂದು ವರ್ಗ ದೇವರಿಂದ ನಮಗೆ ಎಲ್ಲಾ ಸಿಕ್ಕಿದೆ. ನಮ್ಮಿಂದಲೇ ಎಲ್ಲಾ ಎನ್ನುವ ರೀತಿ ವರ್ತಿಸುತ್ತಿದೆ. ಇಂತಹ ಸಂದರ್ಭದಲ್ಲಿ ಶೋಷಿತರು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಬೇಕು. ಸಮಾಜದಲ್ಲಿ ಶೋಷಣೆ ನಿಲ್ಲಬೇಕು ಎಂದರು.

ಸಮುದಾಯದ ಮುಂದಿನ ಪೀಳಿಗೆಗೆ ಶಿಕ್ಷಣ ಕೊಡಿಸುವ ಜವಾಬ್ದಾರಿ ನಿಮ್ಮ ಮೇಲಿದೆ. ಎಸ್‌ಸಿ–ಎಸ್‌ಟಿ ಸಮುದಾಯಕ್ಕೆ ಬಡ್ತಿ ಮೀಸಲಾತಿ ಕೊಟ್ಟಿದ್ದು ಕಾಂಗ್ರೆಸ್ ಸರ್ಕಾರ. ಮೇಲ್ವರ್ಗದ ಜನರು ಬಡ್ತಿ ಮೀಸಲಾತಿಗೆ ವಿರೋಧ ಮಾಡಿದ್ದರು. ಆದರೆ, ಸಿದ್ದರಾಮಯ್ಯ ಅವರು ಇದಕ್ಕೆ ಹೆದರದೆ ಬಡ್ತಿ ಮೀಸಲಾತಿ ಕೊಟ್ಟರು. ಜನಸಂಖ್ಯೆಗೆ ಅನುಗುಣವಾಗಿ ಸಮುದಾಯಕ್ಕೆ ಬಲ ತುಂಬುವ ಕೆಲಸ ಆಗಬೇಕು. ಈ ಕಾರಣಕ್ಕಾಗಿಯೇ ನಾವು ಜಾತಿಗಣತಿ ಪ್ರಾರಂಭ ಮಾಡುತ್ತಿದ್ದೇವೆ. ಪ್ರಸ್ತುತ ದಿನಗಳಲ್ಲಿ ನಾವೇ ಮೀಸಲಾತಿಗಾಗಿ ಕಚ್ಚಾಡುತ್ತಿದ್ದೇವೆ. ಜಾತಿ ಸಮೀಕ್ಷೆ ಮಾಡಿದಾಗ ಮೀಸಲಾತಿ ಪ್ರಮಾಣ ಹೆಚ್ಚಳ ಆಗುತ್ತದೆ ಎಂದು ಭರವಸೆ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರಲ್ಲಿ ಕಾರ್ಗಿಲ್ ವಿಜಯೋತ್ಸವ

ಹುತಾತ್ಮ ಯೋಧರಿಗೆ ಭಾವಪೂರ್ಣ ನಮನ; ಕೆಚ್ಚೆದೆಯ ಹೋರಾಟದ ಗುಣಗಾನ

ಮೈಸೂರು, ಜು.26(ಎಂಟಿವೈ)– ಭಾರತದ ವೀರ ಯೋಧರು ಪಾಕ್ ಸೈನಿಕರ ಬಗ್ಗು ಬಡಿದು ಕಾರ್ಗಿಲ್ ಯುದ್ಧದಲ್ಲಿ ಗೆಲುವು ಸಾಧಿಸಿದ ಸ್ಮರಣಾರ್ಥ ಮೈಸೂರಲ್ಲಿ ವಿವಿಧ ಮಾಜಿ ಸೈನಿಕ ಸಂಘಟನೆಗಳು ಆಯೋಜಿಸಿದ್ದ 'ಕಾರ್ಗಿಲ್ ವಿಜಯೋತ್ಸವ'ದಲ್ಲಿ ನೂರಾರು ದೇಶಭಕ್ತರು ಪಾಲ್ಗೊಂಡು ವೀರಮರಣವನ್ನಪ್ಪಿದ ಯೋಧರಿಗೆ ಭಾವಪೂರ್ಣ ಗೌರವ ನಮನ ಸಲ್ಲಿಸಿದರು.



ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಆಯೋಜಿಸಿದ್ದ ಬೈಕ್ ರ್ಯಾಲಿಯಲ್ಲಿ ಮಾಜಿ ಯೋಧರು ಪಾಲ್ಗೊಂಡರು.



ಮೈಸೂರು ಎಕ್ಸ್-ಸರ್ವೀಸ್‌ಮೆನ್ ಮೂವ್ಮೆಂಟ್ ವತಿಯಿಂದ ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಆಯೋಜಿಸಿದ್ದ ಕಾರ್ಗಿಲ್ ವಿಜಯ ದಿವಸ ಕಾರ್ಯಕ್ರಮದಲ್ಲಿ ಮಾಜಿ ಸೈನಿಕರು, ಎನ್‌ಸಿಸಿ ಕೆಡೆಟ್, ಶಾಲಾ ಮಕ್ಕಳು ಪಾಲ್ಗೊಂಡಿದ್ದರು.

1999ರಲ್ಲಿ ಪಾಕಿಸ್ತಾನ ಸೇನೆ ಕಾರ್ಗಿಲ್ ಪ್ರದೇಶವನ್ನು ಆಕ್ರಮಿಸಿದ್ದಕ್ಕೆ ದಿಟ್ಟ ಪ್ರತ್ಯುತ್ತರ ನೀಡಿದ್ದ ಭಾರತೀಯ ಯೋಧರು ಈ ಯುದ್ಧದಲ್ಲಿ ಗೆಲುವು ಸಾಧಿಸಿದ್ದರು. 1999ರ ಜು.26ರಂದು ಪೂರ್ಣ ಪ್ರಮಾಣದಲ್ಲಿ ಜಯ ಸಾಧಿಸಿದ್ದ ಭಾರತೀಯ ಯೋಧರು ಕಾರ್ಗಿಲ್‌ನ ದುರ್ಗಮ ಪ್ರದೇಶದಲ್ಲಿ ಭಾರತದ ಬಾವುಟ ಹಾರಿಸಿ ವಿಜಯೋತ್ಸವ ಆಚರಿಸಿದ್ದರು. ಈ ಯುದ್ಧ ಗೆದ್ದು 26 ವರ್ಷ ಸಂದ ಹಿನ್ನೆಲೆಯಲ್ಲಿ ಮೈಸೂರಿನ ವಿವಿಧೆಡೆ ಕಾರ್ಗಿಲ್ ವಿಜಯೋತ್ಸವ ಆಚರಿಸಿ, ಈ ಯುದ್ಧದಲ್ಲಿ ವೀರಮರಣವನ್ನಪ್ಪಿದ ಭಾರತೀಯ ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ: ಮೈಸೂರಿನ ಮೆಟ್ರೋಪೋಲ್ ವೃತ್ತದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಪ್ರತಿಮೆ ಮುಂಭಾಗ ಶನಿವಾರ ಬೆಳಗ್ಗೆ ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಆಯೋಜಿಸಿದ್ದ ಬೈಕ್ ರ್ಯಾಲಿಯಲ್ಲಿ ಮಾಜಿ ಸೈನಿಕರು, ಎನ್‌ಸಿಸಿ ಕೆಡೆಟ್, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಮಾಜಿ ಸೈನಿಕರ ಕುಟುಂಬದ ಸದಸ್ಯರೂ ಹಲವು ಸಾರ್ವಜನಿಕರು ಪಾಲ್ಗೊಂಡು ದೇಶಪ್ರೇಮ ಮೆರೆದರು.

ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಮೈಸೂರು ಜಿಲ್ಲಾ ಘಟಕ, ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ವತಿಯಿಂದ ಆಯೋಜಿಸಿದ್ದ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಪ್ರತಿಮೆಗೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹಾಗೂ ಇನ್ನಿತರರು ಮಾಲಾರ್ಪಣೆ ಮಾಡಿದರು. ಬಳಿಕ ಬೈಕ್ ರ್ಯಾಲಿಗೆ ಚಾಲನೆ ನೀಡಲಾಯಿತು.

ಮೆಟ್ರೋಪೋಲ್ ವೃತ್ತದಿಂದ ಹೊರಟು ರೈಲ್ವೆ ನಿಲ್ದಾಣ, ಆಯುರ್ವೇದ ಆಸ್ಪತ್ರೆ, ಸುಭಾಷ್‌ಚಂದ್ರ ವೃತ್ತ, ಅಬ್ದುಲ್ ಕಲಾಂ ಆಜಾದ್ ವೃತ್ತ, ಟಿ.ಎನ್.ನರಸಿಂಹಸ್ವಾಮಿ ವೃತ್ತ, ಬಿಎಂ ರಸ್ತೆ, ಫೌಂಟೇನ್ ವೃತ್ತ, ಡಾ.ಅಂಬೇಡ್ಕರ್ ವೃತ್ತ, ಅಬ್ಬಾ ರಸ್ತೆ, ವೆಂಕಟಲಿಂಗಯ್ಯ ವೃತ್ತ, ಥಿಯೋಬಾಲ್ಡ್ ರಸ್ತೆ, ಹುತಾತ್ಮ ಹೇಮಚಂದ್ರ ವೃತ್ತ, ಹಾರ್ಡಿಂಗ್ ವೃತ್ತ, ಬಿ.ಎನ್. ರಸ್ತೆ, ಗನ್ ಹೌಸ್ ವೃತ್ತ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ ಜೆಎಲ್‌ಬಿ ರಸ್ತೆ ಮುಡಾ ವೃತ್ತದ ಮೂಲಕ ಸಾಗಿ ಜಗನ್ಮೋಹನ ಅರಮನೆ ಆವರಣ ತಲುಪಿತು.

ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಕಾರ್ಗಿಲ್ ಯುದ್ಧದಲ್ಲಿ ಹೋರಾಡಿದ ಸೈನಿಕರ ಗೌರವಾರ್ಥವಾಗಿ ಪ್ರತಿ ವರ್ಷ ಜು.26ರಂದು ಕಾರ್ಗಿಲ್ ವಿಜಯ ದಿವಸ್ ಆಚರಿಸಲಾಗುತ್ತಿದೆ. ದೇಶಕ್ಕಾಗಿ ತಮ್ಮ ಕುಟುಂಬ, ಮನೆ, ಬಂಧು–ಬಳಗ ಸೇರಿದಂತೆ ಎಲ್ಲವನ್ನೂ ಬಿಟ್ಟು ಸೈನಿಕರು ಅವಿರತ ಶ್ರಮಿಸುತ್ತಾರೆ. ಕರ್ತವ್ಯ ನಿಷ್ಠೆ, ತ್ಯಾಗ, ಬಲಿದಾನಗಳ ಮೂಲಕ ಚಳಿ, ಮಳೆ, ಬಿಸಿಲೆನ್ನದೆ ಹಗಲಿರುಳು ದೇಶ ಕಾಯುತ್ತಿದ್ದಾರೆ. ಭಾರತೀಯ ಸೇನೆ ಗಡಿಯಲ್ಲಿ ಕಾಯುತ್ತಿರುವುದರಿಂದ ನಾವಿಂದು ನೆಮ್ಮದಿಯಿಂದ ದೇಶದ ಒಳಗೆ ಬದುಕುತ್ತಿದ್ದೇವೆ. ಅವರ ಧೈರ್ಯ ಸಾಹಸಗಳಿಗೆ ಸಲಾಂ ಹೊಡೆಯಲೇಬೇಕು. ನಿವೃತ್ತರಾಗಿ ಬಂದಂತಹ ಮಾಜಿ ಸೈನಿಕರನ್ನು ನಾವು ಸಮಾಜದಲ್ಲಿ ಗೌರವದಿಂದ ಕಾಣಬೇಕು. ಸರ್ಕಾರ ಮಾಜಿ ಸೈನಿಕರ ಹಿತರಕ್ಷಣೆಗಾಗಿ ಸಕಲ ಸೌಲಭ್ಯಗಳನ್ನು ನೀಡಬೇಕು. ಅವರು ಸಲ್ಲಿಸಿದ ಸೇವೆಯನ್ನು ಸ್ಮರಿಸಬೇಕು. ಆಗ ಮಾತ್ರ ಅವರ ತ್ಯಾಗಕ್ಕೆ ಗೌರವ ಸಲ್ಲಿಸಿದಂತಾಗುತ್ತದೆ. ಕಾರ್ಗಿಲ್‌ನಲ್ಲಿ ಹೋರಾಡಿದ ವೀರ ಸೇನಾನಿಗಳಂತೂ ಸದಾ ಈ ದೇಶದ ಜನರ ಮನಸ್ಸಿನಲ್ಲಿ ಉಳಿಯುತ್ತಾರೆ. ಆ ಮೂಲಕ ಅವರ ಜೀವನ್ಮರಣದ ಹೋರಾಟ ಜೀವಂತವಾಗಿರುತ್ತದೆ ಎಂದು ತಿಳಿಸಿದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮಾತನಾಡಿ, ಯುವ ಜನರು ಹಾಗೂ ವಿದ್ಯಾರ್ಥಿಗಳು ತೆರೆ ಮೇಲೆ ಕಾಣಿಸಿಕೊಳ್ಳುವ ಹೀರೋಗಳನ್ನು ಆರಾಧಿಸುತ್ತಾರೆ. ಅವರ ಜೀವನ ಕ್ರಮ ತೆರೆಯ ಹಿಂದೆ ಅಥವಾ ನೈಜ ಜೀವನದಲ್ಲಿ ಬೇರೆಯೇ ಇರುತ್ತದೆ. ಆದರೂ ತೆರೆ ಮೇಲೆ ಕಂಡೊಡನೆ ಅವರ ಅನುಯಾಯಿಗಳಾಗುತ್ತಾರೆ. ದೇಶ ಕಾಯುವ ಯೋಧರು ನಿಜಕ್ಕೂ ರೋಲ್ ಮಾಡೆಲ್, ಗಡಿಭಾಗದ ಸಿಯಾಚಿನ್‌ನಂತಹ ಪ್ರದೇಶದಲ್ಲೂ ಕೊರೆಯುವ ಚಳಿಯಲ್ಲಿ ಸೈನಿಕರು ದೇಶ ಕಾಯುತ್ತಾರೆ. ಅವರ ನಿಸ್ವಾರ್ಥ ಸೇವೆಯಿಂದಲೇ ದೇಶದ ಜನ ನೆಮ್ಮದಿಯ ಜೀವನ ಕಟ್ಟಿಕೊಂಡಿದ್ದಾರೆ ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ದೇಶದ ರಕ್ಷಣೆಯಲ್ಲಿ ಭಾರತೀಯ ಯೋಧರು ಸದಾ ಮುಂದಿರುತ್ತಾರೆ. ದೇಶ ಸೇವೆಗಾಗಿ ಸೈನ್ಯ ಸೇರುತ್ತಿದ್ದಂತೆ ಸೈನಿಕರಲ್ಲಿ ದೇಶ ಭಕ್ತಿ ಹೆಚ್ಚಾಗುತ್ತದೆ. ಇದರಿಂದ ಎದುರಾಗುವ ಯಾವುದೇ ಸವಾಲನ್ನು ಲೆಕ್ಕಿಸದೆ ಮುನ್ನುಗ್ಗುತ್ತಾರೆ. ಕಾರ್ಗಿಲ್ ಯುದ್ಧದಲ್ಲಿ ಭಾರತೀಯ ಯೋಧರಿಗೆ ಕಠಿಣ ಸವಾಲು ಎದುರಾಗಿತ್ತು. ಪಾಕಿಸ್ತಾನ ಸೈನಿಕರು ಸುಲಭವಾಗಿ ಮುಂದೆ ಬಂದಿದ್ದರೆ, ದುರ್ಗಮ ಪರ್ವತವನ್ನು ಏರಿ ದಾಳಿ ಮಾಡಬೇಕಾದ ಸವಾಲು ಭಾರತೀಯ ಸೈನ್ಯದ ಮುಂದೆ ಇತ್ತು. ಆದರೂ, ನಮ್ಮ ಸೈನಿಕರು ಕೆಚ್ಚೆದೆಯಿಂದ ಮುನ್ನುಗ್ಗಿ ಯುದ್ಧ ಗೆದ್ದಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಆಫ್ ಹೆರಿಟೇಜ್ ಅಧ್ಯಕ್ಷ ರೊ.ಪಿ.ಹೆಚ್. ಎಫ್.ರಾಜು, ಜಿಲ್ಲಾ ಗವರ್ನರ್ ರೊ. ರಾಮಕೃಷ್ಣ, ಮಾಜಿ ಯೋಧರೂ ಹಾಗೂ ಹಿರಿಯ ಕೆಎಎಸ್ ಅಧಿಕಾರಿ ಸಿ.ಎಲ್. ಆನಂದ್, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಕೆ.ಪಿ. ದಿವಾಕರ್, ಎನ್.ಸಿ.ಸಿ.ಗ್ರೂಪ್ ಹೆಡ್ ಕ್ವಾರ್ಟರ್ಸ್ ಕಮಾಂಡೆಂಟ್ ಕರ್ನಲ್ ರೋಹಿತ್ ಠಾಕೂರ್ ಮತ್ತಿತರರು ಉಪಸ್ಥಿತರಿದ್ದರು.

ಮಹಾತ್ಮಗಾಂಧಿ ವೃತ್ತದಲ್ಲಿ ವಿಜಯೋತ್ಸವ: ಮೈಸೂರು ಮಾಜಿ ಸೈನಿಕರ ಮೂವ್ಮೆಂಟ್ ಸಂಘದ ವತಿಯಿಂದ ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಕಾರ್ಗಿಲ್ ವಿಜಯೋತ್ಸವ ಆಚರಿಸಲಾಯಿತು. ಇಂದು ಬೆಳಗ್ಗೆ ಟೌನ್‌ಹಾಲ್‌ನಿಂದ ಮಹಾತ್ಮ ಗಾಂಧಿ ವೃತ್ತದವರೆಗೂ ಮೆರವಣಿಗೆಯಲ್ಲಿ ತೆರಳಿದ ಮಾಜಿ ಯೋಧರು, ಕುಟುಂಬದ ಸದಸ್ಯರು, ಎನ್‌ಸಿಸಿ ಕೆಡೆಟ್‌ಗಳು ಕಾರ್ಗಿಲ್ ವಿಜಯೋತ್ಸವದಲ್ಲಿ ಪಾಲ್ಗೊಂಡರು. ಇದೇ ವೇಳೆ ಶಾಲಾ ಮಕ್ಕಳು ಸೈನಿಕರ ವೇಷಧರಿಸಿ, ತ್ರಿವರ್ಣ ಧ್ವಜ ಹಿಡಿದು ಗಮನ ಸೆಳೆದರು.





ಮೈಸೂರಿನ ಜೆ.ಸಿ.ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಆಯೋಜಿಸಿದ್ದ 'ಕಾರ್ಗಿಲ್ ವಿಜಯ ದಿನ'ದ ಕಾರ್ಯಕ್ರಮದಲ್ಲಿ ಮಾಜಿ ಸೈನಿಕರ ತಂಡ ಪಾಲ್ಗೊಂಡಿತ್ತು. ಮತ್ತೊಂದು ಚಿತ್ರದಲ್ಲಿ ಮೈಸೂರಿನ ನೌಕಾಪಡೆ ನಿವೃತ್ತ ಅಧಿಕಾರಿಗಳ ಸಂಘದ ವತಿಯಿಂದ ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ ಭಾರತೀಯ ನೌಕಾಪಡೆಯ ಕಮ್ಯೂನಿಕೇಷನ್ ಅಧಿಕಾರಿ ಹಾಗೂ ಮೈಸೂರು ಎನ್‌ಸಿಸಿ –3 ಮುಖ್ಯ ತರಬೇತುದಾರರಾದ ಸುರೇಂದ್ರ ಸಿಂಗ್ ಅವರನ್ನು ಗೌರವಿಸಲಾಯಿತು.

ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಆರೋಗ್ಯ ಸೇವೆಗಾಗಿ ಪ್ರತಿಭಟನೆ

ಮಹಾತ್ಮಗಾಂಧಿ ವೃತ್ತದಲ್ಲಿ ಕಾರ್ಗಿಲ್ ವಿಜಯೋತ್ಸವ ಆಚರಿಸಿದ ಬಳಿಕ ಮತ್ತೆ ಟೌನ್‌ಹಾಲ್‌ಗೆ ಮೆರವಣಿಗೆಯಲ್ಲಿ ಬಂದ ಮಾಜಿ ಸೈನಿಕರು ತೋಳಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಮಾಜಿ ಯೋಧರು ಹಾಗೂ ಕುಟುಂಬ ಸದಸ್ಯರಿಗೆ ಆರೋಗ್ಯ ಸೇವೆ ಒದಗಿಸುವಂತೆ ಆಗ್ರಹಿಸಿ ಪ್ರತಿಭಟನೆ ಮಾಡಿದರು. ಕೇಂದ್ರ ಆರೋಗ್ಯ ಸೇವೆ ಅಡಿಯಲ್ಲಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಮಾಜಿ ಸೈನಿಕರು ಮತ್ತು ಕುಟುಂಬದ ಸದಸ್ಯರಿಗೆ ಆರೋಗ್ಯ ಸೇವೆ ನೀಡಲು ನಿರಾಕರಿಸುತ್ತಿವೆ. ಈ ಹಿನ್ನೆಲೆಯಲ್ಲಿ ಸರ್ಕಾರ ಮಾಜಿ ಸೈನಿಕರಿಗೆ ಆರೋಗ್ಯ ಸೇವೆ ಒದಗಿಸಲು ಸೂಚನೆ ನೀಡುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಮಾಜಿ ಸೈನಿಕರ ಮೂವ್ಮೆಂಟ್ ಸಂಘದ ಅಧ್ಯಕ್ಷ ಪ್ರಿನ್ಸ್ ಅಂತೋಣಿ, ಮೈಸೂರು ಎಕ್ಸ್–ಸರ್ವಿಸ್‌ಮೆನ್ ಮೂವ್ಮೆಂಟ್ ಪದಾಧಿಕಾರಿಗಳಾದ ವಿವೇಕಾನಂದ ನಾಯ್ಡು, ಕಿಶೋರ್ ಕದಂ, ರಾಮನಾರಾಯಣ, ಯೋಗಣ್ಣ, ಶ್ರೀಧರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜೆ.ಎಸ್‌ಎಸ್.ಪಾಲಿಟೆಕ್ನಿಕ್ ಕಾಲೇಜು: ಮೈಸೂರಿನ ಮಾಜಿ ಸೈನಿಕರ ತಂಡವೊಂದು ಜೆ.ಎಸ್.ಎಸ್‌ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಆಯೋಜಿಸಿದ್ದ 'ಕಾರ್ಗಿಲ್ ವಿಜಯ ದಿನ'ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೇಶಭಕ್ತಿ ಮೆರೆಯಿತು. ಹುತಾತ್ಮ ಕಾರ್ಗಿಲ್ ಸೇನಾಧಿಕಾರಿಗಳಾದ ಕ್ಯಾ.ವಿಕ್ರಂ ಬತ್ರ, ಲೆ.ಮನೋಜ್ ಪಾಂಡೆ ಮತ್ತು ಕ್ಯಾ.ಸೌರಭ ಕಾಲಿಯಾ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಮರ್ಪಿಸಲಾಯಿತು. ಯುವ ಬ್ರಿಗೇಡ್ ನಿತಿನ್ ಪರದೆಯ ಮೇಲೆ ಕಾರ್ಗಿಲ್ ಚಿತ್ರಣ ಪ್ರದರ್ಶಿಸಿದರು.

ಮಾಜಿ ಸೈನಿಕ ವಿ.ಮಹೇಶ್ ಮಾತನಾಡಿ, ಕಾರ್ಗಿಲ್‌ನಲ್ಲಿ ಹಾರುತ್ತಿರುವ ತ್ರಿವರ್ಣ ಧ್ವಜ ಸುಮ್ಮನೆ ಗಾಳಿಯಲ್ಲಿ ಹಾರುತ್ತಿಲ್ಲ. ಆ ಯುದ್ಧದಲ್ಲಿ ಪ್ರಾಣ ತ್ಯಾಗ ಮಾಡಿದ 527 ಸೈನಿಕರ ಬಲಿದಾನ ಸಾರುತ್ತಿದೆ. ಇಂಥವರಿಗೆ ನಾವು ಈ ದಿನ ಗೌರವ ಸಲ್ಲಿಸದಿದ್ದರೆ ನಾವು ಬದುಕಿದ್ದು ಸತ್ತಂತೆ. ಪ್ರತಿ ವರ್ಷ ಪ್ರತಿಯೊಬ್ಬ ಭಾರತೀಯ ನಾಗರಿಕನೂ ಗೌರವ ಸಲ್ಲಿಸಿದರೆ ಮಾತ್ರ ಹುತಾತ್ಮ ಸೈನಿಕರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸಿದರು.

ವಿಶ್ವ ಮಾನವ ಜೋಡಿ ರಸ್ತೆ: ಮೈಸೂರಿನ ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ಮೈಸೂರಿನ ನೌಕಾಪಡೆ ನಿವೃತ್ತ ಅಧಿಕಾರಿಗಳ ಸಂಘದ ವತಿಯಿಂದ ಆಯೋಜಿಸಿದ್ದ ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮದಲ್ಲಿ ಭಾರತೀಯ ನೌಕಾಪಡೆಯ ಕಮ್ಯೂನಿಕೇಷನ್ ಅಧಿಕಾರಿ ಹಾಗೂ ಮೈಸೂರು ಎನ್‌ಸಿಸಿ –3ಮುಖ್ಯ ತರಬೇತುದಾರರಾದ ಸುರೇಂದ್ರ ಸಿಂಗ್ ಅವರನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಗಜಾನನ ಟಿ.ಭಟ್, ನೌಕಾಪಡೆ ನಿವೃತ್ತ ಅಧಿಕಾರಿ ಚಂದ್ರಕುಮಾರ್, ಬಿ.ಎಸ್., ಸಂಚಾಲಕರಾದ ಸೈಯದ್ ತಾಜುದ್ದೀನ್ ಹೈದರಿ, ಉಪಾಧ್ಯಕ್ಷ ಉತ್ತಪ್ಪ, ವೀರ ನಾರಿಯರ ಘಟಕದ ಅಧ್ಯಕ್ಷೆ ರಜನಿ, ಮೈಥಿಲಿ ಬಾಲಾಜಿ, ಪ್ರದೀಪ್ ರಾಜ್, ವಿಶ್ವತ್, ರಘುನಾಥನ್ ಇದ್ದರು.

ತರಂಗಂ ನಾಟಕೋತ್ಸವಕ್ಕೆ ಚಾಲನೆ

ಪಾಠಕ್ಕಿಂತಲೂ ನಾಟಕಗಳು ವಿದ್ಯಾರ್ಥಿಗಳ ಮೇಲೆ ಪರಿಣಾಮಕಾರಿ: ಪ್ರೊ.ರಾಮೇಗೌಡ



ಮೂರು ದಿನಗಳ ತರಂಗಂ ನಾಟಕೋತ್ಸವ ಕಾರ್ಯಕ್ರಮವನ್ನು ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್.ರಾಮೇಗೌಡ ಉದ್ಘಾಟಿಸಿದರು.

ಮೈಸೂರು, ಜು.26(ಎಸ್‌ಪಿಎನ್)– ಸರ್ಕಾರದ ವಿವಿಧ ಇಲಾಖೆಯಲ್ಲಿ ನಡೆಯುವ ಭ್ರಷ್ಟಾಚಾರ, ಸಮಾಜದಲ್ಲಿ ನಡೆಯುವ ಮೋಸ–ವಂಚನೆ, ಮಾನವ ಸಂಬಂಧಗಳಲ್ಲಿನ ಬಿರುಕು ಹಾಗೂ ಆಹಾರದಲ್ಲಿ ಕಲಬೆರಕೆ ಮಾಡುವುದು ಸಾಮಾಜಿಕ ಪಿಡುಗುಗಳಾಗಿ ಬದಲಾಗಿವೆ ಎಂದು ವಿಶ್ರಾಂತ ಕುಲಪತಿ ಪ್ರೊಎನ್.ಎಸ್. ರಾಮೇಗೌಡ ತೀವ್ರ ಬೇಸರ ವ್ಯಕ್ತಪಡಿಸಿದರು.

ಮೈಸೂರು ಕಲಾಮಂದಿರದ ಆವರಣದ ಕಿರುರಂಗ ಮಂದಿರದಲ್ಲಿ ತರಂಗಂ ಟ್ರಸ್ಟ್ ತಲಕಾಡು ಹಾಗೂ ಕನ್ನಡ ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು ಸಹಯೋಗದಲ್ಲಿ ನಡೆದ 3 ದಿನಗಳ ತರಂಗಂ ನಾಟಕೋತ್ಸವ 2025 ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹೊಸ ಪದ್ಧತಿಯ ಸಾಮಾಜಿಕ ಪಿಡುಗುಗಳ ವಿರುದ್ಧ ಹಳ್ಳಿಹಳ್ಳಿಗಳಲ್ಲಿ ಬೀದಿ ನಾಟಕಗಳ ಮೂಲಕ ಪರಿಣಾಮಕಾರಿಯಾಗಿ ಜನರಲ್ಲಿ ಜಾಗೃತಿ ಮೂಡಿಸಬೇಕು. ಶಾಲಾ ಕಾಲೇಜುಗಳಲ್ಲಿ ಕಲಿಯುವ ಪಾಠಕ್ಕಿಂತಲೂ ನಾಟಕಗಳು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತವೆ ಎಂದರು.

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಮಾತನಾಡಿ, ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರಂಗಕಲೆ ಪ್ರಮುಖ ಪಾತ್ರ ವಹಿಸಿದೆ. ಬೀದಿನಾಟಕ, ಜಾನಪದ ಹಾಡುಗಳು ಸ್ವಾತಂತ್ರ್ಯ ಹೋರಾಟಕ್ಕೆ ಜನ ಸಜ್ಜುಗೊಳಿಸಲು ಪ್ರಮುಖ ಸಾಧನವಾಗಿತ್ತು ಎಂದರು.

ಈ ಸಂದರ್ಭದಲ್ಲಿ ರಂಗಭೂಮಿಯಲ್ಲಿ ಸಾಧನೆ ಮಾಡಿದ ದೀಪಕ್ ಮೈಸೂರು, ಧನಂಜಯ, ಜನಾರ್ಧನ್ ಅವರನ್ನು ಸನ್ಮಾನಿಸಲಾಯಿತು. ವೇದಿಕೆ ಕಾರ್ಯಕ್ರಮದ ನಂತರ ಮಂಡ್ಯ ರಮೇಶ್ ನಿರ್ದೇಶನದ 'ಕಟ್ಟೆ ಪುರಾಣ' ನಾಟಕ ಪ್ರದರ್ಶನವಾಯಿತು. ಸುಯೋಗ್ ಆಸ್ಪತ್ರೆಯ ಸಂಸ್ಥಾಪಕರಾದ ಡಾ.ಎಸ್.ಪಿ. ಯೋಗಣ್ಣ, ಮೈಸೂರು ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಪಿ ಸುದರ್ಶನ್ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಗಿಲ್ ವಿಜಯ್ ದಿವಸ್ ಆಚರಣೆ



ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾರ್ಗಿಲ್ ವಿಜಯ ದಿವಸ್ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಅಧ್ಯಾಪಕ ಸಲಹೆಗಾರ ಪ್ರೊ.ಲಾವಣ್ಯ, ಎನ್.ಸಿ.ಸಿ ಅಧಿಕಾರಿ ಮೇಜರ್ ಶ್ರೀಹರ್ಷ.ಬಿ.ಎಸ್, ಎನ್.ಸಿ.ಸಿ ಕೆಡೆಟ್‌ಗಳು, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಹರಿಪ್ರಸಾದ್ ಕೆ.ಎನ್., ರಾ.ಸೇ.ಯೋ ಸ್ವಯಂ ಸೇವಕರು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಗುಂಪು ಹತ್ಯೆ ಎಫ್‌ಐಆರ್‌ಗೂ ಮುನ್ನ ಹಿರಿಯ ಅಧಿಕಾರಿಗಳ ಒಪ್ಪಿಗೆ ಪಡೆಯಿರಿ



ಡಾ.ಎಂ. ಸಲೀಂ

ಬೆಂಗಳೂರು, ಜು.26– ಗುಂಪು ಹತ್ಯೆ ಕೃತ್ಯಗಳ ಸಂಬಂಧ ಎಫ್‌ಐಆರ್ ದಾಖಲಿಸುವ ಮುನ್ನ ಹಿರಿಯ ಅಧಿಕಾರಿಗಳಿಂದ ಅನುಮೋದನೆ ಪಡೆಯುವಂತೆ ಸೂಚಿಸಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ. ಸಲೀಂ ಸುತ್ತೋಲೆ ಹೊರಡಿಸಿದ್ದಾರೆ.

ಕೇಂದ್ರ ಗೃಹ ಕಾರ್ಯದರ್ಶಿಗಳ ಸೂಚನೆ ಹಿನ್ನೆಲೆಯಲ್ಲಿ ಗುಂಪು ಹತ್ಯೆ ಕೃತ್ಯದ ಸಂಬಂಧ ಎಫ್‌ಐಆರ್ ದಾಖಲು ಪ್ರಕ್ರಿಯೆ ಬಗ್ಗೆ ಡಿಜಿ–ಐಜಿಪಿ ಅವರು ಸುತ್ತೋಲೆ ಹೊರಡಿಸಿದ್ದಾರೆ. ಎಲ್ಲಾ ಠಾಣಾಧಿಕಾರಿಗಳು ಹಾಗೂ ತನಿಖಾಧಿಕಾರಿಗಳು ಪ್ರಥಮ ವರ್ತಮಾನ ವರದಿಯಲ್ಲಿ ಗುಂಪು ಹತ್ಯೆ ಆರೋಪದ 304, 103(2), 111, 113(2) ಅಳವಡಿಸಿಕೊಳ್ಳುವ ಮುನ್ನ ಮೇಲಾಧಿಕಾರಿಗಳ ಅನುಮೋದನೆ ಪಡೆದುಕೊಳ್ಳಬೇಕು ಎಂದು ಸ್ಪಷ್ಟಪಡಿಸಿದ್ದಾರೆ.

ಸೂಚನೆಗಳು ಹೀಗಿವೆ: ದೂರುದಾರರು ಸಲ್ಲಿಸುವ ದೂರನ್ನು ಸ್ವೀಕರಿಸಿದಾಗ ಅದರಲ್ಲಿ ಭಾರತ ನ್ಯಾಯ ಸಂಹಿತೆ–2023ರ ಅಪರಾಧಿಕ ಕಲಂಗಳಾದ 304, 103(2), 111 ಮತ್ತು 113(ಬಿ)ಗಳ ಅಪರಾಧಿಕ ಅಂಶಗಳು ಮೇಲ್ನೋಟಕ್ಕೆ ಕಂಡುಬರುತ್ತವೆಯೇ ಎಂಬುದನ್ನು ಪರಿಶೀಲಿಸುವುದು. ಸದರಿ ದೂರಿನಲ್ಲಿ ಮೇಲ್ಕಾಣಿಸಿದ ಅಪರಾಧಿಕ ಅಂಶಗಳು ಕಂಡು ಬಂದರೆ ಮೇಲಾಧಿಕಾರಿಗಳ ಗಮನಕ್ಕೆ ತರಬೇಕು. ಬಳಿಕ ಅಧಿಕಾರಿಗಳ ಅನುಮತಿ ಪಡೆದು ಎಫ್‌ಐಆರ್ ದಾಖಲಿಸಬೇಕು. ಜಿಲ್ಲಾ ಮಟ್ಟದಲ್ಲಿ ಎಸ್ಪಿ ಹಾಗೂ ಕಮಿಷನರೇಟ್‌ಗಳಲ್ಲಿ ಡಿಸಿಪಿ ಅವರಿಗೆ ಅನುಮೋದನೆ ನೀಡುವ ಅಧಿಕಾರವಿದೆ. ಒಂದು ವೇಳೆ ಕಾನೂನು ಮತ್ತು ಸುವ್ಯವಸ್ಥೆ ಅಥವಾ ಸಾರ್ವಜನಿಕ ಸುರಕ್ಷತೆಯ ತುರ್ತು ಸಂದರ್ಭಗಳಲ್ಲಿ ಲಿಖಿತವಾಗಿ ಕೋರಿಕೆ ಸಲ್ಲಿಸಲು ಮತ್ತು ಅನುಮೋದನೆ ಪಡೆದುಕೊಳ್ಳಲು ಸಾಧ್ಯವಾಗದಿದ್ದಲ್ಲಿ, ಆಗ ಸಂಬಂಧಿಸಿದ ಠಾಣಾಧಿಕಾರಿ/ತನಿಖಾಧಿಕಾರಿಗಳು ಮೌಖಿಕವಾಗಿ ತಮ್ಮ ಕೋರಿಕೆ ಸಲ್ಲಿಸಿ ಹಿರಿಯ ಅಧಿಕಾರಿಯಿಂದ ಮೌಖಿಕವಾಗಿ ಅನುಮೋದನೆಯ ಆದೇಶ ಪಡೆದುಕೊಂಡು ಮುಂದಿನ ಕ್ರಮ ಕೈಗೊಳ್ಳಬೇಕು. ನಂತರ 24 ಘಂಟೆಯೊಳಗಾಗಿ ಲಿಖಿತ ರೂಪದಲ್ಲಿ ಘಟನೋತ್ತರ ಅನುಮೋದನೆ ಪಡೆದುಕೊಳ್ಳಬೇಕು.

ಕೆಎಸ್‌ಆರ್‌ಟಿಸಿಗೆ ಅನುಕಂಪದ ಆಧಾರದಲ್ಲಿ 45 ಕಾನ್‌ಸ್ಟೇಬಲ್‌ಗಳ ನೇಮಕ

ಬೆಂಗಳೂರು, ಜು.26– ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಕರ್ನಾಟಕ ರಾಜ್ಯ ಸಾರಿಗೆಯ 45 ಕಾನ್‌ಸ್ಟೇಬಲ್‌ಗಳಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡು ನೇಮಕಾತಿ ಪತ್ರಗಳನ್ನು ಹಸ್ತಾಂತರಿಸಿದರು. ಕೆಎಸ್‌ಆರ್‌ಟಿಸಿಯ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವರು ಮೃತ ಸಿಬ್ಬಂದಿಯ ಕುಟುಂಬಗಳಿಗೆ 3.60 ಕೋಟಿ ರೂಪಾಯಿಗಳನ್ನು ವಿತರಿಸಿದರು.

ಈ ವರ್ಷ ಕೆಎಸ್‌ಆರ್‌ಟಿಸಿಯಲ್ಲಿ 271 ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ನಾಲ್ಕು ಸಾರಿಗೆ ನಿಗಮಗಳಲ್ಲಿ 1,000ಕ್ಕೂ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಎಂದು ಸಚಿವರು ಹೇಳಿದರು.

'ಸಾರಿಗೆ ಸುರಕ್ಷಾ' ಅಪಘಾತ ವಿಮೆಯಡಿಯಲ್ಲಿ 1 ಕೋಟಿ ರೂಪಾಯಿಗಳ ಚೆಕ್ ನೀಡಲಾಗಿದೆ, ಇದುವರೆಗೆ 27 ಕೋಟಿ ರೂಪಾಯಿಗಳನ್ನು ಪಾವತಿಸಲಾಗಿದೆ. ನೌಕರರ ಕುಟುಂಬ ಕಲ್ಯಾಣ ಪರಿಹಾರ ಯೋಜನೆಯಡಿಯಲ್ಲಿ ಇನ್ನೂ 2.60 ಕೋಟಿ ರೂಪಾಯಿ ವಿತರಿಸಲಾಗಿದೆ. ಬೆಂಗಳೂರು–ತಿರುಪತಿ, ಮಂಗಳೂರು–ಬೆಂಗಳೂರು ಮತ್ತು ಮೈಸೂರು–ಮಂತ್ರಾಲಯ ಸೇರಿದಂತೆ ಐದು ಹೊಸ ಐರಾವತ ಕ್ಲಬ್ ಕ್ಲಾಸ್ 2.0 ಬಸ್‌ಗಳನ್ನು ಸಹ ಪ್ರಾರಂಭಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರು ಪತ್ರಕರ್ತರ ಕ್ರೀಡಾಕೂಟಕ್ಕೆ ಚಾಲನೆ



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಓವಲ್ ಮೈದಾನದಲ್ಲಿ ಏರ್ಪಡಿಸಿರುವ ಎರಡು ದಿನಗಳ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಲಾಯಿತು.

'ಕೆಬಿಜಿ ಕಪ್' ಮುಡಿಗೇರಿಸಿಕೊಂಡ ಗ್ರಾಮಾಂತರ ಕಾರ್ಯದರ್ಶಿ ತಂಡ

ಇಂದು ನಡೆದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕೆಬಿಜಿ ಕಪ್‌ಗಾಗಿ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಉಪಾಧ್ಯಕ್ಷ, ಎಂಡಿಜೆಎ, ಗ್ರಾಮಾಂತರ ಕಾರ್ಯದರ್ಶಿ ಸೇರಿದಂತೆ 5 ತಂಡಗಳು ಸೆಣಸಾಟ ನಡೆಸಿದವು. ಮೊದಲ ಪಂದ್ಯ ಅಧ್ಯಕ್ಷರ ತಂಡ ಮತ್ತು ನಗರ ಉಪಾಧ್ಯಕ್ಷರ ತಂಡದ ನಡುವೆ ನಡೆದು ಅಧ್ಯಕ್ಷರ ತಂಡವು 4 ವಿಕೆಟ್ ನಷ್ಟಕ್ಕೆ 75 ರನ್ ಗಳಿಸಿತ್ತು. ಅದನ್ನು ಬೆನ್ನತ್ತಿದ್ದ ಉಪಾಧ್ಯಕ್ಷರ ತಂಡವು ಯಾವುದೇ ವಿಕೆಟ್ ನಷ್ಟವಿಲ್ಲದೇ ಜಯಗಳಿಸಿತ್ತು.

ನಂತರ ನಡೆದ ಎರಡನೇ ಪಂದ್ಯದಲ್ಲಿ ಗ್ರಾಮಾಂತರ ಕಾರ್ಯದರ್ಶಿ ತಂಡವು ಪ್ರಧಾನ ಕಾರ್ಯದರ್ಶಿ ತಂಡಕ್ಕೆ 56 ರನ್ ಟಾರ್ಗೆಟ್ ನೀಡಿತ್ತು. ಪ್ರಧಾನ ಕಾರ್ಯದರ್ಶಿ ತಂಡವು 3 ವಿಕೆಟ್ ನಷ್ಟಕ್ಕೆ ಕೇವಲ 39 ರನ್ ಗಳಿಸಿ, ಸೋಲೊಪ್ಪಿಕೊಂಡಿತ್ತು. ಸೆಮಿಫೈನಲ್‌ನಲ್ಲಿ ಉಪಾಧ್ಯಕ್ಷ ತಂಡವು ಎಂಡಿಜೆಎ ತಂಡದ ವಿರುದ್ಧ 6 ರನ್‌ಗಳ ಜಯಗಳಿಸಿತ್ತು ಫೈನಲ್ ಪಂದ್ಯದಲ್ಲಿ ಗ್ರಾಮಾಂತರ ಕಾರ್ಯದರ್ಶಿ ಮತ್ತು ಉಪಾಧ್ಯಕ್ಷ ತಂಡಗಳು ಮುಖಾಮುಖಿ ಆಯಿತು. ಮೊದಲು ಉಪಾಧ್ಯಕ್ಷ ತಂಡವು ಟಾಸ್ ಗೆದ್ದು, ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು. ಗ್ರಾಮಾಂತರ ಕಾರ್ಯದರ್ಶಿ ತಂಡ ಬ್ಯಾಟಿಂಗ್ ಮಾಡಿ 70 ರನ್ ಟಾರ್ಗೆಟ್ ನೀಡಿತ್ತು. ಟಾರ್ಗೆಟ್ ಬೆನ್ನತ್ತಿದ್ದ ಉಪಾಧ್ಯಕ್ಷ ತಂಡವು 6 ಓವರ್‌ನಲ್ಲಿ 54 ರನ್ ಮಾತ್ರ ಗಳಿಸಲು ಸಾಧ್ಯವಾಯಿತು. 16ರನ್‌ಗಳಿಂದ ಗೆದ್ದ ಗ್ರಾಮಾಂತರ ಕಾರ್ಯದರ್ಶಿ ತಂಡವು ಈ ಬಾರಿಯ 'ಕೆಬಿಜಿ ಕಪ್' ಮುಡಿಗೇರಿಸಿಕೊಂಡಿತು.

ಮೈಸೂರು, ಜು.26(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಓವಲ್ ಮೈದಾನದಲ್ಲಿ ಏರ್ಪಡಿಸಿರುವ ಎರಡು ದಿನಗಳ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ನ ಮೈಸೂರು ವಲಯದ ಸಂಯೋಜಕ ಆರ್.ಕೆ.ಹರಿಕೃಷ್ಣ ಕುಮಾರ್, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ.ಸಿ.ವೆಂಕಟೇಶ್ ಮತ್ತಿತರ ಗಣ್ಯರು ಬಲೂನ್‌ಗಳನ್ನು ಹಾರಿಬಿಡುವುದರ ಜೊತೆಗೆ ಕ್ರಿಕೆಟ್ ಬ್ಯಾಟ್ ಬೀಸುವ ಮೂಲಕ ಪತ್ರಕರ್ತರ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

ನಂತರ ಮೈಸೂರು ವಿವಿಯ ಕುಲಪತಿ ಲೋಕನಾಥ್ ಮಾತನಾಡಿ, ಮನೋ ವಿಕಾಸ ಮತ್ತು ಬುದ್ಧಿ ಚುರುಕುಗೊಳ್ಳಲು ಕ್ರೀಡೆ ಪ್ರತಿಯೊಬ್ಬರಿಗೂ ಅಗತ್ಯ, ಹಾಗೆಯೇ ದೈಹಿಕ ಮಾನಸಿಕ ಆರೋಗ್ಯಕ್ಕೂ ಸಹಕಾರಿಯಾಗಿದೆ. ಕೆಲಸದ ಒತ್ತಡದ ನಡುವೆಯೂ ಪತ್ರಕರ್ತರು ಒಂದೆಡೆ ಸೇರಿ ಕ್ರೀಡೆಯಲ್ಲಿ ಪಾಲ್ಗೊಂಡಿರುವುದು ಸಂತಸದ ಸಂಗತಿಯಾಗಿದೆ. ಕೇವಲ ಗೆಲುವು ಮುಖ್ಯವಲ್ಲ, ಸ್ಪರ್ಧೆಯಲ್ಲಿ ಭಾಗವಹಿಸುವುದು ಮುಖ್ಯವಾಗಿದ್ದು, ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಎಂದ ಅವರು, ಈ ರೀತಿಯ ಚಟುವಟಿಕೆಗಳು ಸಂಘದ ಸದಸ್ಯರ ಸೌಹಾರ್ದತೆಯ ವೃದ್ಧಿಗೆ ಸಹಕಾರಿಯಾಗಲಿದೆ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ ದೀಪಕ್ ಮಾತನಾಡಿ, ಮೈಸೂರು ಪತ್ರಿಕೋದ್ಯಮಕ್ಕೆ ಕೆಬಿಜಿ ಮತ್ತು ರಾಜಶೇಖರ್ ಕೋಟಿ ಅವರು ಎರಡು ಕಣ್ಣುಗಳಂತೆ ಇದ್ದು, ಕೆಬಿಜಿ ಅವರಿಗೆ ಕ್ರೀಡೆಯ ಬಗ್ಗೆ ಸಾಕಷ್ಟು ಒಲವಿತ್ತು. ಈ ಹಿನ್ನೆಲೆಯಲ್ಲಿ ಈ ಬಾರಿಯ ಕ್ರೀಡಾಕೂಟದಲ್ಲಿ ನಡೆಯುತ್ತಿರುವ ಕ್ರಿಕೆಟ್ ಕಪ್‌ಗೆ 'ಕೆಬಿಜಿ ಕಪ್' ಎಂದು ಹೆಸರಿಡಲಾಗಿದೆ, ಈ ಮೂಲಕ ಅವರಿಗೆ ಗೌರವ ಸಲ್ಲಿಸುವುದು ನಮ್ಮ ಕರ್ತವ್ಯ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ಹಾಗೂ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ಭಾನುವಾರದ ಕಾರ್ಯಕ್ರಮ : ಬೆಳಗ್ಗೆ 6.30ಕ್ಕೆ ಷಟಲ್ ಬ್ಯಾಡ್ಮಿಂಟನ್ ಕೋರ್ಟ್ ಪಂದ್ಯಾವಳಿಯನ್ನು ಆಯೋಜಿಸಿದ್ದು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಲಿದ್ದಾರೆ. ನಂತರ ಪತ್ರಕರ್ತರ ಕುಟುಂಬದವರಿಗಾಗಿ ವಿವಿಧ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಮಧ್ಯಾಹ್ನ 3.30ಕ್ಕೆ ಬಹುಮಾನ ವಿತರಣಾ ಕಾರ್ಯಕ್ರಮ ಏರ್ಪಡಿಸಿದ್ದು, ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಬಹುಮಾನ ವಿತರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಮೂಲ್ ಅಧ್ಯಕ್ಷ ಆರ್.ಚಲುವರಾಜು, ವಿಜಯನಗರ ಎಸಿಪಿ ರವಿಪ್ರಸಾದ್, ಉದ್ಯಮಿ ಎ.ಪಿ.ನಾಗೇಶ್, ಜೆಎಸ್‌ಎಸ್ ಮುಖ್ಯಸ್ಥ ಶ್ರೀಹರಿ ದ್ವಾರಕನಾಥ್, ರಾಜುಕಾರ್ಯ ಭಾಗವಹಿಸಲಿದ್ದಾರೆ. ಶಾಸಕ ಡಿ.ರವಿಶಂಕರ್ ಅವರು ಅಂತರರಾಷ್ಟ್ರೀಯ ಬಾಸ್ಕೆಟ್‌ಬಾಲ್ ಕ್ರೀಡಾಪಟು ಕಲಿಯಂಡ ಡಾ. ರೇಷ್ಮಾ ಚೆಂಗಪ್ಪ ಮತ್ತು ಕ್ರೀಡಾ ವರದಿಗಾರ ಗಿರೀಶ್ ದೊಡ್ಡಮನಿ ಅವರನ್ನು ಅಭಿನಂದಿಸಲಿದ್ದಾರೆ.

ಮೈಸೂರು ಮಿತ್ರ

ಕೆಆರ್‌ಎಸ್‌ನಿಂದ 50 ಸಾವಿರ ಕ್ಯೂಸೆಕ್ ನೀರು ಬಿಡುಗಡೆ

ಪ್ರವಾಹದ ಭೀತಿ, ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಸೂಚನೆ



ಮಂಡ್ಯ, ಜು.26– ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜ ಸಾಗರ (ಕೆಆರ್‌ಎಸ್) ಸುತ್ತ–ಮುತ್ತ ಪ್ರವಾಹದ ಭೀತಿ ಎದುರಾಗಿದ್ದು, ನದಿ ಪಾತ್ರದ ಜನರು ಎಚ್ಚರಿಕೆಯಿಂದ ಇರುವುದರ ಜೊತೆಗೆ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಗೊಳ್ಳುವಂತೆ ಸೂಚಿಸಲಾಗಿದೆ.

ಕಾವೇರಿ ಜಲಾನಯನ ಪ್ರದೇಶದಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ಕೆಆರ್‌ಎಸ್ ಒಳ ಹರಿವಿನಲ್ಲಿ ಭಾರೀ ಹೆಚ್ಚಳ ಕಂಡಿರುವುದರಿಂದ ಸುರಕ್ಷತೆಯ ದೃಷ್ಟಿಯಿಂದ ಕೆಆರ್‌ಎಸ್‌ನಿಂದ 50 ಸಾವಿರ ಕ್ಯೂಸೆಕ್ ನೀರನ್ನು ನದಿಗಳಿಗೆ ಬಿಡಲಾಗುತ್ತಿರುವುದರಿಂದ ಪ್ರವಾಹದ ಭೀತಿ ಎದುರಾಗಿದೆ. ಸಾರ್ವಜನಿಕರು ತಮ್ಮ ಆಸ್ತಿ–ಪಾಸ್ತಿ, ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಗೊಳಿಸಲು ಜಿಲ್ಲಾಡಳಿತದೊಂದಿಗೆ ಸಹಕರಿಸುವಂತೆ ಕಾವೇರಿ ನೀರಾವರಿ ನಿಗಮದ ಪ್ರಕಟಣೆ ಮನವಿ ಮಾಡಿದೆ.

ನಾಳೆ ಮದ್ದೂರಲ್ಲಿ 1146 ಕೋಟಿ ರೂ.ಕಾಮಗಾರಿಗೆ ಶಂಕುಸ್ಥಾಪನೆ

ಸಿಎಂ, ಡಿಸಿಎಂ ಸೇರಿದಂತೆ ಸಚಿವರು ಕಾರ್ಯಕ್ರಮದಲ್ಲಿ ಭಾಗಿ

ಮದ್ದೂರು: ತಾಲೂಕಿನಲ್ಲಿ 1146.76 ಕೋಟಿ ರೂ. ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಗೆ ವೇದಿಕೆ ಸಜ್ಜಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜು.28 ರಂದು ಮದ್ದೂರಿನಲ್ಲಿ ಚಾಲನೆ ನೀಡಲಿದ್ದಾರೆ.

ಮದ್ದೂರು ತಾಲೂಕಿನಲ್ಲಿ ಮುಖ್ಯ ಮಂತ್ರಿಗಳು, ಉಪಮುಖ್ಯಮಂತ್ರಿಗಳನ್ನು ಸ್ವಾಗತಿಸಲು ಕಾರ್ಯಕ್ರಮಕ್ಕೆ ವಿಶೇಷ ವೇದಿಕೆ ಸಿದ್ಧವಾಗಿದೆ. ಶಿವಪುರ ಸತ್ಯಾಗ್ರಹ ಸೌಧದ ವಿನ್ಯಾಸದೊಂದಿಗೆ ವೇದಿಕೆಯ ಮುಂಭಾಗ ಆಕರ್ಷಕವಾಗಿ ಸಿದ್ಧವಾಗಿದೆ.

ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಮಾಹಿತಿ ನೀಡಲು ಕೃಷಿ, ತೋಟಗಾರಿಕೆ ಸೇರಿದಂತೆ ವಿವಿಧ ಇಲಾಖೆಗಳು ವಸ್ತುಪ್ರದರ್ಶನ ಮಳಿಗೆಯನ್ನು ತೆರೆಯಲಾಗುವುದು.

ಕಾರ್ಯಕ್ರಮ ಕುರಿತಂತೆ ಮದ್ದೂರು ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಎಂ.ಉದಯ್ ಅವರು ಮಾತನಾಡಿ ಸರ್ಕಾರವು ಅಭಿವೃದ್ಧಿಗೆ ಆದ್ಯತೆ ನೀಡಿದೆ ಎಂಬುದಕ್ಕೆ ಜುಲೈ 28ರಂದು ನಡೆಯಲಿರುವ ಕಾರ್ಯಕ್ರಮ ಸಾಕ್ಷಿಯಾಗಲಿದೆ ಎಂದರು.

ರೈತರಿಗೆ ಹೆಚ್ಚು ಅನುಕೂಲವಾಗುವಂತೆ ನಾಲೆ ಹಾಗೂ ಕೆರೆಗಳ ಅಭಿವೃದ್ಧಿಗೆ ಆದ್ಯತೆ ನೀಡಿರುವ ಕಾಮಗಾರಿಗಳು ಹಾಗೂ ರಸ್ತೆ, ಚರಂಡಿ, ಕುಡಿಯುವ ನೀರಿಗೆ ಸಂಬಂಧಿಸಿದ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನಡೆಯಲಿದೆ ಎಂದರು.

ಕಾರ್ಯಕ್ರಮದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಸರ್ಕಾರದೊಂದಿಗೆ ಅಭಿವೃದ್ಧಿ ಕೆಲಸಗಳಲ್ಲಿ ಕೈ ಜೋಡಿಸಬೇಕು. ಸಾರ್ವಜನಿಕರು ಕಾರ್ಯಕ್ರಮಕ್ಕೆ ಆಗಮಿಸಲು 500 ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ 16 ಇಲಾಖೆಗಳ ಒಟ್ಟು 87 ಕಾಮಗಾರಿಗಳ ಪೈಕಿ 60 ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ 27 ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಲಿದೆ. ಎಲ್ಲಾ ಕಾಮಗಾರಿಗಳ ಒಟ್ಟು ಮೊತ್ತ 1146.76 ಕೋಟಿ ರೂ ಗಳಾಗಿರುತ್ತದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ಮಾತನಾಡಿ ಕಾರ್ಯಕ್ರಮಕ್ಕೆ ವಿವಿಧ ಭಾಗಗಳಿಂದ ಆಗಮಿಸುವ ವಾಹನಗಳನ್ನು ನಿಲುಗಡೆ ಮಾಡಲು ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಸೂಕ್ತ ಬಂದೋ ಬಸ್ತ್ ವ್ಯವಸ್ಥೆಗಾಗಿ 1000 ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗುವುದು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್. ನಂದಿನಿ ಅವರು ಮಾತನಾಡಿ ಕಾರ್ಯಕ್ರಮದ ದಿನದಂದು ಜೀತ ವಿಮುಕ್ತ 85 ಜನರಿಗೆ ನನ್ನ ಗುರುತು ಅಭಿಯಾನದಡಿ 14 ದಾಖಲೆಗಳನ್ನು ನೀಡಲಾಗುವುದು. ಸಾರಥಿ ಯೋಜನೆಯಡಿ ಇಬ್ಬರಿಗೆ ಕಾರ್ ಖರೀದಿಸಲು ಸಹಾಯಧನ ನೀಡಲಾಗುವುದು ಎಂದರು. ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಶಾಸಕ ದಿನೇಶ್ ಗೂಳಿಗೌಡ, ಉಪವಿಭಾಗಾಧಿಕಾರಿ ಶಿವಮೂರ್ತಿ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.



ಮುಖ್ಯಮಂತ್ರಿಗಳ ಕಾರ್ಯಕ್ರಮದ ಸಿದ್ಧತೆಯನ್ನು ಪರಿಶೀಲಿಸುತ್ತಿರುವ ಶಾಸಕ ಕೆ.ಎಂ.ಉದಯ್. ಈ ವೇಳೆ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಷುಗರ್ ಕಾರ್ಖಾನೆ ಅಭಿವೃದ್ಧಿಗೆ ಸರ್ಕಾರದಿಂದ ಹತ್ತು ಕೋಟಿ ಬಿಡುಗಡೆ

ಸಿಎಂ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಅಭಿನಂದನೆ ಸಲ್ಲಿಸಿದ ಮೈಷುಗರ್ ಅಧ್ಯಕ್ಷ ಗಂಗಾಧರ್

ಮಂಡ್ಯ: ಮೈಷುಗರ್ ಸಕ್ಕರೆ ಕಾರ್ಖಾನೆಯು ಯಶಸ್ವಿಯಾಗಿ ಕಬ್ಬು ನುರಿಸಲು ಮೂರನೇ ಬಾರಿಗೆ 10 ಕೋಟಿ ರೂ.ಗಳ ನೆರವನ್ನು ನೀಡಿ ಸಹಕರಿಸಿರುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಜಿಲ್ಲೆಯ ಎಲ್ಲಾ ಶಾಸಕರಿಗೆ ಅಭಿನಂದನೆ ಸಲ್ಲಿಸುವುದಾಗಿ ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮೈಷುಗರ್ ಅಧ್ಯಕ್ಷ ಗಂಗಾಧರ್.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಸತತವಾಗಿ ನೆರವು ನೀಡುತ್ತಿದ್ದು, ಕಳೆದ ಹಂಗಾಮಿನಲ್ಲಿ ಸರ್ಕಾರದ ಅನುದಾನ ಪಡೆಯದೇ ರೈತರಿಗೆ ಪೂರ್ಣ ಹಣವನ್ನು ಪಾವತಿ ಮಾಡಿ ಮೈಷುಗರ್ ಇತಿಹಾಸದಲ್ಲಿ ಮಾದರಿಯಾಗಿದ್ದೇವೆ ಎಂದರು.

ತತ್ಸಂಬಂಧ 2023ರಲ್ಲಿ ಅಧಿಕಾರಕ್ಕೆ ಬಂದ ತಕ್ಷಣ ಮೈಷುಗರ್‌ಗೆ 50 ಕೋಟಿ ಅನುದಾನ ನೀಡಲಾಗಿತ್ತು, ಇತ್ತೀಚೆಗೆ 53 ಕೋಟಿ ವಿದ್ಯುತ್ ಬಿಲ್ ಮನ್ನಾ ಮಾಡಿದ ಸರ್ಕಾರ ಇದೀಗ 10 ಕೋಟಿ ರೂ ನೆರವನ್ನು ನೀಡಿದೆ. ಈ ಬಾರಿಯೂ ಕಬ್ಬು ನಾಟಿ ಮಾಡಿದ ಹಿರಿತನದ ಆಧಾರದಲ್ಲಿ ನೊಂದಣಿಯಾಗಿರುವ ಕಬ್ಬನ್ನು ಯಶಸ್ವಿಯಾಗಿ ನುರಿಯಲಿದ್ದೇವೆ ಎಂದು ಹೇಳಿದರು.

ಒಪ್ಪಿಗೆಯಾಗಿರುವ ಕಬ್ಬನ್ನು ಯಶಸ್ವಿಯಾಗಿ ಅರೆಯುವ ಮೂಲಕ ಈ ಬಾರಿ ಪಡೆಯುವ ನೆರವಿನಲ್ಲಿ ಕನಿಷ್ಠ 4 ಕೋಟಿ ರೂಗಳನ್ನು ಹಿಂದಿರುಗಿಸುವ ಮೂಲಕ ಇತಿಹಾಸ ಬರೆಯುವ ಯೋಜನೆ ರೂಪಿಸಿಕೊಂಡಿರುವುದಾಗಿ ಪ್ರಶ್ನೆಗೆ ಉತ್ತರ ನೀಡಿದ ಅವರು, ನಗರ ವ್ಯಾಪ್ತಿಯಲ್ಲಿ ಮೈಷುಗರ್ ಕಂಪನಿಗೆ ಸೇರಬೇಕಾದ ಆರೂವರೆಯಿಂದ ಏಳು ಎಕರೆ ಹಾಗೂ ಕಂದಾಯ ವ್ಯಾಪ್ತಿಯ 20ರಿಂದ 30 ಎಕರೆ ಒತ್ತುವರಿ ಭೂಮಿಯನ್ನು ತೆರವುಗೊಳಿಸಲು ಕ್ರಮವಹಿಸಲಾಗುವುದು. ವಾಣಿಜ್ಯವಾಗಿ ಇಂದಿನ ದರದಂತೆ ಬಾಡಿಗೆ ನೀಡು ವುದಾದರೆ ಅವರಿಗೇ ಬಾಡಿಗೆಗೆ ನೀಡಲಾಗುವುದು ಎಂದು ತಿಳಿಸಿದರು.

ಜು.28ರಂದು ಮದ್ದೂರಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಚಾಲನೆ ಹಾಗೂ ಉದ್ಘಾಟನೆಗೆ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಸಂಪುಟದ ಅನೇಕ ಸಚಿವರು ಆಗಮಿಸಲಿದ್ದು, ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯ ಸಾರ್ವಜನಿಕರು ಭಾಗವಹಿಸುವಂತೆ ಮನವಿ ಮಾಡಿದರು.

ಗೋಷ್ಠಿಯಲ್ಲಿ ಕೆ.ಸುರೇಶ್, ಶ್ರೀಧರ್, ವೀಣಾ ಶಂಕರ್, ಉದಯ್, ದೇವಯ್ಯ, ಸಿ.ಎಂ.ದ್ಯಾವಪ್ಪ, ನಾಗರಾಜು ಇದ್ದರು.

ಶ್ರಾವಣ ಶನಿವಾರದ ಅಂಗವಾಗಿ ಶ್ರೀವೆಂಕಟೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ



ಭಾರತೀನಗರ, ಜು.26– ಮೊದಲನೇ ಶ್ರಾವಣ ಶನಿವಾರದ ಅಂಗವಾಗಿ ಕೆ.ಎಂ. ದೊಡ್ಡಿಯ ಶ್ರೀವೆಂಕಟೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಜರುಗಿತು.

ಶ್ರೀ ವೆಂಕಟೇಶ್ವರಸ್ವಾಮಿ ಮೂರ್ತಿಗೆ ಬೆಳಿಗ್ಗೆ ನೈವೇದ್ಯ, ಮಹಾಮಂಗಳಾರತಿ ನೆರವೇರಿತು. ನಂತರ ಸಂಜೆಯವರೆವಿಗೂ ವಾದ್ಯಗೋಷ್ಠಿಗಳೊಂದಿಗೆ ವಿಶೇಷ ಪೂಜೆ ಜರುಗಿತು. ಶ್ರೀ ವೆಂಕಟೇಶ್ವರಸ್ವಾಮಿ ಮೂರ್ತಿಯನ್ನು ಹೂವಿನಿಂದ ಅಲಂಕರಿಸಲಾಗಿತ್ತು. ಬೆಳಿಗ್ಗೆಯಿಂದ ಸಂಜೆಯವರೆವಿಗೂ ಸಾವಿರಾರು ಭಕ್ತಾಧಿಗಳು ದೇವಸ್ಥಾನಕ್ಕೆ ಆಗಮಿಸಿ ಪೂಜೆ ಸಲ್ಲಿಸಿದರು.

ಬಂದಂತಹ ಭಕ್ತಾಧಿಗಳಿಗೆ ಪ್ರಸಾದ ವಿತರಣೆ ನಡೆಯಿತು. ಭಕ್ತಾಧಿಗಳು ಸರಥಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ಅಧ್ಯಾಪನ ಟ್ರಸ್ಟ್‌ನಿಂದ ಜಿಲ್ಲಾ ಮಟ್ಟದ ವಿಜ್ಞಾನ ತರಂಗ ಸ್ಪರ್ಧೆ

ಮಂಡ್ಯ: ಅಧ್ಯಾಪನ ಟ್ರಸ್ಟ್ ವತಿಯಿಂದ ಅಧ್ಯಾಪನ ವಿಜ್ಞಾನೋತ್ಸವ–2025 ಜಿಲ್ಲಾ ಮಟ್ಟದ ವಿಜ್ಞಾನ ತರಂಗ ಸ್ಪರ್ಧೆಯ ಎರಡನೇ ಆವೃತ್ತಿಯನ್ನು ಆ.30 ಶನಿವಾರ ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ನಗರದ ಎ&ಎ ಕನ್ವೆನ್ಷನ್ ಹಾಲ್ ಆಯೋಜಿಸಲು ನಿಗದಿ ಮಾಡಲಾಗಿದೆ ಎಂದು ಟ್ರಸ್ಟ್‌ನ ಸಿಇಓ ಎಂ.ಜಿ.ದಿವ್ಯಶ್ರೀ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟ್ರಸ್ಟ್‌ನ ವತಿಯಿಂದ ಕಳೆದ ವರ್ಷ ವಿಜ್ಞಾನೋತ್ಸವ ಕಾರ್ಯಕ್ರಮಕ್ಕೆ ನಿರೀಕ್ಷೆಗೆ ಮೀರಿದ ಪ್ರತಿಕ್ರಿಯೆ ಯಶಸ್ಸು ದೊರೆತಿದ್ದು, ರಾಜ್ಯದಲ್ಲೇ ಪ್ರಥಮ ಬಾರಿಗೆ ನೊಬೆಲ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಪ್ರಶಸ್ತಿಯು ಲಭಿಸಿದೆ ಎಂದರು.

ಕಳೆದ ಸಾಲಿನಲ್ಲಿ ಜಿಲ್ಲಾ ಮಟ್ಟದ ವಿಜ್ಞಾನ ತರಂಗ ಸ್ಪರ್ಧೆಯಲ್ಲಿ 6702 ವಿದ್ಯಾರ್ಥಿಗಳು ಭಾಗವಹಿಸಿ 1950 ವಿಜ್ಞಾನ ಮಾದರಿಗಳನ್ನು ಪ್ರಸ್ತುತ ಪಡಿಸಿ, ಲಾರ್ಜೆಸ್ಟ್ ಸೈನ್ಸ್ ಎಕ್ಸ್‌ಪೋ ಇನ್ ಕರ್ನಾಟಕ ಇಂಡಿಯಾ ಬಿರುದನ್ನು ನೊಬೆಲ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಂಸ್ಥೆಯವರು ನೀಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಈ ಬಾರಿಯೂ ಸಹ ವಿಜ್ಞಾನೋತ್ಸವ–2025–26 ಸಾಲಿನ ಕಾರ್ಯಕ್ರಮವನ್ನು ಮಂಡ್ಯ ಜಿಲ್ಲಾಡಳಿತ, ಮಂಡ್ಯ ಜಿಲ್ಲಾ ಪಂಚಾಯತ್ ಮತ್ತು ಶಾಲಾ ಶಿಕ್ಷಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಮತ್ತು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಹಾಗೂ ಇಂಡಿಯನ್ ಸೈನ್ಸ್ ರಿಸರ್ಚ್ ಆರ್ಗನೈಜೇಷನ್ ಸಂಸ್ಥೆಗಳ ಸಹಭಾಗಿತ್ವದಲ್ಲಿ ಆಯೋಜನೆ ಮಾಡಲಾಗಿದೆ. 10 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ಮಕ್ಕಳು ಭಾಗವಹಿಸುವ ನಿರೀಕ್ಷೆಯಿದೆ ಎಂದು ಹೇಳಿದರು.



ಅಧ್ಯಾಪನ ವಿಜ್ಞಾನೋತ್ಸವ ಕಾರ್ಯಕ್ರಮದ ಲೋಗೊ ಬಿಡುಗಡೆಗೊಳಿಸಲಾಯಿತು.

ಈ ಬಾರಿಯ ಅಧ್ಯಾಪನ ವಿಜ್ಞಾನೋತ್ಸವ–2025 ಕಾರ್ಯಕ್ರಮದ ಲೋಗೋ ಬಿಡುಗಡೆ ಕಾರ್ಯಕ್ರಮವನ್ನು ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಚಲುವರಾಯಸ್ವಾಮಿ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಶ್ರೀರಂಗಪಟ್ಟಣ ಶಾಸಕ ರಮೇಶ್ ಬಂಡಿಸಿದ್ದೇಗೌಡ ಹಾಗೂ ಮಂಡ್ಯ ಶಾಸಕ ರವಿಕುಮಾರ್ ಗಣಿಗ, ಪಾಂಡವಪುರ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮದ್ದೂರು ಶಾಸಕ ಉದಯ್ ಗೌಡ, ವಿಧಾನ ಪರಿಷತ್ ಸದಸ್ಯ ಮಧು ಮಾದೇಗೌಡ, ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ರವರ ನೇತೃತ್ವದಲ್ಲಿ ಬಿಡುಗಡೆ ಮಾಡಲಾಯಿತು ಎಂದು ಮಾಹಿತಿ ನೀಡಿದರು.

ಆಡಳಿತ ಅಧಿಕಾರಿ ಪೃಥ್ವಿಕೆಆರ್, ಕಾರ್ಯದರ್ಶಿ ಪ್ರವೀಣ್ ಕುಮಾರ್.ಜಿ.ಟಿ, ಸದಸ್ಯ ಜೆ.ವಿ.ಮನು ಭಾಗವಹಿಸಿದ್ದರು.

ಪುಟ್ಟೇಗೌಡ ನಿಧನ



ಮಂಡ್ಯ, ಜು.26– ಪತ್ರಕರ್ತ ಎಚ್.ಕೆ.ಅಶ್ವಥ್ ಅವರ ದೊಡ್ಡಪ್ಪ, ತಾಲೂಕಿನ ಹಳುವಾಡಿ ಗ್ರಾಮದ ಲೇ.ಬಂದೀಗೌಡರ ಪುತ್ರ ಪುಟ್ಟೇಗೌಡ(68) ಶನಿವಾರ ನಿಧನರಾದರು.

ಕೆಲ ತಿಂಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಮೃತರು ಚಿಕಿತ್ಸೆ ಫಲಕಾರಿಯಾಗದೆ ನಿಧನರಾದರು. ಮೃತರು ಪತ್ನಿ ಚಿಕ್ಕತಾಯಮ್ಮ, ಇಬ್ಬರು ಪುತ್ರರು, ಓರ್ವ ಪುತ್ರಿ, ನಾಲ್ವರು ಸಹೋದರರು, ಇಬ್ಬರು ಸಹೋದರಿಯರನ್ನು ಅಗಲಿದ್ದಾರೆ. ಮಧ್ಯಾಹ್ನ ಸ್ವಗ್ರಾಮದ ಮೃತರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಒಂದನೇ ಪುಟದಿಂದ

ಭಾರೀ ಪ್ರಮಾಣದ ಡ್ರಗ್ಸ್!

ನರಸಿಂಹರಾಜ ಠಾಣೆ ವ್ಯಾಪ್ತಿಯ ರಿಂಗ್ ರಸ್ತೆಗೆ ಹೊಂದಿಕೊಂಡಂತಹ ಪ್ರದೇಶದಲ್ಲಿ ಭಾರೀ ಪ್ರಮಾಣದ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ ಎಂಬುದು ಖಚಿತವಾಗುತ್ತಿದೆಯಾದರೂ, ಈ ಕುರಿತು ಪ್ರತಿಕ್ರಿಯೆಗಾಗಿ ಮೈಸೂರು ನಗರ ಪೊಲೀಸ್ ಆಯುಕ್ತರೂ ಸೇರಿದಂತೆ ಯಾವುದೇ ಹಿರಿಯ ಅಧಿಕಾರಿಗಳು ಸಂಪರ್ಕಕ್ಕೆ ಸಿಗುತ್ತಿಲ್ಲ. ಯಾವುದೇ ಅಧಿಕಾರಿಯು ಕರೆಯನ್ನು ಸ್ವೀಕರಿಸುತ್ತಿಲ್ಲ. ದೊಡ್ಡ ಮಟ್ಟದ ಕಾರ್ಯಾಚರಣೆ ನಡೆದಾಗ ಹಿರಿಯ ಪೊಲೀಸ್ ಅಧಿಕಾರಿಗಳು ಮಾಧ್ಯಮದವರ ಕರೆಗಳನ್ನು ಸ್ವೀಕರಿಸುವುದಿಲ್ಲ ಎಂಬುದು ಸರ್ವೇಸಾಮಾನ್ಯ ಸಂಗತಿಯಾಗಿದೆ ಹಾಗೂ ಕರೆ ಸ್ವೀಕರಿಸಿದ ಪೊಲೀಸ್ ಅಧಿಕಾರಿಯೊಬ್ಬರು ನಮ್ಮ ಮೇಲಧಿಕಾರಿಗಳನ್ನು ಸಂಪರ್ಕಿಸಿ ಎಂದು ಕರೆ ಕಡಿತಗೊಳಿಸಿದರು.

ಎಸ್‌ಐಟಿ ತನಿಖೆ ಆರಂಭ

20ಕ್ಕೂ ಹೆಚ್ಚು ಅಧಿಕಾರಿಗಳು, ಸಿಬ್ಬಂದಿಗಳೊಂದಿಗೆ ಉನ್ನತ ಮಟ್ಟದ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಪ್ರಕರಣದಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ದಯಾಮಾ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಲಾಗಿದೆ. ಮೂಲಗಳ ಪ್ರಕಾರ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳ ಅಧಿಕಾರಿಗಳನ್ನು ತಂಡಕ್ಕೆ ನಿಯೋಜಿಸಲಾಗಿದೆ. ಇವರಲ್ಲಿ ಧರ್ಮಸ್ಥಳ, ಮುಲ್ಕಿ, ಬೈಂದೂರು ಪೊಲೀಸ್ ಠಾಣೆಗಳ ಇನ್ಸ್‌ಪೆಕ್ಟರ್‌ಗಳು, ಸಬ್‌ಇನ್ಸ್‌ಪೆಕ್ಟರ್‌ಗಳು ಸೇರಿದ್ದಾರೆ. ಎಸ್‌ಐಟಿ ಆಂತರಿಕ ಮಾಹಿತಿಗಳನ್ನು ಪಡೆಯುವ ನಿರೀಕ್ಷೆಯಿದ್ದು, ಸಮಾಧಿಗಳ ಬಗ್ಗೆ ಆರಂಭದಲ್ಲಿ ಆರೋಪಗಳನ್ನು ಎತ್ತಿದ್ದ ಅನಾಮಧೇಯ ದೂರುದಾರ ಇಂದು ಇಬ್ಬರು ವಕೀಲರೊಂದಿಗೆ ಎಸ್‌ಐಟಿ ಅಧಿಕಾರಿಗಳ ಮುಂದೆ ಹಾಜರಾದರು. ಅವರನ್ನು ಸುಮಾರು 5 ಗಂಟೆ ಕಾಲ ಅಧಿಕಾರಿಗಳು ವಿಚಾರಣೆ ನಡೆಸಿದರು.

ಮೂವರು ಮಕ್ಕಳು ಸೇರಿ ಹಲವರಿಗೆ ಗಾಯ

ಮಳೆ ಗಾಳಿಯ ತೀವ್ರತೆಗೆ ಮನೆಯ ಗೋಡೆ ಕುಸಿದು ಬಿದ್ದಿದ್ದು, ಅವಶೇಷಗಳ ಅಡಿಯಲ್ಲಿ ಸಿಲುಕಿದ ಸುಷ್ಮಾ ಅವರ ತಲೆಯ ಭಾಗಕ್ಕೆ ಗಂಭೀರ ಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ವೇಳೆ ಮನೆಯೊಳಗಿದ್ದ ಮಕ್ಕಳಾದ ರೋಹಿನಿ(9), ರೋಹನ್(7) ಮತ್ತು ಲೋಹಿತ್(5) ಹಾಗು ಸುಷ್ಮಾ ಸಹೋದರ ನಿಗೂ ಸಣ್ಣಪುಟ್ಟ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಲೋಹಿತ್ ಕೂಡ ಮಣ್ಣು ಗೋಡೆಯ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದು, ಸ್ಥಳೀಯರು ಆತನನ್ನು ರಕ್ಷಿಸಿದ್ದಾರೆ.

ಸುಷ್ಮಾ ಪತಿ ರವಿ ಜೆಸಿಬಿ ಆಪರೇಟರ್ ಆಗಿದ್ದು, ಉದ್ಯೋಗ ಅರಸಿಕೊಂಡು ಬಂದು ಎರಡು ವರ್ಷಗಳಿಂದ ಇಲ್ಲಿಯೇ ನೆಲೆಸಿದ್ದರು. ಘಟನೆ ನಡೆದ ಸಂದರ್ಭದಲ್ಲಿ ಪತಿ ರವಿ ಮನೆಯಲ್ಲಿ ಇರಲಿಲ್ಲ ಎಂದು ತಿಳಿದುಬಂದಿದೆ. ಗಾಯಾಳುಗಳನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಸರಕಾರಿ ಆಸ್ಪತ್ರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಸ್ಥಳಕ್ಕೆ ತಹಶೀಲ್ದಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮಾಜಿ ಶಾಸಕ ಅಪ್ಪಚ್ಚು ರಂಜನ್ ಸ್ಥಳಕ್ಕೆ ಆಗಮಿಸಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಮರ ಉರುಳಿ ವಾಹನ ಸಂಚಾರ ವ್ಯತ್ಯಯ: ಮಡಿಕೇರಿ–ಸುಂಟಿಕೊಪ್ಪ ಹೆದ್ದಾರಿ ನಡುವಿನ ಕೆದಕಲ್ 7ನೇ ಮೈಲು ಬಳಿ ಭಾರೀ ಗಾತ್ರದ ಮರ ಮುರಿದು ಬಿದ್ದ ಪರಿಣಾಮ ಕೆಲಕಾಲ ರಸ್ತೆ ಸಂಚಾರಕ್ಕೆ ವ್ಯತ್ಯಯವಾಗಿತ್ತು. ಸೋಮವಾರಪೇಟೆ ಕುಂಬೂರು ಬಳಿ ಚಲಿಸು ತ್ತಿದ್ದ ಆಟೋರಿಕ್ಷಾದ ಮೇಲೂ ಮರ ಬಿದ್ದಿದ್ದು, ಚಾಲಕ ಅಪಾಯದಿಂದ ಪಾರಾಗಿದ್ದಾರೆ. ಮಡಿಕೇರಿ–ಸೋಮವಾರಪೇಟೆ ಮುಖ್ಯರಸ್ತೆಯ ಕರ್ಣಂಗೇರಿ ಬಳಿ ಬೃಹತ್ ಗಾತ್ರದ ಮರ ಬಿದ್ದು, ಕೆಲಕಾಲ ವಾಹನ ಸಂಚಾರ ಸ್ಥಗಿತವಾಗಿತ್ತು. ಪಂಚಾಯಿತಿ ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ಮರ ತೆರವು ಮಾಡಿದರು.

ಮಳೆಯಿಂದ ಮನೆ ಹಾನಿ: ಕರಿಕೆ ಗ್ರಾಮದ ದೊಡ್ಡಚೇರಿ ಎಂಬಲ್ಲಿ ದಾಮೋದರ ಎಂಬವರ ಮನೆಯ ಮೇಲೆ ಮರ ಬಿದ್ದು ಮನೆಗೆ ಹಾನಿಯಾಗಿದೆ. ಬೆಳಿಗ್ಗೆ 7 ಗಂಟೆ ವೇಳೆಗೆ ಈ ಘಟನೆ ಸಂಭವಿಸಿದೆ. ಮನೆಯ ಮೇಲ್ಛಾವಣಿ ಒಡೆದು ಹೋಗಿ ಗೋಡೆಗಳು ಬಿರುಕು ಬಿಟ್ಟಿದ್ದು, ಮನೆಯಲ್ಲಿದ್ದವರು ಅಪಾಯದಿಂದ ಪಾರಾಗಿದ್ದಾರೆ. ಸಮೀಪದ ಮೇಕೇರಿ ಸುಭಾಷ್‌ನಗರದ ನಸೀಮಾ, ಸೋಮವಾರಪೇಟೆ ತಾಲೂಕಿನ ಶನಿವಾರ ಸಂತೆ ಕೊರಲಳ್ಳಿ ಸುಕನ್ಯಾ ಎಂಬವರ ಮನೆಗಳ ಮೇಲೂ ಮರ ಬಿದ್ದು ಹಾನಿಯಾಗಿದೆ. ವಿರಾಜಪೇಟೆ ಕೆದಮಳ್ಳೂರು ಚೂರಿಯಾಲದ ದೇವಸ್ಥಾನದ ಮೇಲೆ ಮರ ಮುರಿದು ಬಿದ್ದಿದ್ದು, ದೇವಾಲಯದ ಅರ್ಧ ಭಾಗ ತೀವ್ರ ಹಾನಿಗೊಳಗಾಗಿದೆ. ಅಮ್ಮತ್ತಿ ಹೋಬಳಿ ಬಿಳುಗುಂದದ ಹೆಚ್.ಟಿ.ಗಣೇಶ್ ಅವರ ಮನೆಯ ಹಿಂಬದಿ ಗೋಡೆ ಕುಸಿದು ಬಿದ್ದಿದ್ದು, ಮನೆಗೆ ತೀವ್ರ ಹಾನಿ ಸಂಭವಿಸಿದೆ. ಎಮ್ಮೆಮಾಡು ಅಬ್ದುಲ್ ರೆಹಮಾನ್, ದೊಡ್ಡ ಕೊಡ್ಲಿ ಕೃಷ್ಣಾ ಚಾರ್ಯ, ಕುಶಾಲನಗರದ ಕೂಡಿಗೆ ಬ್ಯಾಡಗೊಟ್ಟ ನಿವಾಸಿ ಪಾಂಡುರಂಗ ಎಂಬುವರ ಮನೆಗಳ ಮೇಲೆ ಮರಗಳು ಮುರಿದು ಬಿದ್ದು, ಹಾನಿ ಸಂಭವಿಸಿದೆ. ಮನೆ ಹಾನಿ ಸ್ಥಳಗಳಿಗೆ ಕಂದಾಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ.

ಕೋಡಿಶ್ರೀಗಳ ಭೇಟಿ ಮಾಡಿದ ಡಿಕೆಶಿ

ಮಾಧ್ಯಮದ ಜೊತೆ ಮಾತನಾಡಿದರು. ಈ ವೇಳೆ ನಾನು ಏನು ಪ್ರಾರ್ಥನೆ ಮಾಡಬೇಕು ಮಾಡಿದ್ದೇನೆ ಎಂದಿದ್ದಾರೆ.

ಧರ್ಮದ ಬಗ್ಗೆ, ದೇವರ ಬಗ್ಗೆ, ಸಂಸ್ಕೃತಿ ಬಗ್ಗೆ, ಆಚಾರ–ವಿಚಾರಗಳ ಬಗ್ಗೆ ನಂಬಿಕೆ ಇಟ್ಟುಕೊಂಡಿದ್ದೇನೆ. ಯಾವುದೇ ಧರ್ಮದಲ್ಲಾಗಲಿ ಒಂದು ಶಕ್ತಿ ಇದೆ. ಕೆಲವರು ನಂಬಬಹುದು, ಕೆಲವರು ನಂಬದೇ ಇರಬಹುದು. ಆದರೆ ನನಗೆ ನಂಬಿಕೆ ಇದೆ ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ. ನಂಬಿಕೆ ಇರುವ ಕಾರಣ ಇಷ್ಟು ದೂರ ಬಂದಿದ್ದೇನೆ. ಈ ಹಿಂದೆ ನಾನು, ಮನೆಯವರು ಈ ಕ್ಷೇತ್ರಕ್ಕೆ ಬಂದಿದ್ದೆವು ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ. ಜೇನುಕಲ್ ಬೆಟ್ಟಕ್ಕೂ ನಾನು ಹೋಗಿರಲಿಲ್ಲ. ಆದರೆ ಇದೀಗ ಪೀಠಕ್ಕೆ ಭೇಟಿ ಮಾಡಿದ್ದೇನೆ. ಭೇಟಿ ಅತೀವ ಸಂತಸ ತಂದಿದೆ. ಉತ್ತಮವಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ ಎಂದು ಹೇಳಿದ್ದಾರೆ.

ಸುರ್ಜೇವಾಲ ಅಧಿಕಾರಿಗಳ ಸಭೆ ವಿಚಾರಕ್ಕೆ ಪ್ರತಿಕ್ರಿಯೆ: ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದಾರೆ. ಸೂಪರ್ ಸಿಎಂ ರೀತಿ ವರ್ತಿಸುತ್ತಿದ್ದಾರೆ ಅನ್ನೋ ವಿಪಕ್ಷಗಳ ಆರೋಪಕ್ಕೆ ಡಿಕೆ ಶಿವಕುಮಾರ್ ಪ್ರತಿಕ್ರಿಯೆ ನೀಡಿ, ಈ ರೀತಿ ನಡೆದಿಲ್ಲ. ಇವೆಲ್ಲಾ ಸುಳ್ಳು, ಸುರ್ಜೇವಾಲ ಯಾವ ಅಧಿಕಾರಿಯನ್ನೂ ಭೇಟಿ ಮಾಡಿಲ್ಲ ಎಂದು ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ನಮ್ಮ ಸರ್ಕಾರನೇ ಇರಬೇಕಾದರೆ ಏನಾದರೂ ಇದ್ದರೆ ನಮಗೆ ಹೇಳ್ತಾರೆ. ನಾವು ಸರ್ಕಾರದವರು, ಏನಾದರೂ ತಪ್ಪುಗಳಿದ್ದರೆ ತಿದ್ದಿಕೊಳ್ಳುತ್ತೇವೆ. ಇದನ್ನು ಹೊರತುಪಡಿಸಿದರೆ, ಸುರ್ಜೇವಾಲ ಅವರಾಗಲೀ ಯಾರೇ ಆಗಲೀ, ನಮ್ಮ ರಾಜ್ಯದಲ್ಲಿರುವಂತಹ ಮಲ್ಲಿಕಾರ್ಜುನ ಖರ್ಗೆಯವರು ಕೂಡ ಒಬ್ಬ ಆಫೀಸರ್‌ಗೆ ಇದುವರೆಗೂ ಫೋನ್ ಮಾಡಿಲ್ಲ ಎಂದಿದ್ದಾರೆ.

ಇದೇ ವೇಳೆ ಸುರ್ಜೇವಾಲ ಸಭೆ ಬಗ್ಗೆ ಸಹಕಾರ ಸಚಿವ ಕೆ.ಎನ್.ರಾಜಣ್ಣ ನೀಡಿರುವ ಹೇಳಿಕೆಯಿಂದಲೇ ವಿವಾದ ಜೋರಾಗಿದೆಯಲ್ಲ ಎಂಬ ಬಗ್ಗೆ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, ದೊಡ್ಡವರ ಬಗ್ಗೆ ನಾನು ಮಾತನಾಡಲ್ಲ ಎಂದು ರಾಜಣ್ಣ ವಿರುದ್ಧ ಪರೋಕ್ಷವಾಗಿ ಕಿಡಿಕಾರಿದ್ದಾರೆ. ರಾಜಣ್ಣ ಅವರಿಗೆ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೆ ನಾನೇನು ಉತ್ತರ ಕೊಡೋದು ಇದೆ. ಮುಖ್ಯಮಂತ್ರಿಗಳಿಗೆ ನನಗಿಂತ ಮಾಹಿತಿ ಇದೆ ಎಂದಿದ್ದಾರೆ.

ರಾಜ್ಯದಲ್ಲಿ ಗೊಬ್ಬರ ಕೊರತೆ ಕುರಿತು ಮಾತನಾಡಿದ ಡಿ.ಕೆ.ಶಿವಕುಮಾರ್, ಯೂರಿಯಾ ಗೊಬ್ಬರವನ್ನು ಪೂರೈಕೆ ಮಾಡಬೇಕಿರುವುದು ಕೇಂದ್ರ ಸರ್ಕಾರದ ಕೆಲವು ಸಂಸ್ಥೆಗಳು. ಈಗ ಹೆಚ್ಚು ರೈತರು ಬೆಳೆ ಹಾಕಿದ್ದಾರೆ. ಹೀಗಾಗಿ ಗೊಬ್ಬರಕ್ಕಾಗಿ ನಮ್ಮ ಸರ್ಕಾರ ಒತ್ತಾಯ ಮಾಡುತ್ತಿದೆ. ರೈತರು ತಾಳ್ಮೆಯಿಂದ ಇರಲಿ, ಅದಕ್ಕೆ ಏನು ವ್ಯವಸ್ಥೆ ಬೇಕು ಮಾಡುತ್ತೇವೆ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಸಂವಿಧಾನ ಬದಲಾವಣೆ ಅಪಪ್ರಚಾರ

ಸಾವಿರ ಜನರನ್ನು ಜೈಲಿಗೆ ಕಳುಹಿಸಲಾಯಿತು. ಆರ್‌ಎಸ್‌ಎಸ್, ಜನಸಂಘ, ವಿಶ್ವ ಹಿಂದೂ ಪರಿಷತ್, ರಾಷ್ಟ್ರೋತ್ಥಾನ ಸೇರಿದಂತೆ ಸಂಘ ಪರಿವಾರದ ಎಲ್ಲಾ ಸಂಘಟನೆಗಳು ಹಾಗೂ ವಿರೋಧ ಪಕ್ಷಗಳಿಗೂ ನಿರ್ಬಂಧ ವಿಧಿಸಲಾಯಿತು. ಕಲ್ಲಡಕದ ಇಸ್ಮಾಯಲ್ ಎಂಬ ಕಾಂಗ್ರೆಸ್ ಕಾರ್ಯಕರ್ತನ ಕೊಲೆಯಾದಾಗ 500ಕ್ಕಿಂತಲೂ ಹೆಚ್ಚು ಜನ ಸ್ವಯಂ ಸೇವಕರನ್ನು ಬಂಧನಕ್ಕೆ ಒಳಪಡಿಸಿ ಚಿತ್ರಹಿಂಸೆ ನೀಡ ಲಾಯಿತು. ಎಲ್ಲಾ ವಿರೋಧ ಪಕ್ಷದ ನಾಯಕರು ಜೈಲು ಸೇರಬೇಕಾಯಿತು. ಇಂದಿರಾ ಗಾಂಧಿಯವರಿಗೆ ಎರಡು ಪತ್ರ ಬರೆದಿದ್ದ ಪೇಜಾವರ ಶ್ರೀಗಳು, ತುರ್ತು ಪರಿಸ್ಥಿತಿ ಹೇರಿದ್ದನ್ನು ವಿರೋಧಿಸಿದ್ದರು ಎಂದು ತಿಳಿಸಿದರು.

ಸಂವಿಧಾನ ದಿಕ್ಕರಿಸಿ ತುರ್ತು ಪರಿಸ್ಥಿತಿ: ಭಯಾನಕ ಸ್ಥಿತಿ ನಿರ್ಮಾಣವಾಗಿತ್ತು. ಸಂಘದ ಸ್ವಯಂ ಸೇವಕರ ಸ್ಥಿತಿಯಂತೂ ಹೇಳತೀರದಾಗಿತ್ತು. ತುರ್ತು ಪರಿಸ್ಥಿತಿ ಮೂಲಕ ಸಂವಿಧಾನವನ್ನೇ ದಿಕ್ಕರಿಸಿದ ಕಾಲ ಅದು. ಸಂವಿಧಾನವನ್ನು ದಿಕ್ಕರಿಸಿದವರೇ ಇಂದು ಸಂವಿಧಾನದ ಬಗ್ಗೆ ಮಾತನಾಡುತ್ತಿದ್ದಾರೆ. ಸಂವಿ ಧಾನವನ್ನು ಅತ್ಯಂತ ಹೆಚ್ಚು ಬದಲಾವಣೆ (ತಿದ್ದುಪಡಿ) ಮಾಡಿದ್ದು ಇಂದಿರಾ ಗಾಂಧಿ ಆಡಳಿತ ಮತ್ತು ಕಾಂಗ್ರೆಸ್ ಅಧಿಕಾರದಲ್ಲೇ ಎಂದು ಪ್ರತಿಪಾದಿಸಿದರು. ಸಂವಿಧಾನದ ಅಸ್ತಿತ್ವ ಉಳಿಸಲು ಸಂಘ ಪರಿಹಾರ ಮಾಡಿದ ಪ್ರಯತ್ನ ಈ ಪುಸ್ತಕದಲ್ಲಿದೆ. ನಮ್ಮ ಸಂಘದ (ಆರ್‌ಎಸ್‌ಎಸ್) 2ನೇ ಸರಸಂಘಚಾಲಕ ಗುರೂಜಿಯವರು, 'ಹಿಂದುತ್ವದ ಒಳಗೆಯೇ ಪ್ರಜಾಪ್ರಭುತ್ವ, ಸಮಾಜವಾದ ಎಲ್ಲವೂ ಅಡಗಿದೆ' ಎಂದು ಹೇಳಿದ್ದಾರೆ. 3ನೇ ಸರಸಂಘ ಚಾಲಕ ದೇವರಸ್ ಅವರು 'ಹಿಂದುತ್ವದೊಳಗೆ ಪ್ರಜಾಪ್ರಭುತ್ವ, ಸಮಾಜವಾದ ಮಾತ್ರವಲ್ಲದೆ, ಜಾತ್ಯಾತೀತತೆಯೂ ಇದೆ. ಹಾಗಾಗಿ ಮತ್ತೆ ವಾಪಸ್ ಆ ಶುಬ್ಧಗಳನ್ನು ತರಬೇಕಿಲ್ಲ. ಹಿಂದುತ್ವ ಜಾರಿಯಾದರೆ ಈ ಮೂರು ಉಳಿಯುತ್ತದೆ' ಎಂದು ಹೇಳಿದ್ದಾರೆ. ಹಿಂದುತ್ವ ಹೋದರೆ ಯಾವ ರೀತಿಯ ದುಸ್ಥಿತಿ ನಿರ್ಮಾಣವಾಗುತ್ತದೆ ಎಂದು ಉದಾಹರಣೆ ಸಹಿತ ವಿವರಿಸಿದ್ದಾರೆ ಎಂದರು. ಇದಕ್ಕೂ ಮುನ್ನ ರಾಯಚೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಹರೀಶ್ ರಾಮಸ್ವಾಮಿ ಭುಗಿಲು ಕೃತಿ ಬಿಡುಗಡೆ ಮಾಡಿದರು. ಶ್ರೀ ಜನ ಜಾಗರಣ ಟ್ರಸ್ಟ್ ಅಧ್ಯಕ್ಷ ವಾಸುದೇವ ಭಟ್ ವೇದಿಕೆಯಲ್ಲಿದ್ದರು. ಶಾಸಕ ಟಿ.ಎಸ್.ಶ್ರೀವತ್ಸ ಸೇರಿದಂತೆ ಅನೇಕ ಗಣ್ಯರು ಸಹ ಹಾಜರಿದ್ದರು.

ಅಧ್ಯಕ್ಷ, ಉಪಾಧ್ಯಕ್ಷರ ನೇಮಕ!

ಡಿಸಿಎಂ ಡಿ.ಕೆ.ಶಿವಕುಮಾರ್ ಒಟ್ಟಿಗೆ ಕುಳಿತು ಪಟ್ಟಿಯನ್ನು ಅಂತಿಮಗೊಳಿಸಿದ ಬಳಿಕ ಮುಖ್ಯಮಂತ್ರಿಗಳ ಸಹಿ ಬೀಳಲಿದೆ. ಬಳಿಕ ಸಂಬಂಧಪಟ್ಟ ಇಲಾಖೆಗಳು ನೇಮಕಾತಿ ಆದೇಶ ಹೊರಡಿಸಲಿವೆ. ಈಗ ನೇಮಕ ಆಗಲಿರುವ ನಿಗಮ, ಮಂಡಳಿಗಳಲ್ಲಿ ಮಹಿಳೆಯರಿಗೆ ಸಿಂಹಪಾಲು ಸಿಗಲಿದೆ ಎಂದು ಹೇಳಲಾಗುತ್ತಿದೆ. ವಿಧಾನಪರಿಷತ್ತಿನ ನಾಲ್ಕು ಸ್ಥಾನಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಪತ್ರಕರ್ತರನ್ನು ನಾಮಕರಣಗೊಳಿಸುವುದಕ್ಕೆ ಹೈಕಮಾಂಡ್ ವಲಯದಲ್ಲಿ ವಿರೋಧ ವ್ಯಕ್ತವಾಗಿರುವುದರಿಂದ ಈಗಾಗಲೇ ಹೈಕಮಾಂಡ್ ಅನುಮೋದಿಸಿರುವ ಪಟ್ಟಿ ಪರಿಷ್ಕರಣೆಗೊಳ್ಳುವ ಸಾಧ್ಯತೆಗಳಿವೆ. ಆದರೆ ಮುಖ್ಯಮಂತ್ರಿಗಳು ಹಿಂದಿನ ಪಟ್ಟಿಗೆ ಅಂತಿಮ ಮುದ್ರೆ ಪಡೆಯಲು ಸಾಕಷ್ಟು ಕಸರತ್ತು ನಡೆಸಿದ್ದಾರೆ ಎಂದು ತಿಳಿದುಬಂದಿದೆ. ಆರತಿ ಕೃಷ್ಣ, ರಮೇಶ್‌ಬಾಬು, ಡಿ.ಜಿ. ಸಾಗರ್ ಹಾಗೂ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು ಅವರ ನೇಮಕಕ್ಕೆ ಹೈಕಮಾಂಡ್ ಈ ಹಿಂದೆ ಒಪ್ಪಿಗೆ ನೀಡಿತ್ತು.

ಸರ್ಕಾರಿ ಹುದ್ದೆ ಸ್ವೀಕರಿಸಲ್ಲ


ಹುದ್ದೆಯನ್ನು ಸ್ವೀಕರಿಸುವುದು ಅಥವಾ ಚುನಾವಣೆಗಳಲ್ಲಿ ಸ್ಪರ್ಧಿಸುವುದು ನೈತಿಕ ಕಳವಳಗಳನ್ನು ಹುಟ್ಟುಹಾಕುತ್ತದೆ. ಇದು ನ್ಯಾಯಾಂಗದ ಮೇಲಿನ ಸಾರ್ವಜನಿಕರ ವಿಶ್ವಾಸವನ್ನು ಕುಗ್ಗಿಸುತ್ತದೆ ಎಂದು ಪುರುಚ್ಚರಿಸಿದರು. ನ್ಯಾಯಾಂಗದ ವಿಶ್ವಾಸಾರ್ಹತೆ ಮತ್ತು ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ನಿವೃತ್ತಿ ನಂತರ ಯಾವುದೇ ಸರ್ಕಾರಿ ಹುದ್ದೆಗಳನ್ನು ಸ್ವೀಕರಿಸುವುದಿಲ್ಲ ಎಂದು ತಮ್ಮ ಅನೇಕ ಸಹೋದ್ಯೋಗಿಗಳ ಜೊತೆ ಸಾರ್ವಜನಿಕವಾಗಿ ಪ್ರತಿಜ್ಞೆ ಮಾಡಿದ್ದಾರೆ. ದರ್ಯಾಪುರದಲ್ಲಿ ಹೊಸ ನ್ಯಾಯಾಲಯದ ಕಟ್ಟಡದ ಉದ್ಘಾಟನೆ ಸಂದರ್ಭದಲ್ಲಿ, ಗವಾಯಿ ನ್ಯಾಯಾಂಗ ರಚನೆಯ ವಿಕೇಂದ್ರೀಕರಣವನ್ನು ಪ್ರತಿಪಾದಿಸಿದರು. ಇದು ಜನರಿಗೆ ನ್ಯಾಯವನ್ನು ಸುಲಭವಾಗಿ ಪ್ರವೇಶಿಸುವಂತೆ ಮಾಡುತ್ತದೆ ಎಂದರು.

ರಸಗೊಬ್ಬರ ಸಮರ್ಪಕವಾಗಿ ಪೂರೈಸುವಲ್ಲಿ ಸರ್ಕಾರದ ಲೋಪ

ಬಿಜೆಪಿ ರಾಜ್ಯಾಧ್ಯಕ್ಷ ಬಿವೈವಿ ವಾಗ್ದಾಳಿ; ಹೋರಾಟದ ಎಚ್ಚರಿಕೆ

- ಹವಾಮಾನ ಇಲಾಖೆ ವರದಿ ಆದರಿಸಿ ಕ್ರಮ ಕೈಗೊಳ್ಳದ ಕೃಷಿ ಸಚಿವರು, ಅಧಿಕಾರಿಗಳು
- ಕೃತಕ ಅಭಾವ ಸೃಷ್ಟಿಸಿ ಕಳ್ಳ ದಂಧೆ; ರಾಜ್ಯ ಸರ್ಕಾರದಿಂದ ರೈತರಿಗೆ ಅನ್ಯಾಯ

ಬೆಂಗಳೂರು, ಜು.26(ಕೆಎಂಶಿ)–ರಸಗೊಬ್ಬರ ದಾಸ್ತಾನು ಮತ್ತು ಪೂರೈಕೆ ವಿಚಾರದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಪೂರ್ವ ತಯಾರಿ ಮಾಡಿಕೊಳ್ಳದೆ ರೈತರು ಆತಂಕದ ಸ್ಥಿತಿ ಎದುರಿಸುವಂತಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಟೀಕಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಲಬುರಗಿ, ಗದಗ, ಶಿವಮೊಗ್ಗ, ಕೊಪ್ಪಳ, ದಾವಣಗೆರೆ ಜಿಲ್ಲೆಗಳಲ್ಲಿನ ಕೃಷಿ ಚಟುವಟಿಕೆ ವಿಸ್ತೀರ್ಣ, ಅಗತ್ಯವಿರುವ ಬಿತ್ತನೆ ಬೀಜ, ರಸಗೊಬ್ಬರ ಕುರಿತು ಪೂರ್ವಾಪರ ಲೆಕ್ಕಾಚಾರ ಇಲ್ಲದೆ, ಅಗತ್ಯ ದಾಸ್ತಾನು ಮಾಡದೆ ಸರ್ಕಾರ ತಪ್ಪೆಸಗಿದೆ ಎಂದಿದ್ದಾರೆ.

ಕಾಂಗ್ರೆಸ್ ಆಡಳಿತ ಇರುವ ಕಡೆಯೆಲ್ಲಾ ರಸಗೊಬ್ಬರ ಕೃತಕ ಅಭಾವ ಸೃಷ್ಟಿಸಿ ಕಳ್ಳ ದಂಧೆ, ದಲ್ಲಾಳಿಗಳ ಕಾಟವನ್ನು ಮೊದಲಿನಿಂದಲೂ ನೋಡಿಕೊಂಡು ಬಂದಿದ್ದೇವೆ, ರಾಜ್ಯ ಸರ್ಕಾರ ರೈತರಿಗೆ ಅನ್ಯಾಯ ಮಾಡುತ್ತಿದ್ದು, ಬಿಜೆಪಿ ಹೋರಾಟ ನಡೆಸಲಿದೆ.

ರಸಗೊಬ್ಬರ ದಾಸ್ತಾನಿದೆ, ಕೊರತೆ ಇಲ್ಲ ಎಂಬುದಾಗಿ ಕೃಷಿ ಸಚಿವರು ಹೇಳಿದ್ದಾರೆ. ಆದರೂ ರೈತರು ಏಕೆ ಹೋರಾಟ ನಡೆಸುತ್ತಿದ್ದಾರೆ. ಇದರ ಹಿಂದೆ ಸರ್ಕಾರದ ವೈಫಲ್ಯ ಎದ್ದು ಕಾಣುತ್ತಿದೆ. ರೈತರಿಗೆ ತೊಂದರೆ ಆಗದಂತೆ ಕ್ರಮ ಕೈಗೊಳ್ಳಬೇಕು.

ರಾಜ್ಯದ ರಸಗೊಬ್ಬರ ಸಮಸ್ಯೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಜೆ.ಪಿ.ನಡ್ಡಾ ಅವರಿಗೆ ಪತ್ರ ಬರೆದಿದ್ದು, ಈ ಬಾರಿ ಮುಂಗಾರು 20–25 ದಿನ ಮುಂಚಿತವಾಗಿ ಪ್ರಾರಂಭವಾಗಿದೆ ಎಂದಿದ್ದಾರೆ.

ಕೇಂದ್ರ ಸರ್ಕಾರ ಸಹಕರಿಸುತ್ತಿಲ್ಲ ಎನ್ನುವ ಮೂಲಕ ಮುಖ್ಯಮಂತ್ರಿಗಳು ಕೇಂದ್ರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ. ಹವಾಮಾನ ಇಲಾಖೆಯ ಸ್ಪಷ್ಟ ಮುನ್ಸೂಚನೆ ಇದ್ದರೂ ರಾಜ್ಯ ಸರ್ಕಾರ ಮತ್ತು ಕೃಷಿ ಸಚಿವರು ಪೂರ್ವ ತಯಾರಿ ಮಾಡಿಕೊಳ್ಳದೇ ಇರುವುದು ರಸಗೊಬ್ಬರ ಕೊರತೆಯಿಂದ ರೈತರು ಬೀದಿಗಿಳಿದು ಹೋರಾಟ ಮಾಡುವಂತಾಗಿದೆ.

ಜುಲೈ ಅಂತ್ಯಕ್ಕೆ ಕೇಂದ್ರದಿಂದ 8,73,000 ಮೆಟ್ರಿಕ್ ಟನ್ ರಸಗೊಬ್ಬರ ರಾಜ್ಯಕ್ಕೆ ಬಂದಿದೆ, ನಮ್ಮ ನಿರೀಕ್ಷೆ ಇದ್ದುದು 6,31,000 ಮೆಟ್ರಿಕ್ ಟನ್, ರಾಜ್ಯ ಸರ್ಕಾರದ ಅಪೇಕ್ಷೆ ಮೀರಿ ರಸಗೊಬ್ಬರ ಬಂದಿದೆ ಎಂದರು.

ಪುಣ್ಯಾತ್ಮರೊಂದಿಗೆ ಹೋಲಿಕೆ ಸಲ್ಲದು

ಅಂದಿನ ಮೈಸೂರು ರಾಜ್ಯಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್‌ಗಿಂತ ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಡುಗೆ ದೊಡ್ಡದು ಎಂಬ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ಸರಿಯಲ್ಲ. ಪುಣ್ಯಾತ್ಮರೊಂದಿಗೆ ಹೋಲಿಕೆ ಮಾಡಿ ಅಪಮಾನ ಮಾಡಬಾರದು.

ಸಿದ್ದರಾಮಯ್ಯ ವ್ಯಕ್ತಿತ್ವ ಏನೆಂಬುದನ್ನು ರಾಜ್ಯದ ಜನರು ನೋಡಿದ್ದಾರೆ. ಹುಚ್ಚು ಹೇಳಿಕೆಗಳ ಮೂಲಕ ಅಟ್ಟಕ್ಕೇರಿಸುವ ಕೆಲಸ ಮಾಡುತ್ತಿದ್ದು, ಇದರಿಂದ ಜನರಿಗಾಗಲೀ, ರಾಜ್ಯಕ್ಕಾಗಲೀ ಏನು ಪ್ರಯೋಜನವಿಲ್ಲ ಎಂದರು.

ಬೆಂಗಳೂರಿನ ಎಲ್ಲ ಬಿಜೆಪಿ ಶಾಸಕರು ನಗರದ ಜ್ವಲಂತ ಸಮಸ್ಯೆಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಡಿ.ಕೆ.ಶಿವಕುಮಾರ್ ಸಮ್ಮುಖದಲ್ಲಿ ಚರ್ಚಿಸಿದರೂ ಅಭಿವೃದ್ಧಿ ವಿಚಾರದಲ್ಲಿ ವೈಜ್ಞಾನಿಕವಾಗಿ ಆಲೋಚಿಸಿಲ್ಲ. ಭೂಗತ ಟನೆಲ್ ರಸ್ತೆ ಬಿಬಿಎಂಪಿ 5 ವಿಭಾಗವಾಗಿ ವಿಂಗಡಣೆ ಅವೈಜ್ಞಾನಿಕ ತೀರ್ಮಾನಗಳಾಗಿವೆ, ಬೆಂಗಳೂರು ಮಹಾನಗರ ಅಭಿವೃದ್ಧಿಗೆ ಇವು ಪೂರಕವಾಗಿಲ್ಲ, ಮುಂಬೈ ಮತ್ತಿತರ ಮಹಾನಗರಗಳಲ್ಲಿ ಇಂಥ ಪ್ರಯೋಗ ಮಾಡಿದ್ದು, ಎಲ್ಲವೂ ವಿಫಲವಾಗಿದೆ ಎಂದರು.

ನಾವು ಬಿಜೆಪಿಯವರಿಗಿಂತ ಜಾಸ್ತಿ ಕೆಲಸ ಮಾಡಿದ್ದೇವೆ

ಪುತ್ರನ ಹೇಳಿಕೆಗೆ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ

ಹಾಸನ: ನಾವು ಬಿಜೆಪಿಯವರಿಗಿಂತ ಜಾಸ್ತಿ ಕೆಲಸ ಮಾಡಿದ್ದೇವೆ. ಬಿಜೆಪಿಯವರು ಏನೂ ಮಾಡಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಹಾಸನದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಈ ವೇಳೆ ಅಭಿವೃದ್ಧಿ ಕೆಲಸದಲ್ಲಿ ನಮ್ಮ ತಂದೆ ನಾಲ್ವಡಿ ಕೃಷ್ಣರಾಜ ಒಡೆಯರ್ ರೀತಿ ಕೆಲಸ ಮಾಡಿದ್ದಾರೆ ಎಂಬ ಪುತ್ರ ಡಾ.ಯತೀಂದ್ರ ಅವರ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿದರು. ಬಿಜೆಪಿಯವರು ಏನೂ ಮಾಡಿಲ್ಲ, ಎಲ್ಲಾ ನಾವು ಮಾಡಿದ್ದೇವೆ ಎಂದಿದ್ದಾರೆ. ದೆಹಲಿ ಭೇಟಿ ವಿಚಾರವಾಗಿ ಹಿಂದುಳಿದ ವರ್ಗಗಳ ಸಮ್ಮೇಳನ ಇತ್ತು ಅದಕ್ಕೆ ಹೋಗಿದ್ದೆ ಎಂದು ತಿಳಿಸಿದ್ದಾರೆ.

ರಾಜ್ಯ ಸರ್ಕಾರ ಪ್ರತ್ಯೇಕ ಜಾತಿ ಗಣತಿ ನಡೆಸುವುದು ಅನವಶ್ಯಕ

●ಸಂಸದ ಯದುವೀರ್ ಒಡೆಯರ್ ಅಭಿಪ್ರಾಯ ●ಕೇಂದ್ರದ ಜನ ಜಾತಿ ಗಣತಿಗೆ ಸಂವಿಧಾನಾತ್ಮಕ ಮಾನ್ಯತೆ ●ಜನರ 165 ಕೋಟಿ ತೆರಿಗೆ ಹಣ ವ್ಯಯ ಮಾಡಿದ್ದಾರೆ ●ಪ್ರಗತಿಯಲ್ಲಿ ಮುಂದೆ ಸಾಗುವ ಬದಲು ಹಿಂದೆ ಹೋಗುತ್ತಿದೆ ●ರಾಜ್ಯ ಸರ್ಕಾರದ ಅಸಲಿ ಮುಖವಾಡ ಕಳಚಲು ಇಂತಹ ಕಾರ್ಯಕ್ರಮ

ಮೈಸೂರು, ಜು.26 (ಬಿಎಲ್‌ಯು)– ಕೇಂದ್ರ ಸರ್ಕಾರ ನಡೆಸುವ ಜನ ಜಾತಿ ಗಣತಿಯನ್ನು ಒಪ್ಪದೆ ರಾಜ್ಯ ಸರ್ಕಾರ ಪ್ರತ್ಯೇಕವಾಗಿ ಜಾತಿ ಗಣತಿ ನಡೆಸುವುದು ಅನವಶ್ಯಕ ಎಂದು ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಶನಿವಾರ ಸಾಮಾಜಿಕ ನ್ಯಾಯ ಜಾಗೃತಿ ವೇದಿಕೆ ಆಯೋಜಿಸಿದ್ದ ಜಾತಿ ಗಣತಿ ಹಿನ್ನೆಲೆ– ಮುನ್ನೆಲೆ ಕುರಿತ ವಿಚಾರಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ವೈಜ್ಞಾನಿಕ ರೀತಿಯಲ್ಲಿ ನಡೆಸುವ ಜನ ಜಾತಿ ಗಣತಿಯನ್ನು ರಾಜ್ಯ ಸರ್ಕಾರ ಒಪ್ಪಬೇಕು ಎಂದು ಸಲಹೆ ನೀಡಿದರು.

ಕೇಂದ್ರ ಸರ್ಕಾರ ನಡೆಸುವ ಜನ ಜಾತಿ ಗಣತಿಗೆ ಸಂವಿಧಾನಾತ್ಮಕ ಮಾನ್ಯತೆ ಇರುತ್ತದೆ. ಕೇಂದ್ರ ಸರ್ಕಾರದ ಜನ ಜಾತಿಗಣತಿ ಇಡೀ ದೇಶಕ್ಕೆ ಅನ್ವಯವಾಗುತ್ತದೆ. ಆದರೆ ರಾಜ್ಯ ಸರ್ಕಾರ ನಡೆಸುವ ಜಾತಿ ಗಣತಿ ಸೀಮಿತ ವ್ಯಾಪ್ತಿಯಲ್ಲಿರುತ್ತದೆ ಎಂದರು.

ಕಳೆದ ಬಾರಿ ಮುಖ್ಯಮಂತ್ರಿ ಆಗಿದ್ದ ವೇಳೆ ಸಿದ್ದರಾಮಯ್ಯ, ಜಾತಿ ಗಣತಿ ನಡೆಸಿ ಅದಕ್ಕೆ 165 ಕೋಟಿ ರೂಪಾಯಿ ವ್ಯಯ ಮಾಡಿದರು. ಆದರೆ ಈಗ ಮತ್ತೊಂದು ಪ್ರತ್ಯೇಕ ಜಾತಿ ಗಣತಿ ಮಾಡುವುದಾಗಿ ಹೇಳುತ್ತಿದ್ದಾರೆ. ಕರ್ನಾಟಕ್ಕೆ ಯಾವುದೇ ರೀತಿಯಲ್ಲೂ ಸಂಬಂಧವಿಲ್ಲದ, ಕಾಂಗ್ರೆಸ್ ಹೈಕಮಾಂಡ್ ನಿರ್ದೇಶನದಂತೆ ರಾಜ್ಯ ಸರ್ಕಾರ ಕಾಂತರಾಜ ಆಯೋಗದ ವರದಿಯನ್ನು ಕಸದ ಬುಟ್ಟಿಗೆ ಎಸೆದಿದೆ. ಹಾಗಾದರೆ ರಾಜ್ಯ ಸರ್ಕಾರ ಜಾತಿ ಗಣತಿಗೆ ವಿನಿಯೋಗಿಸಿದ ತೆರಿಗೆದಾರರ ಹಣಕ್ಕೆ ಬೆಲೆ ಇಲ್ಲವೇ ಎಂದು ಯದುವೀರ್ ಪ್ರಶ್ನಿಸಿದರು.

ಪ್ರತಿಯೊಂದು ಕ್ಷೇತ್ರದಲ್ಲೂ ಮೈಸೂರಿನ ಪ್ರಗತಿ ದೇಶಕ್ಕೆ ಮಾದರಿಯಾಗಿದೆ. ಮಹಾರಾಜರ ಕಾಲದಲ್ಲಿ ಮಾತ್ರವಲ್ಲದೆ ಆಧುನಿಕತೆಯಲ್ಲೂ ಮೈಸೂರು ಅಭಿವೃದ್ಧಿ ಆದರ್ಶವಾಗಿದೆ. ಆದರೆ ಈಗ ತೆಲಂಗಾಣ ಮಾದರಿಯಲ್ಲಿ ಜಾತಿ ಗಣತಿ ಮಾಡುವುದಾಗಿ ಸಿದ್ದರಾಮಯ್ಯ ಘೋಷಿಸಿದ್ದಾರೆ. ಈ ಮೂಲಕ ಪ್ರಗತಿಯ ಓಟದಲ್ಲಿ ನಾವು ಮುಂದಿರುವ ಬದಲು ಹಿಂದಕ್ಕೆ ಹೋಗುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ನರೇಂದ್ರ ಮೋದಿ ಅವರು ಪ್ರಧಾನ ಮಂತ್ರಿಯಾಗಿ ಅಧಿಕಾರಕ್ಕೆ ಬಂದ ಮೇಲೆ ರಾಮಮಂದಿರ ನಿರ್ಮಾಣ ಸೇರಿದಂತೆ ಬಹಳಷ್ಟು ಸಾಧನೆ ಮಾಡಿದ್ದಾರೆ. ಇದೇ ರೀತಿ ಜನ ಜಾತಿಗಣತಿ ಸಮಸ್ಯೆಯನ್ನು ಕೂಡ ಪರಿಹರಿಸುತ್ತಾರೆ. ಆದರೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಒತ್ತಾಸೆಯಾಗಿ ನಿಲ್ಲಬೇಕು. ಇದು ಬಿಟ್ಟು ಪ್ರತ್ಯೇಕವಾದ ಜಾತಿ ಗಣತಿ ಮಾಡುವುದು ಸರಿಯಲ್ಲ ಎಂದು ಯದುವೀರ್ ಅಭಿಪ್ರಾಯಪಟ್ಟರು.

ಈ ವೇಳೆ ಮಾತನಾಡಿದ ಬಿಜೆಪಿ ಹಿಂದುಳಿದ ವರ್ಗಗಳ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಜಾತಿ ಗಣತಿ ಹೆಸರಿನಲ್ಲಿ ರಾಜಕಾರಣ ಮಾಡುವವರ ಅಸಲಿ ಮುಖವಾಡ ತೋರಿಸಲು ಇಂತಹ ವಿಚಾರಗೋಷ್ಠಿ ರೂಪಿಸಿದ್ದೇವೆ. ಇಲ್ಲಿ ಬಸವಣ್ಣನವರ ಅನುಭವ ಮಂಟಪದ ಪರಿಕಲ್ಪನೆಯಲ್ಲಿ ವಿಚಾರ ಮಂಥನವಾಗಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಬಿಜೆಪಿ ಒಬಿಸಿ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ಡಾ.ಕೆ.ಲಕ್ಷ್ಮಣ್, ಶಾಸಕ ಟಿ.ಎಸ್.ಶ್ರೀವತ್ಸ, ನಿವೃತ್ತ ಕುಲಪತಿ ಪ್ರೊ.ಹೇಮಂತ್‌ಕುಮಾರ್, ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಹೆಚ್ಚುವರಿ ಆಯುಕ್ತ ಡಿ.ಜಗನ್ನಾಥ್ ಸಾಗರ್ ಸೇರಿದಂತೆ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.





ಮೈಸೂರಿನ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಶನಿವಾರ ಸಾಮಾಜಿಕ ನ್ಯಾಯ ಜಾಗೃತಿ ವೇದಿಕೆ ಆಯೋಜಿಸಿದ್ದ 'ಜಾತಿ ಗಣತಿ ಹಿನ್ನೆಲೆ– ಮುನ್ನೆಲೆ' ಕುರಿತ ವಿಚಾರಗೋಷ್ಠಿಯಲ್ಲಿ ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬಿಜೆಪಿ ಮುಖಂಡರು, ಕಾರ್ಯಕರ್ತರನ್ನು ಬಲಚಿತ್ರದಲ್ಲಿ ಕಾಣಬಹುದು.

ಯತೀಂದ್ರರದ್ದು ದುರಹಂಕಾರದ ಪರಮಾವಧಿ: ವಿಶ್ವನಾಥ್

ಮಹಾರಾಜರಿಗಿಂತ ನಮ್ಮಪ್ಪ ಮಾಡಿರುವ ಅಭಿವೃದ್ಧಿ ಕೆಲಸಗಳೇ ಹೆಚ್ಚು ಎಂಬ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಹೇಳಿಕೆಗೆ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಕಿಡಿಕಾರಿದ್ದಾರೆ.

ಮೈಸೂರು ಮಹಾರಾಜರು ಹಾಗೂ ದೇವರಾಜ ಅರಸ್ ಅವರ ಸರಿಸಮಾನವಾಗಿ ಅಭಿವೃದ್ಧಿ ಮಾಡಲು ಇವರಿಗೆ ಸಾಧ್ಯವೇ? ಎಂದು ಪ್ರಶ್ನಿಸಿದ ವಿಶ್ವನಾಥ್ ಅವರು, ಇಂತಹ ದುರಹಂಕಾರದ ಹೇಳಿಕೆ ನೀಡುವ ಇವರೆಲ್ಲಾ ಮುಂದೆ ಎಲ್ಲಿರುತ್ತಾರೋ, ಏನಾಗುತ್ತಾರೋ ಎಂದು ಆತಂಕವಾಗುತ್ತಿದೆ ಎಂದರು.

ನಾನು 5 ಕೆ.ಜಿ. ಅಕ್ಕಿ ಕೊಟ್ಟೆ ಎಂದು ಸಿದ್ದರಾಮಯ್ಯ ಪ್ರತಿದಿನ ಭಾಷಣ ಬಿಗಿಯುತ್ತಾರೆ. ಆದರೆ ದೇವರಾಜ ಅರಸ್ ಅವರು ಭೂ ಸುಧಾರಣಾ ಕಾಯ್ದೆ ಜಾರಿಗೆ ತಂದು 21 ಲಕ್ಷ ಹೆಕ್ಟೇರ್ ಭೂಮಿಯನ್ನು ಉಳುಮೆ ಮಾಡುವವರಿಗೆ ನೀಡಿದ್ದಾರೆ. ಉಳ್ಳವರಿಂದ ಕಿತ್ತು ಬಡವರಿಗೆ ನೀಡುವುದು ಇವರ ಉದ್ದೇಶವಾಗಿದೆ. ಈ ಮೂಲಕ ದೇವರಾಜ ಅರಸ್ ಮಾಡಿರುವ ಅಭಿವೃದ್ಧಿ ಯೋಜನೆಗಳು ಸೂರ್ಯ–ಚಂದ್ರ ಇರುವ ತನಕ ಇರುತ್ತದೆ ಎಂದು ಹೇಳಿದರು.

ಜನ ಜಾತಿಗಣತಿ ನಡೆಸುತ್ತಿರುವುದು ಕೇಂದ್ರ ಸರ್ಕಾರದ ಐತಿಹಾಸಿಕ ತೀರ್ಮಾನವಾಗಿದ್ದು, 2028ಕ್ಕೆ ಮುಗಿಸುವ ಗುರಿ ಹೊಂದಿದ್ದಾರೆ. ಮೊದಲು ಕೇಂದ್ರಾಡಳಿತ ಪ್ರದೇಶದಲ್ಲಿ ನಡೆಸಿ ನಂತರ ಉಳಿದ ರಾಜ್ಯಗಳಲ್ಲಿ ಸಮೀಕ್ಷೆ ಕೈಗೊಳ್ಳಲಿದ್ದಾರೆ.

ಸೆಪ್ಟೆಂಬರ್ ತಿಂಗಳಾಂತ್ಯಕ್ಕೆ ರಾಜ್ಯದಲ್ಲಿ ಜಾತಿ ಗಣತಿ ಮಾಡಿ ಮುಗಿಸುವುದಾಗಿ ಸಿದ್ದರಾಮಯ್ಯ ಹೇಳುತ್ತಾರೆ. ಆದರೆ ಆ ಸಮಯದಲ್ಲಿ ಶಾಲೆಗಳಿಗೆ ದಸರಾ ರಜೆ ಇರುವ ಕಾರಣ ಜನರು ಪ್ರವಾಸಕ್ಕೆ ಹೋಗುತ್ತಾರೆ. ಅಲ್ಲದೆ ಜನ ಜಾತಿ ಗಣತಿಗೆ ಶಿಕ್ಷಕರನ್ನು ಬಳಸಿಕೊಳ್ಳುವುದು ಸರಿಯಲ್ಲ ಎಂದು ಹೇಳಿದರು.

ಬಿಜೆಪಿಯವರು ಈಗ ನೆನೆಸಿಕೊಂಡಿದ್ದಾರೆ: ಈ ಕಾರ್ಯಕ್ರಮಕ್ಕೆ ಬಿಜೆಪಿಯವರು ನನ್ನನ್ನು ಆಹ್ವಾನಿಸಿರುವುದು ನನಗೆ ಆಶ್ಚರ್ಯ ಎನಿಸಿತು. ಇಷ್ಟು ದಿನ ನೆನೆಯದ ಇವರು ನನ್ನನ್ನು ಇಂದು ನೆನಪಿಸಿಕೊಂಡಿದ್ದಾರಲ್ಲ ಎಂದು ಸಂತೋಷ ಕೂಡ ಆಯಿತು. ಜೆಡಿಎಸ್ ಬಿಟ್ಟು ಬಿಜೆಪಿಗೆ ಸೇರಿ ಯಡಿಯೂರಪ್ಪಾಗಿ ಅಧಿಕಾರ ತ್ಯಾಗ ಮಾಡಿದೆನು. ಆದರೆ ನನಗೆ ಯಡಿಯೂರಪ್ಪ ಅವರಿಂದ ಯಾವ ಪ್ರಯೋಜನ ಆಗಲಿಲ್ಲ. ಎಲ್ಲಿ, ಏನೇ ತಪ್ಪು ನಡೆದರೂ ಅದನ್ನು ಪ್ರಶ್ನಿಸದೆ ಮೌನವಾಗಿರಬೇಕು. ಇಲ್ಲವೆಂದರೆ ಅವರಿಗೆ ಉಳಿಗಾಲವಿಲ್ಲ ಎಂದು ವಿಶ್ವನಾಥ್ ಬೇಸರ ವ್ಯಕ್ತಪಡಿಸಿದರು.

ಸಿದ್ದರಾಮಯ್ಯಗೆ ಆಗಾಗ ಜ್ಞಾನೋದಯವಾಗುತ್ತದೆ

“ ಜವಾಹರ ಲಾಲ್ ನೆಹರು ಅವರು ಪ್ರಧಾನಮಂತ್ರಿ ಆಗಿದ್ದಾಗ ರಚಿಸಿದ ಕಾಕಕಾಲೇಕರ್ ಆಯೋಗವನ್ನು, ರಚಿಸಿ, ಅದರಿಂದ ಪಡೆದ ವರದಿಯನ್ನು ಕಾಂಗ್ರೆಸ್ ಸರ್ಕಾರ ಒಂದು ಪುಟ ತಿರುಗಿಸಿ ಕೂಡ ನೋಡಲಿಲ್ಲ. ಕಾಂಗ್ರೆಸ್ ಸರ್ಕಾರ ಬಹಳಷ್ಟು ಆಯೋಗ ರಚನೆ ಮಾಡಿದರೂ ಯಾವುದನ್ನು ಜಾರಿ ಮಾಡಿಲ್ಲ. ನಮ್ಮಲ್ಲಿ 2,399 ಹಿಂದುಳಿದ ಜಾತಿಗಳಿದ್ದು, ಇದರಲ್ಲಿ 237 ಜಾತಿಗಳು ತೀರಾ ಹಿಂದುಳಿದಿವೆ. ಈ ವರ್ಗವನ್ನು ಮೇಲೆತ್ತುವ ಕೆಲಸ ಆಗಬೇಕು. ಅದು ಬಿಟ್ಟು ಜಾತಿ ಗಣತಿ ಹೆಸರಿನಲ್ಲಿ ಕಾಂಗ್ರೆಸ್ ರಾಜಕಾರಣ ಮಾಡಬಾರದು. ಸೆಪ್ಟೆಂಬರ್ ತಿಂಗಳಾಂತ್ಯಕ್ಕೆ ಜಾತಿ ಗಣತಿ ಮಾಡಿ ಮುಗಿಸುತ್ತೇವೆ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಇಷ್ಟು ಕಡಿಮೆ ಸಮಯದಲ್ಲಿ ಗಣತಿ ಮಾಡಲು ಸಾಧ್ಯವೇ? ಕಳೆದ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಕಾಂತರಾಜು ಆಯೋಗ, ಈ ಬಾರಿ ಮುಖ್ಯಮಂತ್ರಿ ಆಗಿರುವಾಗ ನಾಗಮೋಹನ್‌ದಾಸ್ ಆಯೋಗ ರಚನೆ ಮಾಡಿದ್ದು, ಆಗಾಗ ಸಿದ್ದರಾಮಯ್ಯ ಅವರಿಗೆ ಜ್ಞಾನೋದಯವಾಗುತ್ತದೆ.

–ರವಿಕುಮಾರ್, ವಿಧಾನಪರಿಷತ್ ಸದಸ್ಯ

ತಾನೆ ರಚನೆ ಮಾಡಿದ್ದ ಆಯೋಗದ ವರದಿಗಳ ಕಸದ ಬುಟ್ಟಿಗೆಸೆದ ಕಾಂಗ್ರೆಸ್ ಸರ್ಕಾರ

“ ತಾನೇ ರಚನೆ ಮಾಡಿದ್ದ ಹಲವು ಆಯೋಗಗಳ ವರದಿಗಳನ್ನು ಕಾಂಗ್ರೆಸ್ ಸರ್ಕಾರ ಕಸದ ಬುಟ್ಟಿಗೆ ಎಸೆದಿದೆ. 50 ವರ್ಷಗಳ ಕಾಲ ದೇಶವನ್ನಾಳಿದ ಕಾಂಗ್ರೆಸ್ ಸರ್ಕಾರ ಹಿಂದುಳಿದ ವರ್ಗಕ್ಕೆ ಯಾವುದೇ ರೀತಿಯಲ್ಲೂ ಪ್ರಯೋಜನಕಾರಿಯಾಗಿರಲಿಲ್ಲ. ಹಿಂದುಳಿದ ವರ್ಗಗಳನ್ನು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಮೇಲೆತ್ತಲು ನೀಡಿರುವ ವರದಿಗಳನ್ನು ಕಸದ ಬುಟ್ಟಿಗೆ ಎಸೆದಿದೆ.

ನೆಹರು ಅವರು 17 ವರ್ಷಗಳ ಕಾಲ ಈ ದೇಶದಲ್ಲಿ ಆಡಳಿತ ನಡೆಸಿದ್ದಾರೆ. ಹಿಂದುಳಿದ ವರ್ಗಗಳ ಏಳಿಗೆಗಾಗಿ ರಚನೆ ಮಾಡಿದ್ದ ಕಾಕಾ ಕಾಲ್ಕೇಕರ್ ವರದಿ ಜಾರಿ ಮಾಡಲಿಲ್ಲ. ತರುವಾಯ ಅಧಿಕಾರಕ್ಕೆ ಬಂದ ಇಂದಿರಾಗಾಂಧಿ ಅವರು ಕೂಡ ಈ ವರದಿಯನ್ನು ಜಾರಿಗೊಳಿಸಲಿಲ್ಲ. ಒಟ್ಟಾರೆ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಕಾಂಗ್ರೆಸ್ ನೀಡಿರುವ ಕೊಡುಗೆ ಶೂನ್ಯ.

–ಡಾ.ಕೆ.ಕೆ.ಲಕ್ಷ್ಮಣ್, ರಾಷ್ಟ್ರೀಯ ಅಧ್ಯಕ್ಷ ಬಿಜೆಪಿ ಒಬಿಸಿ ಮೋರ್ಚಾ

ವಿಶ್ವಕರ್ಮ ಯೋಜನೆಯಲ್ಲಿ ಸಾಲ ಪಡೆಯಲು ಸಿಬಿಲ್ ಸ್ಕೋರ್ ಅಗತ್ಯವಿಲ್ಲ

“ ವಿಶ್ವಕರ್ಮ ಯೋಜನೆಯಿಂದ ಸಾಲ ಸೌಲಭ್ಯ ಪಡೆಯಲು ಸಿಬಿಲ್ ಸ್ಕೋರ್ ಅಗತ್ಯವಿಲ್ಲ. ಸಿಬಿಲ್ ಸ್ಕೋರ್ ಬೇಕೆಂದು ಸಾಲ ನೀಡಲು ಸಬೂಬು ಹೇಳಿದರೆ ಅಂತಹ ಬ್ಯಾಂಕ್ ಅಧಿಕಾರಿ ಅಮಾನತು ಶಿಕ್ಷೆ ಅನುಭವಿಸಬೇಕಾಗುತ್ತದೆ. ಕಳೆದ ಬಾರಿ ಕಾಂತರಾಜು ಆಯೋಗ ವರದಿ ಸಲ್ಲಿಸಿದಾಗ ಅದಕ್ಕೆ ಸರ್ಕಾರದ ಪದ ನಿಮಿತ್ತ ಕಾರ್ಯದರ್ಶಿಯ ಸಹಿ ಇರಲಿಲ್ಲ. ಹೀಗಿರುವಾಗ ಅದು ಹೇಗೆ ಅಧಿಕೃತವಾಗುತ್ತದೆ? ರಾಜ್ಯ ಕಾಂಗ್ರೆಸ್ ಸರ್ಕಾರ ಈಗ 2ನೇ ಬಾರಿಗೆ ಜಾತಿಗಣತಿ ನಾಟಕವಾಡುತ್ತಿದೆ.

–ಕೋಟಾ ಶ್ರೀನಿವಾಸ ಪೂಜಾರಿ, ಉಡುಪಿ–ಚಿಕ್ಕಮಗಳೂರು ಸಂಸದ

ಮುಖ್ಯಮಂತ್ರಿಗೆ ಆಹ್ವಾನ...



ಆಗಸ್ಟ್ 31ರಂದು ವಿಧಾನಪರಿಷತ್ ಮಾಜಿ ಸದಸ್ಯ ಹಾಗೂ ಮೈಸೂರಿನ ಹೆಸರಾಂತ ಉದ್ಯಮಿ, ಚಿತ್ರ ನಿರ್ಮಾಪಕ ಸಂದೇಶ್ ನಾಗರಾಜ್ ಅವರ 80ನೇ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಿದ್ದು, ಈ ಹಿನ್ನೆಲೆಯಲ್ಲಿ ಸಂದೇಶ್ ನಾಗರಾಜ್ ಅವರೇ ಖುದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮೈಸೂರಿನ ಅವರ ನಿವಾಸದಲ್ಲಿ ಭೇಟಿಯಾಗಿ, ಆಹ್ವಾನಿಸಿದರು. ಈ ಸಂದರ್ಭದಲ್ಲಿ ಶಾಸಕ ರವಿಶಂಕರ್, ಎಂಎಲ್‌ಸಿ ಡಾ.ಯತೀಂದ್ರ, ಕಾಂಗ್ರೆಸ್ ರಾಜ್ಯ ವಕ್ತಾರ ಎಂ.ಲಕ್ಷ್ಮಣ್, ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಇತರರು ಉಪಸ್ಥಿತರಿದ್ದರು.

ವಿದ್ಯಾರ್ಥಿವೇತನ ವಿತರಣೆ...



ಮೈಸೂರು ಚಾಮುಂಡಿಪುರಂನ ಶಾರದಾನಿಕೇತನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆರ್ಥಿಕವಾಗಿ ಹಿಂದುಳಿದ 53 ವಿದ್ಯಾರ್ಥಿಗಳಿಗೆ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದಿಂದ, ಶ್ರೀ ಹೆಚ್.ವಿ.ರಾಜೀವ್ ಸ್ನೇಹ ಬಳಗದ ಸಹಯೋಗದಲ್ಲಿ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಎಂ.ವಿಶ್ವನಾಥಯ್ಯ, ಕಾರ್ಯದರ್ಶಿ ಕೆ.ಆರ್.ಮಂಜುನಾಥ್, ಹೆಚ್.ವಿ.ರಾಜೀವ್, ಸಂಘದ ಎಲ್ಲಾ ನಿರ್ದೇಶಕರು ಉಪಸ್ಥಿತರಿದ್ದರು.

ಸಂವಿಧಾನ ಬದಲಾವಣೆ ಮಾಡುವವರಿಗೆ ಸಂವಿಧಾನದ ಮೂಲಕವೇ ಚಾಟಿ ಬೀಸಿದ್ದೇವೆ

ಸಂವಿಧಾನ ವಿರೋಧಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿರುಗೇಟು

ಮೈಸೂರು, ಜು.26(ಬಿಎಲ್‌ಯು)– ಡಾ.ಬಿ.ಆರ್.ಅಂಬೇಡ್ಕರ್ ಅವರು ರಚನೆ ಮಾಡಿರುವ ಸಂವಿಧಾನವನ್ನು ಬದಲಾವಣೆ ಮಾಡುತ್ತೇವೆ ಎಂದು ಹೊರಟವರಿಗೆ ಸಂವಿಧಾನದ ಮೂಲಕವೇ ಸರಿಯಾಗಿ ಚಾಟಿ ಬೀಸಿದ್ದೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹೇದವಪ್ಪ ತಿಳಿಸಿದರು.

ನಗರದ ಕಲಾಮಂದಿರದಲ್ಲಿ ಇಂದು ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತಾಡಿದ ಅವರು, ದೇಶದ ಬಲಾಢ್ಯ ಸಮುದಾಯದಲ್ಲಿರುವ ನಾವೆಲ್ಲಾ ಸಂವಿಧಾನದ ಮೇಲೆ ಸವಾರಿ ಮಾಡುವುದಕ್ಕೆ ಬಿಡಬಾರದು ಎಂದು ಸಲಹೆ ನೀಡಿದರು.



ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಇರುವ ಅಪಾಯ ಅರಿತು ನಾವು ಇದನ್ನು ಸಂರಕ್ಷಿಸಬೇಕು. ನಮ್ಮ ಆಚಾರ–ವಿಚಾರಗಳು ಧರ್ಮದ ತಳಹದಿ ಮೇಲೆ ನಿಂತಿದೆ. ಹಾಗೆಂದ ಮಾತ್ರಕ್ಕೆ ಧರ್ಮವೇ ಎಲ್ಲಾ ವಿಚಾರಕ್ಕೂ ಮೂಲವಲ್ಲ. ನಮಗಾಗಿ ಧರ್ಮ ಇದೆಯೇ ಹೊರತು, ಧರ್ಮಕ್ಕಾಗಿ ನಾವು ಇಲ್ಲ ಎಂದರು.

ನಮ್ಮಲ್ಲಿರುವ ಜ್ಞಾನ ಮತ್ತು ಶಿಕ್ಷಣದ ಶಕ್ತಿಯಿಂದ ಸವಾಲುಗಳನ್ನು ಎದುರಿಸುತ್ತಿದ್ದೇವೆ. ಇಂತಹ ಸಮಯದಲ್ಲಿ ಶಿಕ್ಷಣ ಮತ್ತು ಸಂವಿಧಾನದ ಹಕ್ಕುಗಳನ್ನು ಅಸ್ತ್ರವಾಗಿ ನೀಡಿದ ಅಂಬೇಡ್ಕರ್ ಅವರನ್ನು ನೆನೆಯುವುದು ಅತ್ಯವಶ್ಯ ಎಂದು ತಿಳಿಸಿದರು.

ಈ ಮೊದಲು ಅಂಬೇಡ್ಕರ್ ಜಯಂತಿ ಆಚರಿಸುವಾಗ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಸ್ವ–ಇಚ್ಛೆಯಿಂದ ಓಡಾಡದ ಪರಿಸ್ಥಿತಿ ಇತ್ತು. ಕೆಲವು ರಸ್ತೆಗಳಿಗೆ ಹೋಗದಂತೆ ನಿರ್ಬಂಧವಿತ್ತು. ಆದರೆ ಇಂದು ಕಾಲ ಬದಲಾಗಿದೆ. ಸಮಾಜದಲ್ಲಿರುವ ಎಲ್ಲರೂ ನಮ್ಮನ್ನು ಅಪ್ಪಿಕೊಂಡಿದ್ದಾರೆ, ಒಪ್ಪಿಕೊಂಡಿದ್ದಾರೆ ಎಂದರು.

ಸಾಹುಮಹಾರಾಜ್, ಜ್ಯೋತಿ ಬಾಫುಲೆ, ಪೆರಿಯಾರ್ ರಾಮಸ್ವಾಮಿ ಅವರು ಸಮಾಜದ ಶ್ರೇಯೋಭಿವೃದ್ಧಿಗೆ ಶ್ರಮಿಸಿದರು. ನಾವು ಅವರ ಹಾದಿಯಲ್ಲೇ ಸಾಗಬೇಕು ಎಂದು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಲಹೆ ನೀಡಿದರು.

ಚೆನ್ನಾಲಿಂಗನಹಳ್ಳಿ ಚೇತವನ ಬುದ್ಧ ವಿಹಾರದ ಮನೋರಖ್ಖಿತ ಬಂತೇಜಿ, ಗಾಂಧಿನಗರದ ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ, ಚಾಮರಾಜನಗರ ಜಿಲ್ಲೆಯ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ವಿ. ಚಂದ್ರು, ಸಂಘದ ರಾಜ್ಯಾಧ್ಯಕ್ಷ ಡಾ.ಡಿ. ಚಂದ್ರಶೇಖರಯ್ಯ, ಮಾಜಿ ಮೇಯರ್ ಪುರುಷೋತ್ತಮ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಶೇಕಡ 85ಕ್ಕಿಂತ ಹೆಚ್ಚು ಅಂಕ ಪಡೆದ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ತರುವಾಯ ಸಮುದಾಯದಲ್ಲಿ ವಿಶೇಷ ಸೇವೆ ಸಲ್ಲಿಸಿರುವ ಮಹನೀಯರನ್ನು ಸಹ ಅಭಿನಂದಿಸಲಾಯಿತು.

ಪ್ರೌಢಶಾಲಾ ಕನ್ನಡ ಶಿಕ್ಷಕರಿಗೆ ಸನ್ಮಾನ

ಮೈಸೂರು,ಜು.26–ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಸಂಸ್ಥೆಯ ವಾರ್ಷಿಕೋತ್ಸವದ ಪ್ರಯುಕ್ತ ಮೈಸೂರು ಜಿಲ್ಲಾ ಮಟ್ಟದ ಸರ್ಕಾರಿ ಪ್ರೌಢಶಾಲಾ ಕನ್ನಡ ಶಿಕ್ಷಕರಿಗೆ ಸನ್ಮಾನ ಸಮಾರಂಭವನ್ನು ಆ.3ರಂದು ನಮನ ಕಲಾ ಮಂಟಪದಲ್ಲಿ ಏರ್ಪಡಿಸಲಾಗಿದೆ. ಆಸಕ್ತ ಸರ್ಕಾರಿ ಪ್ರೌಢಶಾಲಾ ಕನ್ನಡ ಶಿಕ್ಷಕರು ಜು.30ರೊಳಗೆ ತಮ್ಮ ಪೂರ್ಣ ಹೆಸರು, ತಾವು ಬೋಧನೆ ಮಾಡುವ ಶಾಲೆಯ ವಿಳಾಸವನ್ನು ನೀಡಿ, ನೋಂದಾಯಿಸಿಕೊಳ್ಳಬೇಕು. ಮಾಹಿತಿಗೆ ಮೊ.ನಂ.9686205346 ಕರೆ ಮಾಡಿ.

ಆ.2ರಂದು ಚರ್ಚಾ ಸ್ಪರ್ಧೆ

ಮೈಸೂರು,ಜು.26–ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ವಸತಿ ನಿಲಯಗಳ ಸಮುಚ್ಚಯದಲ್ಲಿ ಆ.2ರಂದು ಬೆಳಗ್ಗೆ 10 ಗಂಟೆಗೆ ನಗರ ವ್ಯಾಪ್ತಿಯ ಮಹಿಳಾ ವಿದ್ಯಾರ್ಥಿನಿಲಯಗಳ ಪದವಿಪೂರ್ವ, ಪದವಿ ವಿದ್ಯಾರ್ಥಿನಿಯರಿಗೆ ಚರ್ಚಾ ಸ್ಪರ್ಧೆ ಏರ್ಪಡಿಸಲಾಗಿದೆ. ಆಸಕ್ತರು ಜು.31ರೊಳಗೆ ಶ್ರೀಮತಿ ರಶ್ಮಿ, ನಿಲಯ ಪಾಲಕರು, ಜೆಎಸ್‌ಎಸ್ ಮಹಿಳಾ ವಸತಿ ನಿಲಯಗಳ ಸಮುಚ್ಚಯ, ಸರಸ್ವತಿಪುರಂ, ಮೊ. 9900927554ಗೆ ಸಂಪರ್ಕಿಸಿ ಹೆಸರು ನೋಂದಾಯಿಸಲು ಕೋರಲಾಗಿದೆ.

ದೇಶ - ವಿದೇಶ

ನ್ಯಾಯಾಂಗ ಕಟ್ಟಡದ ಮೇಲೆ ಭಯೋತ್ಪಾದಕ ದಾಳಿ; 8 ಬಲಿ



ಇರಾನ್: ಆಗ್ನೇಯ ಇರಾನ್‌ನಲ್ಲಿರುವ ನ್ಯಾಯಾಂಗ ಕಟ್ಟಡದ ಮೇಲೆ ಭಯೋತ್ಪಾದಕ ದಾಳಿ ನಡೆದಿದೆ. ಈ ದಾಳಿಯಲ್ಲಿ ಐವರು ನಾಗರಿಕರು ಮತ್ತು ಮೂವರು ಭಯೋತ್ಪಾದಕರು ಸೇರಿ ಕನಿಷ್ಠ 8 ಮಂದಿ ಸಾವನಪ್ಪಿದ್ದಾರೆ ಎಂದು ಮಾಧ್ಯಮದ ವರದಿಗಳು ತಿಳಿಸಿವೆ. ಆಗ್ನೇಯ ಇರಾನ್‌ನ ಸಿಸ್ತಾನ್–ಬಲೂಚಿಸ್ತಾನ್ ಪ್ರಾಂತ್ಯದ ರಾಜಧಾನಿ ಜಹೇದಾನ್‌ನಲ್ಲಿರುವ ನ್ಯಾಯಾಂಗ ಕೇಂದ್ರದ ಮೇಲೆ ನಡೆದ ಭಯೋತ್ಪಾದಕ ದಾಳಿಯಲ್ಲಿ ಐದು ನಾಗರಿಕರು ಮತ್ತು ಮೂವರು ದಾಳಿಕೋರರು ಸೇರಿದ್ದಾರೆ, ಜೊತೆಗೆ 13 ಜನರು ಗಾಯಗೊಂಡಿದ್ದಾರೆ ಎಂದು ಇರಾನ್‌ನ ರಾಜ್ಯ ಮಾಧ್ಯಮಗಳಾದ ಮಿಜಾನ್ ಆನ್‌ಲೈನ್ ಮತ್ತು ಐಆರ್‌ಎನ್‌ಎ ವರದಿ ಮಾಡಿವೆ ವರದಿಗಳ ಪ್ರಕಾರ ದಾಳಿಕೋರರು ಜಹೇದಾನ್‌ನ ಕೇಂದ್ರದಲ್ಲಿರುವ ನ್ಯಾಯಾಂಗ ಕಟ್ಟಡದ ಒಳಗೆ ನುಗ್ಗಿ, ನ್ಯಾಯಾಧೀಶರ ಕೊಠಡಿಗಳನ್ನು ಗುರಿಯಾಗಿಸಿಕೊಂಡು ಗುಂಡಿನ ದಾಳಿ ಮತ್ತು ಗ್ರೆನೇಡ್ ಸ್ಫೋಟಗಳನ್ನು ನಡೆಸಿದ್ದಾರೆ. ಈ ದಾಳಿಯಲ್ಲಿ ತಾಯಿ ಮತ್ತು ಮಗು ಸೇರಿದಂತೆ ಐದು ನಾಗರಿಕರು ಸಾವನ್ನಪ್ಪಿದ್ದಾರೆ, ಮತ್ತು ಭದ್ರತಾ ಪಡೆಗಳೊಂದಿಗಿನ ಗುಂಡಿನ ಚಕಮಕಿಯಲ್ಲಿ ಮೂವರು ದಾಳಿಕೋರರು ಬಲಿಯಾಗಿದ್ದಾರೆ.

ಜಾರ್ಖಂಡ್‌ನಲ್ಲಿ ಪೊಲೀಸರ ಗುಂಡೇಟಿಗೆ 3 ನಕ್ಸಲರು ಬಲಿ

ಜಾರ್ಖಂಡ್: ಗುಮ್ಲಾ ಜಿಲ್ಲೆಯ ಘಾಘ್ರಾ ಪೊಲೀಸ್ ಠಾಣೆ ವ್ಯಾಪ್ತಿಯ ಸೆಹಾಲ್ ಗ್ರಾಮದ ಬಳಿಯ ದಟ್ಟ ಅರಣ್ಯದಲ್ಲಿ ಶನಿವಾರ ಜಾರ್ಖಂಡ್ ಪೊಲೀಸ್



ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಕೋಬ್ರಾ ಬೆಟಾಲಿಯನ್‌ನ ಜಂಟಿ ತಂಡದೊಂದಿಗೆ ಕಾರ್ಯಾಚರಣೆ ನಡೆದಿದೆ. ಈ ವೇಳೆ ಗುಂಡಿನ ಚಕಮಕಿಯಲ್ಲಿ ಪೀಪಲ್ಸ್ ಲಿಬರೇಶನ್ ಫ್ರಂಟ್ ಆಫ್ ಇಂಡಿಯಾ ಎಂಬ ನಕ್ಸಲೀ ಸಂಘಟನೆಯ ಮೂವರು ಉಗ್ರರು ಹತರಾಗಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಗಳು ಎರಡು ಎಕೆ–47 ರೈಫಲ್‌ಗಳು ಮತ್ತು ಒಂದು ಇನ್ಸಾಸ್ ರೈಫಲ್ ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು, ಮೊಬೈಲ್ ಫೋನ್‌ಗಳು, ವಾಕಿ–ಟಾಕಿಗಳು, ನಗದು ಮತ್ತು ಇತರ ಉಗ್ರರ ಉಪಕರಣಗಳನ್ನು ವಶಪಡಿಸಿಕೊಂಡಿವೆ. ಇಂದು ನಡೆದ ಎನ್‌ಕೌಂಟರ್ ಘಟನೆಯು ಗುಮ್ಲಾ ಜಿಲ್ಲೆಯಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆಗಳಲ್ಲಿ ಭದ್ರತಾ ಪಡೆಗಳಿಗೆ ಮತ್ತೊಂದು ಗಮನಾರ್ಹ ಯಶಸ್ಸನ್ನು ತಂದಿದೆ. ಕಾರ್ಯಾಚರಣೆಯ ನಂತರ ಪೊಲೀಸರು ಸ್ಥಳದಲ್ಲಿ ವಿವಿಧ ಶಸ್ತ್ರಾಸ್ತ್ರಗಳು ಮತ್ತು ಉಗ್ರರಿಗೆ ಸಂಬಂಧಿಸಿದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ದೇವ್‌ಹಾರನ್ ಜಲಪಾತದಲ್ಲಿ ಮುಳುಗಿ ಇಬ್ಬರು ವೈದ್ಯಕೀಯ ವಿದ್ಯಾರ್ಥಿಗಳು ಸಾವು

ಸಂಬಲ್ಪುರ: ಒಡಿಶಾದ ಬುರ್ಲಾದ ವೀರ್ ಸುರೇಂದ್ರ



ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ(ವಿಮ್ಸಾರ್) ಅಂತಿಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳಿಬ್ಬರು ಶನಿವಾರ ಸಂಬಲ್ಪುರ ಜಿಲ್ಲೆಯ ಜುಜೋಮುರಾ ಪ್ರದೇಶದ ದೇವ್‌ಹಾರನ್ ಜಲಪಾತದಲ್ಲಿ ಸ್ನಾನ ಮಾಡುವಾಗ ಮುಳುಗಿ ಸಾವನ್ನಪ್ಪಿದ ಘಟನೆ ನಡೆದಿದೆ. ಮೃತರನ್ನು ರಾಜಸ್ಥಾನ ಮೂಲದ ಮೋನಿಕಾ ಮೀನಾ ಮತ್ತು ದೆಹಲಿಯ ಸಂದೀಪ್‌ಪುರಿ ಎಂದು ಗುರುತಿಸಲಾಗಿದೆ. ಜುಜೋಮುರಾ ಐಐಸಿ ಸಂಜಯ್ ರೌತ್ ಅವರ ಪ್ರಕಾರ ಆರು ವಿದ್ಯಾರ್ಥಿಗಳ ಗುಂಪು ಜನಪ್ರಿಯ ಜಲಪಾತ ಸ್ಥಳಕ್ಕೆ ವಿಹಾರಕ್ಕೆ ಹೋಗಿತ್ತು. ಅವರು ಸ್ನಾನ ಮಾಡುತ್ತಿದ್ದಾಗ ಹಠಾತ್ ಮಳೆಯಿಂದಾಗಿ ಹೊಳೆಯ ನೀರಿನ ಮಟ್ಟ ತೀವ್ರವಾಗಿ ಹೆಚ್ಚಾಗಿ ಇಬ್ಬರು ವಿದ್ಯಾರ್ಥಿಗಳು ಕೊಚ್ಚಿ ಹೋಗಿದ್ದರು. ಸ್ಥಳೀಯ ಪ್ರವಾಸಿಗರು ಮತ್ತು ಉಳಿದ ವಿದ್ಯಾರ್ಥಿಗಳು ತಕ್ಷಣ ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ಪೊಲೀಸರಿಗೆ ಮಾಹಿತಿ ನೀಡಿದರು. ರಕ್ಷಣಾ ತಂಡಗಳು ಸ್ಥಳಕ್ಕೆ ಆಗಮಿಸಿ ಇಬ್ಬರನ್ನು ನೀರಿನಿಂದ ಹೊರತೆಗೆದಿವೆ. ಆದರೆ ಅವರನ್ನು ಸ್ಥಳೀಯ ಆಸ್ಪತ್ರೆಗೆ ತಲುಪುವಷ್ಟರಲ್ಲಿ ಇಬ್ಬರೂ ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದ್ದಾರೆ.

ಥೈಲ್ಯಾಂಡ್ ಜೊತೆ ಕದನ ವಿರಾಮಕ್ಕೆ ಕಾಂಬೋಡಿಯಾ ಕರೆ

ಕಾಂಬೋಡಿಯಾ: ಥೈಲ್ಯಾಂಡ್ ಮತ್ತು ಕಾಂಬೋ



ಡಿಯಾ ಮಧ್ಯೆ ಯುದ್ಧ ಶುರುವಾಗಿದೆ. ಈವರೆಗೂ 30ಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ. ಕಾಂಬೋಡಿಯಾ ಮತ್ತು ಥೈಲ್ಯಾಂಡ್ ನಡುವಿನ ಗಡಿ ವಿವಾದ ಜು.24 ರಂದು ತೀವ್ರಗೊಂಡಿತು. ಎರಡನೇ ದಿನವಾದ ಶುಕ್ರವಾರ ಕೂಡ ತೀವ್ರ ಸೈನಿಕ ಘರ್ಷಣೆಗಳು ನಡೆದವು. ಈ ಘರ್ಷಣೆಯಲ್ಲಿ ಜೆಟ್‌ಗಳು, ಫಿರಂಗಿಗಳು, ಟ್ಯಾಂಕ್‌ಗಳು ಮತ್ತು ನೆಲದ ಪಡೆಗಳು ಒಳಗೊಂಡಿದ್ದು, ಇದರಿಂದ 32 ಜನರು ಸಾವನ್ನಪ್ಪಿದ್ದಾರೆ ಮತ್ತು 130ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಇದೀಗ ಈ ಯುದ್ಧವನ್ನು ನಿಲ್ಲಿಸಲು ಕಾಂಬೋಡಿಯಾ ಮುಂದಾಗಿದೆ. ಹೀಗಾಗಿ ಥೈಲ್ಯಾಂಡ್ ಜೊತೆ ಕದನವಿರಾಮಕ್ಕೆ ಮನವಿ ಮಾಡಿದೆ.

ಕಾಂಬೋಡಿಯಾದ ರಾಯಭಾರಿ ಛಿಯಾ ಕಿಯೊ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಭೆಯಲ್ಲಿ ತಕ್ಷಣದ ಮತ್ತು ಬೇಷರತ್ತಾದ ಕದನ ವಿರಾಮಕ್ಕೆ ಕರೆ ನೀಡಿದರು. ಥೈಲ್ಯಾಂಡ್ ಕೂಡ ರಾಜತಾಂತ್ರಿಕ ಮಾತುಕತೆಗೆ ಒಪ್ಪಿಗೆ ಸೂಚಿಸಿದೆ, ಆದರೆ ಎರಡೂ ದೇಶಗಳು ಘರ್ಷಣೆಯ ಆರಂಭಕ್ಕೆ ಪರಸ್ಪರ ಆರೋಪಿಸಿಕೊಂಡಿವೆ.

AI–171 ವಿಮಾನ ಪತನ: ಏರ್ ಇಂಡಿಯಾದಿಂದ 147 ಕುಟುಂಬಗಳಿಗೆ ಮಧ್ಯಂತರ ಪರಿಹಾರ ಬಿಡುಗಡೆ

ನವದೆಹಲಿ: ಅಹಮದಾಬಾದ್‌ನಲ್ಲಿ AI-171 ವಿಮಾನ ಪತನದಲ್ಲಿ ಪ್ರಾಣ ಕಳೆದುಕೊಂಡ 147 ಪ್ರಯಾಣಿಕರ ಕುಟುಂಬಗಳಿಗೆ ತಲಾ 25 ಲಕ್ಷ ರೂ. ಮಧ್ಯಂತರ ಪರಿಹಾರ ಪಾವತಿಸಲಾಗಿದೆ ಎಂದು ಏರ್ ಇಂಡಿಯಾ ಶನಿವಾರ ತಿಳಿಸಿದೆ.



ವಿಮಾನಯಾನ ಸಂಸ್ಥೆಯು ಇನ್ನೂ 52 ಕುಟುಂಬಗಳಿಗೆ ಪರಿಹಾರ ವಿತರಿಸುವ ಪ್ರಕ್ರಿಯೆ ನಡೆಸುತ್ತಿದೆ. ಒಂದು ತಿಂಗಳ ಹಿಂದೆಯೇ ಮೃತರ ಕುಟುಂಬಗಳಿಗೆ ತಕ್ಷಣದ ಆರ್ಥಿಕ ಅಗತ್ಯಗಳನ್ನು ಪೂರೈಸಲು ಏರ್ ಇಂಡಿಯಾ 25 ಲಕ್ಷ ರೂ. ಮಧ್ಯಂತರ ಪರಿಹಾರವನ್ನು ಬಿಡುಗಡೆ ಮಾಡಲು ಪ್ರಾರಂಭಿಸಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ. ಏರ್ ಇಂಡಿಯಾ ಇದುವರೆಗೆ 229 ಮೃತ ಪ್ರಯಾಣಿಕರಲ್ಲಿ 147 ಜನರ ಕುಟುಂಬಗಳಿಗೆ ಮತ್ತು ಅಪಘಾತ ಸ್ಥಳದಲ್ಲಿ ಪ್ರಾಣ ಕಳೆದುಕೊಂಡ 19 ಜನರ ಕುಟುಂಬಗಳಿಗೆ ಮಧ್ಯಂತರ ಪರಿಹಾರವನ್ನು ಬಿಡುಗಡೆ ಮಾಡಿದೆ. ಇದಲ್ಲದೆ, 52 ಇತರರ ಅಗತ್ಯ ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ಅವರ ಕುಟುಂಬಗಳಿಗೂ ಮಧ್ಯಂತರ ಪರಿಹಾರವನ್ನು ಹಂತಹಂತವಾಗಿ ಬಿಡುಗಡೆ ಮಾಡಲಾಗುವುದು. ಈ ಮಧ್ಯಂತರ ಪರಿಹಾರವನ್ನು ಅಂತಿಮ ಪರಿಹಾರಕ್ಕೆ ಅನುಗುಣವಾಗಿ ಸರಿಹೊಂದಿಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಕಾರ್ಗಿಲ್ ವಿಜಯೋತ್ಸವ ಆಚರಣೆ

ಮಡಿಕೇರಿಯಲ್ಲಿ ಕಾರ್ಗಿಲ್‌ಹುತಾತ್ಮ ಯೋಧರಿಗೆ ಗೌರವ ಅರ್ಪಣೆ



ಹಿಂದು ಜಾಗರಣ ವೇದಿಕೆ, ಮಾಜಿ ಸೈನಿಕರ ಸಂಘದ ಸದಸ್ಯರು ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಯೋಧರಿಗೆ ನಮನ ಸಲ್ಲಿಸಿದರು

ಮಡಿಕೇರಿ, ಜು.26–ಕಾರ್ಗಿಲ್ ವಿಜಯೋತ್ಸವವನ್ನು ನಗರದ ವಿವಿಧ ಸಂಘಟನೆಗಳ ವತಿಯಿಂದ ಇಂದು ಆಚರಿಸಲಾಯಿತು. ಕೊಡಗು ಹಿಂದು ಜಾಗರಣ ವೇದಿಕೆ, ಮಾಜಿ ಸೈನಿಕರ ಸಂಘ ಮತ್ತಿತರೆ ಸಂಘಟನೆಗಳು ನಗರದ ಯುದ್ಧ ಸ್ಮಾರಕದಲ್ಲಿ ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಯೋಧರಿಗೆ ಪುಷ್ಪ ನಮನ ಸಲ್ಲಿಸಿದವು.

ಜಿಲ್ಲಾ ಮಾಜಿ ಸೈನಿಕರ ಸಂಘದ ಜಿಲ್ಲಾ ಕಾರ್ಯದರ್ಶಿ ಹಾಗೂ ವಕೀಲ ಮೇ. ಓ.ಎಸ್. ಚಿಂಗಪ್ಪ ಕಾರ್ಗಿಲ್ ಯುದ್ಧದಲ್ಲಿ ದಿಗ್ವಿಜಯ ಸಾಧಿಸಿದ ಭಾರತೀಯ ಯೋಧರ ತ್ಯಾಗ ಬಲಿದಾನಗಳನ್ನು ಸ್ಮರಿಸಿದರು. ಮಾಜಿ ಸೇನಾಧಿಕಾರಿಗಳು, ಹಿಂದು ಜಾಗರಣ ವೇದಿಕೆಯ ಪ್ರಮುಖರು ಹಾಗೂ ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಮಾಜಿ ಸೇನಾಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಪ್ರಮುಖರು, ದೇಶಾಭಿಮಾನಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ನಗರದ ಜಿಲ್ಲಾಸ್ಪತ್ರೆಯ ರಕ್ತ ನಿಧಿ ಕೇಂದ್ರದಲ್ಲಿ ರಕ್ತದಾನ ಶಿಬಿರ ನಡೆಯಿತು.

ಮುಳ್ಳುಸೋಗೆಯಲ್ಲಿ ಕಾರ್ಗಿಲ್ ವಿಜಯೋತ್ಸವ ಆಚರಣೆ

ಕುಶಾಲನಗರ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆ ಹಾಗೂ ಮುಳ್ಳುಸೋಗೆ ಮಾಜಿ ಸೈನಿಕರ ಸಂಘದ ಸಂಯುಕ್ತಾಶ್ರಯದಲ್ಲಿ ಕೆದಂಬಾಡಿ ಶ್ರೀ ಸಣ್ಣಪ್ಪ ಸಭಾಂಗಣದಲ್ಲಿ ಶನಿವಾರ ಕಾರ್ಗಿಲ್ ವಿಜಯೋತ್ಸವ ಆಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಗಿಲ್ ವಿಜಯೋತ್ಸವದಲ್ಲಿ ವೀರ ಮರಣ ಹೊಂದಿದ ಸೈನಿಕರ ಸೇವೆಯನ್ನು ಸ್ಮರಿಸಿ ಗೌರವ ನಮನ ಸಲ್ಲಿಸಲಾಯಿತು. ಯೋಧರ ತ್ಯಾಗ, ಬಲಿ ದಾನ ಸ್ಮರಿಸಿ ನಿವೃತ್ತ ಯೋಧರನ್ನು ಸನ್ಮಾನಿಸಿ ಗೌರವಿಸಲಾಯಿತು. ಭಾರತೀಯ ಸೇನೆಯ ಮಹತ್ವ ಹಾಗೂ ಕಾರ್ಗಿಲ್ ವಿಜಯೋತ್ಸವದ ಕುರಿತು ಪ್ರಧಾನ ಭಾಷಣ ಮಾಡಿದ ಕೊಡಗು ವಿವಿ ಕನ್ನಡ ಉಪನ್ಯಾಸಕ ಡಾ.ಜಮೀರ್ ಅಹ್ಮದ್, ದೇಶದ ರಕ್ಷಣೆಗಾಗಿ ತಮ್ಮ ಜೀವವನ್ನು ಒತ್ತೆ ಇಟ್ಟು, ಮಳೆ–ಚಳಿ ಎನ್ನದೆ ಹವಾಮಾನ ವೈಪರೀತ್ಯದ ನಡುವೆಯೂ ರಾಷ್ಟ್ರ ರಕ್ಷಣೆಗಾಗಿ ಸದಾ ದುಡಿಯುತ್ತಿರುವ ಹಾಗೂ ದುಡಿದು ವಿಶ್ರಾಂತ ಜೀವನ ನಡೆಸುತ್ತಿರುವ ಯೋಧರ ತ್ಯಾಗ ಮತ್ತು ಸೇವೆಯನ್ನು ಸಮಾಜ ಗೌರವಿಸಬೇಕು. ಅವರ ಸೇವಾ ಕಾರ್ಯಗಳಿಗೆ ಸರ್ಕಾರ ಮತ್ತು ಆಡಳಿತ ವ್ಯವಸ್ಥೆ ಸಕಾರಾತ್ಮಕವಾಗಿ ಸ್ಪಂದಿಸಬೇಕು ಎಂದರು.

ಕಾರ್ಗಿಲ್ ವಿಜಯೋತ್ಸವದ ಕುರಿತು ಜಿಲ್ಲಾ ಸ್ಕೌಟ್ಸ್ ಆಯುಕ್ತ ಜಿಮ್ಮಿ ಸಿಕ್ವೇರಾ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ಕಾರ್ಯದರ್ಶಿ ಸುಬೇದಾರ್ ಮೇಜರ್ ಎಸ್.ಆರ್.ಮಾದಪ್ಪ, ನಾವು ದೇಶದ ರಕ್ಷಣೆಗಾಗಿ ದುಡಿಯಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕ್ಯಾ. ಡಿ.ಕೆ.ಚಿಣ್ಣಪ್ಪ ಮಾತನಾಡಿ, ಪ್ರತಿಯೊಬ್ಬರೂ ದೇಶದ ಅಭಿಮಾನ ಬೆಳೆಸಿಕೊಂಡು ರಾಷ್ಟ್ರದ ರಕ್ಷಣೆಗೆ ಪಣ ತೊಡಬೇಕು ಎಂದರು.

ಜಿಲ್ಲಾ ಸಾರ್ವಜನಿಕ ಸಂಪರ್ಕಾಧಿಕಾರಿ ಟಿ.ಜಿ.ಪ್ರೇಮಕುಮಾರ್ ಯೋಧರ ಕುರಿತ ಘೋಷಣೆಗಳನ್ನು ಹೇಳಿದರು. ಜಿಲ್ಲಾ ಗೈಡ್ಸ್ ಸಂಸ್ಥೆ ಆಯುಕ್ತೆ ರಾಣಿ ಮಾಚಯ್ಯ, ಸಹಾಯಕ ಆಯುಕ್ತೆ ಸಿ.ಎಂ.ಸುಲೋಚನ, ಜಿಲ್ಲಾ ಸಂಸ್ಥೆ ಕಾರ್ಯದರ್ಶಿ, ಎಂ.ಎಂ.ವಸಂತಿ, ಕೋಶಾಧಿಕಾರಿ ಟಿ.ಎಸ್.ಮುದ್ದಯ್ಯ, ಕುಶಾಲನಗರ ಸ್ಥಳೀಯ ಸಂಸ್ಥೆ ಅಧ್ಯಕ್ಷ ಡಾ ಪ್ರವೀಣ್ ದೇವರಗುಂಡ ಸೋಮಪ್ಪ, ಕಾರ್ಯಾಧ್ಯಕ್ಷ ಎ.ಎಸ್.ತಮ್ಮಯ್ಯ, ಕಾರ್ಯದರ್ಶಿ ಎಂ.ಎಸ್. ಗಣೇಶ್, ಸಂಸ್ಥೆ ವಿವಿಧ ಹಂತದ ಪದಾಧಿಕಾರಿಗಳಾದ ಎಚ್.ಆರ್.ಮುತ್ತಪ್ಪ, ಕೆ.ಯು. ರಂಜಿತ್, ಚಂದ್ರಶೇಖರ್, ಕೆ.ಬಿ. ಗಣೇಶ್, ಎಸ್.ಆರ್.ಶಿವಲಿಂಗ, ಮಾಜಿ ಸೈನಿಕರ ಸಂಘದ ಕೋಶಾಧಿಕಾರಿ ಎನ್.ಎಸ್. ನರೇಶ್ ಇತರರು ಇದ್ದರು.



ಭಾರತ್ ಸ್ಕೌಟ್ಸ್–ಗೈಡ್ಸ್‌ನ ಜಿಲ್ಲಾ ಸ್ಥಳೀಯ ಸಂಸ್ಥೆ ಕಾರ್ಗಿಲ್ ವಿಜಯೋತ್ಸವ ಆಚರಿಸಿತು.



ಕಾರ್ಗಿಲ್ ವಿಜಯ ದಿವಸದ ಅಂಗವಾಗಿ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಅನೂಪ್ ಮಾದಪ್ಪ ಹುತಾತ್ಮರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿದರು.

ಯೋಧರ ಧೈರ್ಯ ತ್ಯಾಗ ಪ್ರತಿಯೊಬ್ಬ ನಾಗರಿಕರಿಗೆ ಆದರ್ಶವಾಗಲಿ

ವಿರಾಜಪೇಟೆ: ಯೋಧರ ಧೈರ್ಯ ಹಾಗೂ ತ್ಯಾಗವು ದೇಶದ ಪ್ರತಿಯೊಬ್ಬ ನಾಗರಿಕರಿಗೆ ಆದರ್ಶವಾಗಲಿ ಎಂದು ಕೊಡಗು ಮಾಜಿ ಸೈನಿಕರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಹೇಳಿದ್ದಾರೆ.

ಮಾಜಿ ಸೈನಿಕರ ಸಂಘದಿಂದ ಪಟ್ಟಣದಲ್ಲಿನ ಹುತಾತ್ಮರ ಸ್ಮಾರ ಕದ ಬಳಿ ಕಾರ್ಗಿಲ್ ವಿಜಯ ದಿವಸದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಹುತಾತ್ಮರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿ ಸೈನಿಕರ ತ್ಯಾಗ ಬಲಿದಾನದ ಕುರಿತು ಮಾತನಾಡಿದರು. ತಾಲೂಕು ಆಡಳಿತದಿಂದ ತಹಸೀಲ್ದಾರ್ ಅನಂತ ಶಂಕರ ಸ್ಮಾರಕಕ್ಕೆ ಪುಷ್ಪಗುಚ್ಚ ಅರ್ಪಿಸಿ ಗೌರವ ನಮನ ಸಲ್ಲಿಸಿದರು. ಪೋಲಿಸ್ ಇಲಾಖೆಯಿಂದ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ನೇತೃತ್ವದಲ್ಲಿ, ಪುರಸಭೆಯಿಂದ, ಮಾಜಿ ಸೈನಿಕರ ಸಂಘದ ಅಧ್ಯಕ್ಷರ ನೇತೃತ್ವದಲ್ಲಿ ರೋಟರಿ ಶಾಲೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸೇರಿದಂತೆ ಸಂಘ ಸಂಸ್ಥೆಗಳ ಸದಸ್ಯರು ಹುತಾತ್ಮರ ಸ್ಮಾರಕಕ್ಕೆ ಪುಷ್ಪಗುಚ್ಚವನ್ನಿಟ್ಟು ನಮನ ಸಲ್ಲಿಸಿದರು

ತಹಶೀಲ್ದಾರ್ ಪ್ರದೀಪ್ ಕುಮಾರ್, ಪುರಸಭೆಯ ಮುಖ್ಯಾಧಿಕಾರಿ ನಾಚಪ್ಪ ಪಟ್ಟಿಚೆರವಂಡ, ಇಸಿಎಚ್ ಕ್ಲಿನಿಕ್‌ನ ಲೆ.ಕರ್ನಲ್ ಲಕ್ಷ್ಮಿನಾರಾಯಣ, ಎಸ್‌ಬಿಐ ಶಾಖಾ ವ್ಯವಸ್ಥಾಪಕರು, ಮಾಜಿ ಸೈನಿಕರ ಸಂಘದ ಉಪಾಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ಅಪ್ಪಯ್ಯ, ಪುಗ್ಗೇರ ನಂದ, ಸಿ.ಎಸ್.ಡಿ ಕ್ಯಾಂಟೀನ್‌ನ ವ್ಯವಸ್ಥಾಪಕ ಡಾಲಿ, ಸಂಘದ ಮಾಜಿ ಅಧ್ಯಕ್ಷ ಚೇಂದ್ರಿಮಾಡ ಕೆ.ನಂಜಪ್ಪ, ನಿರ್ದೇಶಕರಾದ ತೋರೇರ ಪೂವಯ್ಯ, ಪಟ್ರಪಂಡ ಎಂ. ಕರುಂಬಯ್ಯ, ಪಟ್ರಪಂಡ ಚಂಗಪ್ಪ, ಎಂ.ಕೆ. ಸಲಾಂ, ಕಬ್ಬಚ್ಚೀರ ಬೋಪಣ್ಣ, ಅಣ್ಣಳಮಾಡ ಸುಬ್ಬಯ್ಯ, ರೋಟರಿ ವಿದ್ಯಾಸಂಸ್ಥೆಯ ಮುಖ್ಯೋಪಾಧ್ಯಾಯಿನಿ ವಿಶಾಲಾಕ್ಷಿ ಹಾಗೂ ಶಿಕ್ಷಕ ವೃಂದ, ಪುರಸಭೆ ಸದಸ್ಯೆ ಜೂನಾ, ಸುಭಾಶ್, ಸೇರಿದಂತೆ ಸಿಬ್ಬಂದಿ, ಎಸ್‌ಬಿಐ ಸಿಬ್ಬಂದಿಗಳು, ನಗರ ಠಾಣಾಧಿಕಾರಿ ಪ್ರಮೋದ್, ಗ್ರಾಮಾಂತರ ಠಾಣಾಧಿಕಾರಿ ಲತಾ, ಹೆಗ್ಗಡೆ ಸಮಾಜದ ಮಾಜಿ ಅಧ್ಯಕ್ಷ ಅಯ್ಯಪ್ಪ ಪಿ. ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಇದ್ದರು.

ಎನ್‌ಸಿಸಿ ಘಟಕದಿಂದ ಕಾರ್ಗಿಲ್ ವಿಜಯ ದಿವಸ್ ಆಚರಣೆ

ಮಡಿಕೇರಿ,ಜು.26–ಕೊಡಗು ವಿದ್ಯಾಲಯದ ಎನ್‌ಸಿಸಿ ಘಟಕ ನಗರದಲ್ಲಿನ ಫೀಲ್ಡ್ ಮಾರ್ಷಲ್ .ಕೆ.ಎಂ ಕಾರ್ಯಪ್ಪ ಅವರ ಪ್ರತಿಮೆಯನ್ನು ಶುಚಿಗೊಳಿಸುವುದರ ಮೂಲಕ ಕಾರ್ಗಿಲ್ ವಿಜಯ ದಿವಸ್ ಅನ್ನು ಆಚರಿಸಿತು.

ಕೊಡಗು ವಿದ್ಯಾಲಯದ ಎನ್‌ಸಿಸಿ ಕೆಡೆಟ್‌ಗಳು ಪ್ರತಿಮೆಯನ್ನು ಶುಚಿಗೊಳಿಸಿ ಆವರಣದ ಸುತ್ತ ಬೆಳೆದಿದ್ದ ಗಿಡಗಂಟಿಗಳನ್ನು ಕಿತ್ತು ಗುಡಿಸಿ ಶುಚಿಗೊಳಿಸಿದರು. ಶಾಲಾ ಪ್ರಾಂಶುಪಾಲೆ ಸುಮಿತ್ರಾ ಕೆ.ಎಸ್, ಆಡಳಿತ ಅಧಿಕಾರಿ ರವಿ.ಪಿ ಉದ್ಘಾಟನೆ ನೆರವೇರಿಸಿದರು. ಶಾಲೆಯ ಎನ್‌ಸಿಸಿ ಅಧಿಕಾರಿ ಮೇಜರ್ ದಾಮೋದರ ಗೌಡ ಹಾಗೂ ಎನ್‌ಸಿಸಿ ಸಿಬ್ಬಂದಿಗಳು ಹಾಜರಿದ್ದರು



ಎನ್‌ಸಿಸಿ ಕೆಡೆಟ್‌ಗಳು ಫೀ. ಮಾ. ಕೆ.ಎಂ ಕಾರ್ಯಪ್ಪ ಪ್ರತಿಮೆ ಸುತ್ತ ಬೆಳೆದಿದ್ದ ಕಾಡು ಸಸಿಗಳನ್ನು ಕಿತ್ತು ಶುಚಿಗೊಳಿಸಿದರು.

ಇಂದು ಕ್ರೀಡಾಕೂಟ

ಮಡಿಕೇರಿ: ಕೊಡಗು ಜಿಲ್ಲಾ ಪೊಲೀಸ್ ವಿರಾಜಪೇಟೆ ಉಪ ವಿಭಾಗ ಮಟ್ಟದ ಪೊನ್ನಂಪೇಟೆ ಹಾಗೂ ವೀರಾಜಪೇಟೆ ತಾಲೂಕು ಪೊಲೀಸರ ನಡುವೆ ಜು.27 ರಂದು ಗೋಣಿಕೊಪ್ಪಲಿನಲ್ಲಿ ಕೆಸರು ಗದ್ದೆ ಕ್ರೀಡಾಕೂಟ ನಡೆಯಲಿದೆ.

ಸಮಾಜದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಶ್ರಮಿಸುತ್ತಿರುವ ಪೊಲೀಸರಿಗಾಗಿ ಮನರಂಜನೆ ಮತ್ತು ಆತ್ಮ ವಿಶ್ವಾಸ ಬೆಳವಣಿಗೆಗೆ ಕ್ರೀಡಾ ಮನೋಭಾವ ಅಗತ್ಯ. ಈ ನಿಟ್ಟಿನಲ್ಲಿ ಪೊಲೀಸ್ ಕುಟುಂಬಗಳಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಕೆಸರು ಗದ್ದೆ ಓಟ, ಹಗ್ಗ ಜಗ್ಗಾಟ, ಲೆಮೆನ್ ಅಂಡ್‌ಸ್ಪೂನ್, ಹಿಮ್ಮುಖ ಚಲನೆ, ಥ್ರೋ ಬಾಲ್ ಎಸೆತ ಮುಂತಾದ ಪಂದ್ಯಗಳು ಪೊಲೀಸ್ ವೃತ್ತಿಯಲ್ಲಿರುವ ದಂಪತಿಗಳಿಗೂ ವಿಶೇಷ ಕ್ರೀಡೆಯನ್ನು ಆಯೋಜಿಸಲಿರುವುದಾಗಿ ಹೇಳಿದರು.

ಆರೋಪಿ ಬಂಧನ: 15 ಕೆಜಿ ಗೋಮಾಂಸ ವಶ

ಮಡಿಕೇರಿ,ಜು.26– ಗೋಮಾಂಸ ಮಾರಾಟ ಮಾಡಲು ಯತ್ನಿಸುತ್ತಿದ್ದ ಅಸ್ಸಾಂ ಮೂಲದ ಆರೋಪಿಯನ್ನು ಸೋಮವಾರಪೇಟೆ ಪೊಲೀಸರು ಬಂಧಿಸಿದ್ದಾರೆ.

ಮೂಲತಃ ಅಸ್ಸಾಂನವನಾಗಿದ್ದು, ಇಲ್ಲಿನ ಕುಂಬೂರು ಎಸ್ಟೇಟ್‌ನಲ್ಲಿ ಕಾರ್ಮಿಕನಾಗಿರುವ ಉಲಾಲ್ ಬಿಲ್(28) ಎಂಬಾತನೇ ಬಂಧಿತ ಆರೋಪಿ. ಗೋಮಾಂಸ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ಪೊಲೀಸರು ಒಟ್ಟು 15 ಕೆ.ಜಿ ಗೋಮಾಂಸವನ್ನು ವಶಕ್ಕೆ ಪಡೆದಿದ್ದು, ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ



ಗೋಮಾಂಸ ಮಾರಾಟಕ್ಕೆ ಯತ್ನಿಸಿದ ಆರೋಪಿಯನ್ನು ಪೊಲೀಸರು ಬಂಧಿಸಿದರು

ಅರಣ್ಯ ಪ್ರದೇಶದಲ್ಲಿ ಜಾನುವಾರುಗಳಿಗೆ ನಿರ್ಬಂಧ ವಿರೋಧಿಸಿ ಪ್ರತಿಭಟನೆ



ಅರಣ್ಯ ಪ್ರದೇಶದಲ್ಲಿ ಜಾನುವಾರುಗಳು ಮೇಯಲು ನಿರ್ಬಂಧ ವಿಧಿಸಿರುವುದನ್ನು ವಿರೋಧಿಸಿ ರೈತ ಸಂಘ ಪ್ರತಿಭಟನೆ ನಡೆಸಿತು.

ಕೊಳ್ಳೇಗಾಲ, ಜು.26–ಅರಣ್ಯ ಪ್ರದೇಶದಲ್ಲಿ ಜಾನುವಾರುಗಳು ಮೇಯಲು ನಿರ್ಬಂಧ ವಿಧಿಸಿರುವುದನ್ನು ವಿರೋಧಿಸಿ ಹಾಗೂ ವಿವಿಧ ಬೇಡಿಕೆಗಳನ್ನು ಒತ್ತಾಯಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪ್ರತಿಭಟನೆ ನಡೆಸಿದವು.

ಪಟ್ಟಣದ ಬಸ್ ನಿಲ್ದಾಣದಿಂದ ಹೊರಟ ಪ್ರತಿಭಟನಾಕಾರರು ಪ್ರಮುಖ ರಸ್ತೆಗಳ ಮೂಲಕ ಸಾಗಿ ಎಡಿಬಿ ವೃತ್ತದಲ್ಲಿ ಮಾನವ ಸರಪಳಿ ರಚಿಸುವ ಮೂಲಕ ಕೆಲಕಾಲ ರಸ್ತೆತಡೆ ನಡೆಸಿದರು. ನಂತರ ಅರಣ್ಯ ಕಚೇರಿಗೆ ತೆರಳಿ ಮನವಿಯನ್ನು ಸಲ್ಲಿಸಿದರು. ಕಾಡಂಚಿನ ರೈತರು ಅರಣ್ಯದೊಳಗೆ ಜಾನುವಾರುಗಳನ್ನು ಮೇಯಿಸಲು ಅರಣ್ಯ ಇಲಾಖೆಯಿಂದ ಅಡ್ಡಿಪಡಿಸುವುದಿಲ್ಲ ಎಂದು ಸರಕಾರ ಅಧಿಕೃತವಾಗಿ ಘೋಷಣೆ ಮಾಡಬೇಕು. ಈಗಾಗಲೇ ಇರುವ ಗೋಮಾಳದ ಜಾಗವನ್ನು ತೆರವುಗೊಳಿಸಿ ಜಾಗವನ್ನು ಗುರುತು ಮಾಡಿ, ಒತ್ತುವರಿ ಮತ್ತು ಹಸ್ತಾಂತರವಾಗಿರುವ ಗೋಮಾಳದ ಜಾಗವನ್ನು ತೆರವುಗೊಳಿಸಿ ಕಂದಾಯ ಇಲಾಖೆಯ ಮೂಲಕ ಅಭಿವೃದ್ಧಿಪಡಿಸಿ. ಅರಣ್ಯ ಅಭಿವೃದ್ಧಿ ಸಮಿತಿಯನ್ನು ರೈತರು ಮತ್ತು ರೈತ ಪ್ರತಿನಿಧಿಗಳನ್ನು ಒಳಗೊಂಡಂತೆ ರಚಿಸಬೇಕು. ಕಾಡು ಪ್ರಾಣಿಗಳ ದಾಳಿಯಿಂದ ರೈತ ಮೃತಪಟ್ಟರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಕಾನೂನುಗಳ ಹೆಸರಿನಲ್ಲಿ ಕಾಡಂಚಿನ ರೈತರಿಗೆ ಕಿರುಕುಳ ನೀಡಬಾರದು. ಕಾಡು ಪ್ರಾಣಿಗಳು ರೈತರ ಬೆಳೆಗಳನ್ನು ಹಾಳು ಮಾಡಿದರೆ ಅದರ ಸಂಪೂರ್ಣ ವೆಚ್ಚವನ್ನು ಅರಣ್ಯ ಇಲಾಖೆ ಅಧಿಕಾರಿಗಳಿಂದ ವಸೂಲಿ ಮಾಡಿ ರೈತರಿಗೆ ನೀಡಬೇಕೆಂದು ಆಗ್ರಹಿಸಿದರು.

ಮನವಿ ಸ್ವೀಕರಿಸಿದ ಡಿಸಿಎಫ್ ಭಾಸ್ಕರ್ ಮಾತನಾಡಿ, ತಮಿಳುನಾಡಿನಿಂದ ಬರುವ ಜಾನುವಾರುಗಳನ್ನು ಕಾಡಿನಲ್ಲಿ ಮೇಯಿಸಲು ನಿರ್ಬಂಧ ಹೇರಲಾಗಿದೆ. ಸ್ಥಳೀಯ ಜಾನುವಾರುಗಳಿಗೆ ಯಾವುದೇ ನಿಷೇಧವಿಲ್ಲ ಎಂದು ಪ್ರಕಟಣೆಯನ್ನು ಸಚಿವರು ನೀಡಿದ್ದಾರೆ. ಆ.2ರಂದು ಸರ್ಕಾರ ಆದೇಶದ ಬಗ್ಗೆ ಜಿಲ್ಲಾಡಳಿತ ಸೂಕ್ತ ತೀರ್ಮಾನ ತೆಗೆದು ಕೊಳ್ಳುವುದೆಂದು ಭರವಸೆ ನೀಡಿದ ಮೇರೆಗೆ ಪ್ರತಿಭಟನೆಯನ್ನು ಕೈಬಿಟ್ಟರು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್, ಬೇಗೂರು ಲೋಕೇಶ್, ಗುಂಡ್ಲುಪೇಟೆ ಅಧ್ಯಕ್ಷ ಪಾಪಣ್ಣ, ಸಿದ್ದರಾಜು ನಾಯಕ, ಕೆಂಚನಾಯಕ, ಮಲ್ಲಣ್ಣ ನಾಯಕ, ರಘು, ಚೆನ್ನೂರು ಶಾಂತಕುಮಾರ್, ರಾಮಪುರ ವಿಜಿ, ಹನೂರು ಮಾದಪ್, ರಾಯರದೊಡ್ಡಿ ಅಮೋಘ್, ವಿನೇಶ್, ಮ.ಬೆಟ್ಟ ಪ್ರಸಾದ್, ಮ.ಬೆಟ್ಟ ತೊಳಸಿಕೆರೆ ಕೆಂಪಣ್ಣ, ಕೊಳ್ಳೇಗಾಲ ಸಿದ್ದಲಿಂಗಸ್ವಾಮಿ ಹಾಗೂ ನೂರಾರು ಮಂದಿ ರೈತರು ಇದ್ದರು.

ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಸಭೆ: 15 ಅರ್ಜಿ ಮಂಜೂರಾತಿ



ತಹಸೀಲ್ದಾರ್ ಕಚೇರಿಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆಯಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಸಭೆ ನಡೆಯಿತು.

ಚಾಮರಾಜನಗರ, ಜು.26–ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಅರ್ಹ ಅರ್ಜಿದಾರರಿಗೆ ಹಕ್ಕು ಪತ್ರಗಳನ್ನು ಒದಗಿಸುವ ಮೂಲಕ ನ್ಯಾಯ ಒದಗಿಸಲು ಪ್ರಯತ್ನ ಮಾಡುವುದಾಗಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ತಹಸೀಲ್ದಾರ್ ಕಚೇರಿಯಲ್ಲಿ ನಡೆದ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೊದಲನೆಯ ಹಂತದಲ್ಲಿ 15 ಅರ್ಜಿಗಳಿಗೆ ಮಂಜೂರಾತಿ ನೀಡಲಾಗಿದೆ ಎಂದರು.

ಸುಮಾರು ವರ್ಷಗಳಿಂದ ಮಂಜೂರಾತಿಗೆ ಬಾಕಿ ಇರುವ ಅರ್ಹ ಅರ್ಜಿಗಳನ್ನು ಆದಷ್ಟು ಬೇಗ ತನಿಖೆ ನಡೆಸಿ ಮಂಜೂರಾತಿಗೆ ಕ್ರಮವಹಿಸಬೇಕು ಎಂದು ಶಾಸಕರು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ತಹಸೀಲ್ದಾರ್ ಗಿರಿಜ, ಸಮಿತಿ ಸದಸ್ಯರಾದ ಮಹಾಲಿಂಗು, ರವಿಕುಮಾರ್ ಬಿಸಲ್ವಾಡಿ, ಮಲ್ಲಿಕ ಚೆನ್ನೇಗೌಡ, ತಾಲೂಕಿನ ರಾಜಸ್ವ ನಿರೀಕ್ಷಕರು, ಗ್ರಾಮಾಡಳಿತ ಅಧಿಕಾರಿಗಳು, ಶಾಸಕರ ಆಪ್ತ ಸಹಾಯಕರಾದ ಎಸ್.ಎಂ. ರವೀಂದ್ರ, ವಿನೋದ್ ಕುಮಾರ್ ಭಾಗವಹಿಸಿದ್ದರು.



ದುಶ್ಚಟಕ್ಕೆ ಬಲಿಯಾಗುತ್ತಿರುವ ಯುವತಿಯರು

ಸುತ್ತೂರು ಮಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಿಷಾದ

ಗುಂಡ್ಲುಪೇಟೆ, ಜು.26 (ಸೋಮ್.ಜಿ)– ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಪಿಡುಗಾದ ಮದ್ಯಪಾನದಂತಹ ದುಶ್ಚಟಕ್ಕೆ ಯುವ ಜನತೆ ಅದರಲ್ಲಿಯೂ ಯುವತಿಯರು ಬಲಿಯಾಗುತ್ತಿರುವ ಬೆಳವಣಿಗೆಗಳು ಆಗುತ್ತಿವೆ ಎಂದು ಸುತ್ತೂರು ಮಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆತಂಕ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ಜೆಎಸ್‌ಎಸ್ ಅನುಭವ ಮಂಟಪದಲ್ಲಿ ಜುಲೈ 14 ರಿಂದ23ರವರೆಗೆ ನಡೆದ 21ನೇ ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಕೊರೋನ ಸಂದರ್ಭದಲ್ಲಿ ಗಂಡುಮಕ್ಕಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣುಮಕ್ಕಳು ಮದ್ಯದಂಗಡಿ ಮುಂದೆ ಸರದಿಯಲ್ಲಿ ನಿಂತಿದ್ದು ಮಾಧ್ಯಮಗಳಲ್ಲಿ ವರದಿಯಾಗಿತ್ತು. ದುಶ್ಚಟಕ್ಕೆ ಒಳಗಾದವರು ಸಮಾಜದಲ್ಲಿ ತಮ್ಮ ಗೌರವ ಕಳೆದುಕೊಳ್ಳುವ ಜತೆಗೆ ಕುಟುಂಬದವರ ಮರ್ಯಾದೆಯೂ ಹಾಳುಮಾಡುತ್ತಾರೆ ಎಂದು ವಿಷಾದಿಸಿದರು.

ಸದೃಢ ಸಮಾಜಕ್ಕೆ ಆರೋಗ್ಯವಂತ ವ್ಯಕ್ತಿಗಳ ಅಗತ್ಯವಿದ್ದು ದುಶ್ಚಟಗಳಿಂದ ದೂರವಿರಬೇಕು. ದುಶ್ಚಟಕ್ಕೆ ಒಳಗಾದವರಲ್ಲದೆ ಅವರ ಜೊತೆಗಾರರೂ ಸಹ ಮದ್ಯಪಾನದಿಂದ ದೂರವಿರಬೇಕು. ಸುತ್ತೂರು ಸಂಸ್ಥೆಯಿಂದ ಇಂಥ ಶಿಬಿರಗಳನ್ನು ನಡೆಸುತ್ತಿರುವುದರಿಂದ ಶೇ.30ರಿಂದ 40ರಷ್ಟು ಸುಧಾರಣೆ ಸಾಧ್ಯವಾಗಿದೆ. ಪಟ್ಟಣದಲ್ಲಿ ಇದು ಮೂರನೇ ಶಿಬಿರವಾಗಿದ್ದು, 1136 ವ್ಯಸನಿಗಳು ಮದ್ಯಪಾನದ ದುಶ್ಚಟಗಳಿಂದ ಹೊರಬಂದು ಕುಟುಂಬ ದವರೊಂದಿಗೆ ಉತ್ತಮ ಜೀವನ ನಡೆಸುತ್ತಿದ್ದಾರೆ. ಆದ್ದರಿಂದ ನಮ್ಮ ಸಂಸ್ಕೃತಿ ಕಾಪಾಡಲು ಎಲ್ಲರೂ ದುಶ್ಚಟಗಳಿಂದ ದೂರವಿರಬೇಕು ಎಂದು ಸ್ವಾಮೀಜಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಮಾತನಾಡಿ, ಹಾಲಹಳ್ಳಿಯ ಸಂಗಮ ಪ್ರತಿಷ್ಠಾನವು ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದು ಜೆಎಸ್‌ಎಸ್ ಸಂಸ್ಥೆ ಆಯೋಜಿಸುವ ಮದ್ಯವರ್ಜನ ಶಿಬಿರಕ್ಕೆ ನೆರವಾಗುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕಾರ ನೀಡಿದೆ. ಈ ಬಗ್ಗೆ ಸಮಾಜ ಸಹ ಕಾಳಜಿ ತೋರಿಸಬೇಕು ಎಂದು ಹೇಳಿದರು.

ಮಾಜಿ ಶಾಸಕ ಸಿ.ಎಸ್.ನಿರಂಜನ ಕುಮಾರ್ ಮಾತನಾಡಿ, ಮದ್ಯವ್ಯಸನಿಗಳು ಚಟ ಮತ್ತು ವ್ಯಸನಗಳಿಂದ ಹೊರಬರಲು ಗಟ್ಟಿಮನಸ್ಸು ಮಾಡಬೇಕು. ಶಿಬಿರಾರ್ಥಿಗಳು ಇಲ್ಲಿನ ನಿಯಮಗಳನ್ನು ಅಚ್ಚುಕಟ್ಟಾಗಿ ಪಾಲಿಸುವ ಮೂಲಕ ವ್ಯಸನಮುಕ್ತರಾಗಿರುವುದು ಕಂಡುಬರುತ್ತಿದೆ, ಹೊಸ ಜೀವನ ನಡೆಸಲು ನೆರವಾಗುತ್ತದೆ. ಇದು ಸಮಾಜದ ಬಗ್ಗೆ ಹೊಂದಿರುವ ಕಾಳಜಿಯನ್ನು ತೋರಿಸುತ್ತದೆ ಎಂದು ಹೇಳಿದರು.

ಮೈಸೂರಿನ ಪರಂಪರೆ ಸಂಸ್ಥೆ ಮುಖ್ಯಸ್ಥ ಪಿ.ಕೃಷ್ಣಕುಮಾರ್ ಮಾತನಾಡಿ, ಕುಡಿತಕ್ಕೆ ನಾನಾ ನೆಪಗಳು ಸಿಕ್ಕುತ್ತವೆ. ತಾನು 41 ವರ್ಷದ ಹಿಂದೆಯೇ ವ್ಯಸನಮುಕ್ತನಾಗಿದ್ದು, ಪ್ರತಿ ವ್ಯಸನಿಯೂ ಆತ್ಮಾವಲೋಕನ ಮಾಡಿಕೊಳ್ಳುವ ಮೂಲಕ ವ್ಯಸನಗಳಿಂದ ದೂರವಿರಬೇಕು. ಕುಡಿತದಿಂದ ದೂರವಿದ್ದ ಪ್ರತಿ ವರ್ಷವೂ ಅವರ ಹುಟ್ಟುಹಬ್ಬವಿದ್ದಂತೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಶಿಬಿರದಲ್ಲಿ ಪಾಲ್ಗೊಂಡಿದ್ದ 28 ಜನರಿಗೆ ನೆಮ್ಮದಿಯಾಗಿರುವ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷ ಜಿ.ಎಸ್.ಮಧುಸೂಧನ್, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ವೀರಶೈವ ಲಿಂಗಾಯಿತ ಮಹಾಸಭಾ ತಾಲೂಕು ಅಧ್ಯಕ್ಷ ಕಮರಹಳ್ಳಿ ರವಿ, ಮಾಜಿ ಜಿಲ್ಲಾಧ್ಯಕ್ಷ ಕೊಡಸೋಗೆ ಶಿವಬಸಪ್ಪ, ಶರಣಸಾಹಿತ್ಯ ಪರಿಷತ್ ಅಧ್ಯಕ್ಷ ಟಿ.ಸಿ.ಬಸಪ್ಪದೇವರು, ಟಿಎಪಿಸಿ ಎಂಎಸ್ ಅಧ್ಯಕ್ಷ ಆಲತ್ತೂರು ಜಯರಾಮು, ಶಿಬಿರದ ಸಂಚಾಲಕ ಡಾ.ಸೋಮಶೇಖರ್, ಮುಖಂಡರಾದ ಹೆಚ್.ಎಸ್. ಪ್ರಭುಸ್ವಾಮಿ, ಹೆಚ್.ಜಿ.ಮಲ್ಲಿಕಾರ್ಜುನ ಸ್ವಾಮಿ, ಪ್ರಾಂಶುಪಾಲೆ ಡಾ.ಮಹದೇವಮ್ಮ, ಚನ್ನಂಜಯ್ಯನಹುಂಡಿ ಮಲ್ಲು ಮಹದೇವಪ್ರಸಾದ್, ಪ್ರಣಯ್ ಸೇರಿದಂತೆ ಹಲವರು ಇದ್ದರು.



ಗುಂಡ್ಲುಪೇಟೆಯಲ್ಲಿ ನಡೆದ ಮದ್ಯವರ್ಜನ ಶಿಬಿರಾರ್ಥಿಗಳೊಂದಿಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಗಣೇಶ್‌ಪ್ರಸಾದ್, ಮಾಜಿ ಶಾಸಕ ನಿರಂಜನಕುಮಾರ್, ರವಿ, ಡಾ.ಸೋಮಶೇಖರ್ ಇದ್ದರು.



ಮದ್ಯ ವ್ಯಸನಿಯಾಗಿ ನನ್ನ ಬಾರ್‌ಗಳಲ್ಲಿ ಕಳಪೆ ಮದ್ಯ ಮಾರಾಟ ಮಾಡುತ್ತಿದ್ದಾಗ 2014ರಲ್ಲಿ ಸಿಕ್ಕಿಬಿದ್ದು 40 ಲಕ್ಷ ದಂಡ ಕಟ್ಟಿದ್ದರಿಂದ ಬೀದಿ ಪಾಲಾಗಿದ್ದೆ. ಕುಟುಂಬ ಸಮೇತ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿದ್ದೆ. ಈ ಸಂದರ್ಭದಲ್ಲಿ ನನ್ನ ಪತ್ನಿ ಇಂಥ ಶಿಬಿರಕ್ಕೆ ಕರೆದೊಯ್ದು ನಂತರ ವ್ಯಸನ ಮುಕ್ತನಾಗುವಂತಾಗಿದೆ, ಇದು ವ್ಯಸನ ಎಂಬುದಕ್ಕಿಂತ ಅಮಲು ರೋಗವಾಗಿದೆ. ಈ ದುಷ್ಪರಿಣಾಮದ ಪರಿಣಾಮ ಬಾರ್‌ಗಳನ್ನು ಗುತ್ತಿಗೆಗೆ ನೀಡಿ ವ್ಯವಹಾರದಿಂದ ದೂರವಿದ್ದೇನೆ

–ಸೋಮಶೇಖರ್, ಬಾರ್‌ಗಳ ಮಾಲೀಕ, ಹನೂರು ಪ.ಪಂ.ಸದಸ್ಯ



ಮದ್ಯ ವ್ಯಸನಿಯಾಗಿದ್ದ ನನ್ನ ಪತಿ ಸ್ವಾಮಿ ಮಾಡುತ್ತಿದ್ದ ರಂಪಾಟ ಭಯಹುಟ್ಟಿಸುತ್ತಿತ್ತು. ಈ ಶಿಬಿರದಿಂದ ಅವರು ಬದಲಾಗುವ ಬಗ್ಗೆ ಅನುಮಾನವಿತ್ತು. ಆದರೆ ಶಿಬಿರಕ್ಕೆ ಬಂದ ಮೇಲೆ ಇಲ್ಲಿ ಯೋಗ ಧ್ಯಾನ ಮಾಡುವ ಮೂಲಕ ಅವರು ಬದಲಾಗಿರುವುದು ಕಂಡುಬಂದಿದೆ.

– ಜ್ಯೋತಿ, ಬರಗಿ ಗ್ರಾಮ

ಹೆಚ್ಚುವರಿ ಜಿಲ್ಲಾಧಿಕಾರಿ, ತಹಶೀಲ್ದಾರರಿಗೆ ಜಿಲ್ಲಾಡಳಿತದಿಂದ ಆತ್ಮೀಯ ಬೀಳ್ಕೊಡುಗೆ

ಚಾಮರಾಜನಗರ: ವರ್ಗಾವಣೆಗೊಂಡಿರುವ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಗುಂಡ್ಲುಪೇಟೆ ತಹಶೀಲ್ದಾರ್ ರಮೇಶ್ ಬಾಬು ಹಾಗೂ ಹನೂರು ತಹಶೀಲ್ದಾರ್ ಗುರುಪ್ರಸಾದ್ ಅವರಿಗೆ ಜಿಲ್ಲಾಡಳಿತದಿಂದ ಆತ್ಮೀಯ ಬೀಳ್ಕೊಡುಗೆ ನೀಡಲಾಯಿತು.

ಜಿಲ್ಲಾ ಪಂಚಾಯತ್‌ನಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ನಿರ್ಗಮಿತರಿಗೆ ಸನ್ಮಾನಿಸಿ ಬೀಳ್ಕೊಡುಗೆ ನೀಡುವುದರ ಜೊತೆಗೆ ಜಿಲ್ಲೆಗೆ ಹೊಸದಾಗಿ ಆಗಮಿಸಿರುವ ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ, ಯಳಂದೂರು ತಹಶೀಲ್ದಾರ್ ನಯನ, ಗುಂಡ್ಲುಪೇಟೆ ತಹಶೀಲ್ದಾರ್ ತನ್ಮಯ್ ಹಾಗೂ ಹನೂರು ತಹಶೀಲ್ದಾರ್ ಚೈತ್ರಾರನ್ನು ಸ್ವಾಗತಿಸಲಾಯಿತು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ನಿರ್ಗಮಿತ ಎಡಿಸಿಗೀತಾ ಹುಡೇದ, ತಹಶೀಲ್ದಾರ್ ರಮೇಶ್ ಬಾಬು ಹಾಗೂ ತಹಶೀಲ್ದಾರ್ ಗುರು ಪ್ರಸಾದ್ ಜಿಲ್ಲೆಯಲ್ಲಿ ಉತ್ತಮವಾಗಿ ಕೆಲಸ ಮಾಡುವುದರ ಜೊತೆಗೆ ಜನರೊಂದಿಗೆ ಒಡನಾಟ ಹೊಂದಿದ್ದರು. ಅಧಿಕಾರಿಗಳು ಕಚೇರಿ ಕೆಲಸಗಳಲ್ಲಿ ಇತರರಿಗೆ ಮಾದರಿ ಯಾಗಬೇಕು. ಅಧಿಕಾರದಲ್ಲಿ ಉದ್ವೇಗಕ್ಕೆ ಒಳಗಾಗಬಾರದು. ಸಾರ್ವಜನಿಕರ ಸೇವೆಯೇ ನಮಗೆ ಸಿಕ್ಕಿರುವ ಭಾಗ್ಯ ಎಂದು ಶ್ಲಾಘಿಸಿದರು.

ಸನ್ಮಾನ ಸ್ವೀಕರಿಸಿದ ಹೆಚ್ಚುವರಿ ಜಿಲ್ಲಾಧಿಕಾರಿಗಳಾದ ಗೀತಾ ಹುಡೇದ, ಟಿ.ಜವರೇಗೌಡ ಮಾತನಾಡಿದರು. ಜಿಪಂ ಸಿಇಓ ಮೋನಾರೋತ್, ಎಡಿಸಿ ಬಿ.ಆರ್. ಮಹೇಶ್, ಕೊಳ್ಳೇಗಾಲ ತಹಶೀಲ್ದಾರ್ ಬಸವರಾಜು, ನಿರ್ಗಮಿತ ತಹಶೀಲ್ದಾರ್ ರಮೇಶ್ ಬಾಬು, ಗುರುಪ್ರಸಾದ್, ಆಹಾರ ಇಲಾಖೆ ಉಪ ನಿರ್ದೇಶಕ ಯೋಗಾನಂದ ಮಾತನಾಡಿದರು.




ಚಾ.ನಗರ ಜಿಲ್ಲೆಯ ನಿರ್ಗಮಿತ ಅಧಿಕಾರಿಗಳಿಗೆ ಸನ್ಮಾನಿಸಿ, ಬೀಳ್ಕೊಡಲಾಯಿತು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 27–07–2025




ದಸರಾ ಉತ್ಸವ 2025
ಮೈಸೂರಿಗೆ ಗಜಪರಿವಾರ!

ಈ ಸಾಲಿನಲ್ಲಿ ಸೆಪ್ಟೆಂಬರ್ 22ರಿಂದ ಅಕ್ಟೋಬರ್ 2ರವರೆಗೆ ದಸರಾ ಮಹೋತ್ಸವ ನಡೆಯಲಿದೆ. ಪಂಚಮಿ ಪ್ರಯುಕ್ತ ಈ ಬಾರಿಯ ದಸರಾ ಉತ್ಸವ 11 ದಿನ ವಿಶೇಷ. ದಸರಾ ಉತ್ಸವದ ವಿಶೇಷ ಆಕರ್ಷಣೆ ಅದು ಗಜಪಡೆ. ಇವುಗಳ ನೇತೃತ್ವದಲ್ಲೇ ನಾಡಹಬ್ಬ ಆಚರಣೆಯಾಗುತ್ತಿದೆ. ನಾಡದೇವಿ ಚಾಮುಂಡೇಶ್ವರಿಗೂ ಗಜಪಡೆ ಅಚ್ಚು–ಮೆಚ್ಚು. ಪ್ರತಿ ಬಾರಿ ದಸರಾ ಆರಂಭವಾಗುವುದೇ ಗಜಪಯಣದ ಮೂಲಕ. ಅದರಂತೆ, ಈ ಬಾರಿ ಆಗಸ್ಟ್ 4ರಂದು ಪ್ರಸಕ್ತ ಸಾಲಿನ ದಸರಾ ಗಜಪಯಣ ಆರಂಭವಾಗಲಿದೆ. ಮೊದಲ ತಂಡದಲ್ಲಿ 9 ಆನೆಗಳು ಅಂದು ಹುಣಸೂರು ತಾಲೂಕು ವೀರನಹೊಸಳ್ಳಿಯಿಂದ ಮೈಸೂರಿಗೆ ಆಗಮಿಸಲಿವೆ. ಇದಕ್ಕೂ ಮುನ್ನ ಸಾಂಪ್ರದಾಯಿಕ ಬೀಳ್ಕೊಡುಗೆ ಧಾರ್ಮಿಕ ವಿಧಿ–ವಿಧಾನ ನೆರವೇರಲಿದೆ.

ಅಂದು ಸಾಂಸ್ಕೃತಿಕ ರಾಜಧಾನಿಗೆ ಆಗಮಿಸಲಿರುವ ಗಜಪಡೆಯ ಮೊದಲ ತಂಡದ 9 ಸದಸ್ಯರು ಅರಣ್ಯ ಭವನದಲ್ಲಿ ಬಿಡಾರ ಹೂಡಲಿದ್ದು, ನಂತರ ಅರಮನೆ ಆವರಣಕ್ಕೆ ವಿಧ್ಯುಕ್ತ ಪ್ರವೇಶ ಪಡೆದು, ಅಲ್ಲಿ ತಂಗಲಿವೆ. ಇಲ್ಲಿ ಅವುಗಳಿಗೆ ವಿಶೇಷ ಆತಿಥ್ಯ ನೀಡಲಾಗುವುದು.

ಈ ಮಧ್ಯೆ ದಸರಾ ಆರಂಭಕ್ಕೆ ಕೆಲವೇ ದಿನಗಳಿರುವಂತೆ ಗಜಪಡೆ ಎರಡನೇ ತಂಡದ ಐದು ಆನೆಗಳು ವಿವಿಧ ಶಿಬಿರಗಳಿಂದ ಅರಮನೆ ಆವರಣಕ್ಕೆ ಆಗಮಿಸಿ, ತಯಾರಿಯಲ್ಲಿ ಪಾಲ್ಗೊಳ್ಳಲಿವೆ. ಈ ಬಾರಿ ಒಟ್ಟು 14 ಆನೆಗಳು ದಸರಾದಲ್ಲಿ ಪಾಲ್ಗೊಳ್ಳಲಿವೆ. ಇವುಗಳ ಸಾಮರ್ಥ್ಯವನ್ನು ಪರಿಶೀಲನೆ ನಡೆಸಿ ಆ ಬಳಿಕವೇ ಅರಣ್ಯಾಧಿಕಾರಿಗಳು ಆಯ್ಕೆ ಮಾಡಿದ್ದಾರೆ. ಸರಿ ಸುಮಾರು ಒಂದೂವರೆ ತಿಂಗಳುಗಳ ಕಾಲ ಸಾಂಸ್ಕೃತಿಕ ನಗರಿಯಲ್ಲಿ ಗಜಪಡೆ ಬಿಡಾರ ಹೂಡಿ, ವಿಹಾರದೊಂದಿಗೆ ಜನತೆಯ ನಡುವೆ ಕಾಲ ಕಳೆಯಲಿವೆ. ಗಜಪಯಣದೊಂದಿಗೆ ಮೊದಲ ತಂಡದಲ್ಲಿ ಮೈಸೂರಿಗೆ ಆಗಮಿಸುತ್ತಿರುವ ಗಜಪಡೆಯ 9 ಸದಸ್ಯರ ಸಂಕ್ಷಿಪ್ತ ವಿವರ ಇಂತಿದೆ.




ಅಭಿಮನ್ಯು

ವಯಸ್ಸು : 59 ವರ್ಷಗಳು
ಶಿಬಿರ : ಮತ್ತಿಗೋಡು
ಮಾವುತ : ವಸಂತ ಜೆ.ಎಸ್.
ಕಾವಾಡಿ : ರಾಜು ಜೆ.ಕೆ.
ಎತ್ತರ : 2.72 ಮೀಟರ್
ಉದ್ದ : 3.51 ಮೀಟರ್
ಅಂದಾಜು ತೂಕ : 4920 ಕೆಜಿ
ಹಿನ್ನೆಲೆ : 1970ರಲ್ಲಿ ಕೊಡಗು ಜಿಲ್ಲೆಯ ಹೆಬ್ಬಳ್ಳ ಅರಣ್ಯ ಪ್ರದೇಶದಲ್ಲಿ ಸೆರೆಹಿಡಿಯಲಾಗಿದ್ದು, ವಿಶೇಷ ಗುಣವೆಂದರೆ ಕಾಡಾನೆಗಳನ್ನು ಸೆರೆಹಿಡಿಯುವ, ಪಳಗಿಸುವ ಮತ್ತು ಚಿಕಿತ್ಸೆ ನೀಡುವ ಕೆಲಸದಲ್ಲಿ ಸಾಮರ್ಥ್ಯವನ್ನು ಹೊಂದಿದ್ದಾನೆ. ಈ ಹಿಂದೆ 140 ರಿಂದ 150 ಕಾಡಾನೆಗಳನ್ನು ಮತ್ತು 40 ರಿಂದ 50 ಹುಲಿಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾನೆ. ಕಳೆದ 5 ವರ್ಷಗಳಿಂದ ಅಂಬಾರಿ ಹೊರುವ ಜವಾಬ್ದಾರಿಯುತ ಕರ್ತವ್ಯ ಪಾಲಿಸುತ್ತಿದ್ದಾನೆ.




ಪ್ರಶಾಂತ

ವಯಸ್ಸು : 53 ವರ್ಷ
ಶಿಬಿರ : ದುಬಾರೆ
ಮಾವುತ : ಜೆ.ಎ. ಚಿನ್ನಪ್ಪ
ಕಾವಾಡಿ : ಚಂದ್ರ
ಎತ್ತರ : 2.61 ಮೀಟರ್
ಉದ್ದ : 3.46 ಮೀಟರ್
ಅಂದಾಜು ತೂಕ : 4650 ಕೆಜಿ
ಹಿನ್ನೆಲೆ : 1993ರಲ್ಲಿ ಕಾರೆಕೊಪ್ಪ ಅರಣ್ಯ ಪ್ರದೇಶದಲ್ಲಿ ಸೆರೆಹಿಡಿಯಲಾಗಿತ್ತು. ಪ್ರಶಾಂತ 15 ವರ್ಷಗಳಿಂದಲೂ ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಾ ಬಂದಿದೆ.



ಮಹೇಂದ್ರ

ವಯಸ್ಸು : 42 ವರ್ಷ
ಶಿಬಿರ : ಬಳ್ಳೆ
ಮಾವುತ : ರಾಜಣ್ಣ
ಕಾವಾಡಿ : ಮಲ್ಲಿಕಾರ್ಜುನ
ಎತ್ತರ : 2.75 ಮೀಟರ್
ಉದ್ದ : 3.25 ಮೀಟರ್
ಅಂದಾಜು ತೂಕ : 4850 ಕೆಜಿ
ಹಿನ್ನೆಲೆ : 2022–23ನೇ ಸಾಲಿನಲ್ಲಿ ಪ್ರಥಮ ಬಾರಿಗೆ ದಸರಾ ಮಹೋತ್ಸವದಲ್ಲಿ ಭಾಗಿಯಾಗಿದ್ದು, ಶ್ರೀರಂಗಪಟ್ಟಣ ಗ್ರಾಮೀಣ ದಸರಾ ಮಹೋತ್ಸವದಲ್ಲಿ ಮರದ ಅಂಬಾರಿಯನ್ನು ಹೊತ್ತಿದ್ದಾನೆ. ವಿವಿಧ ಗ್ರಾಮೀಣ ದಸರಾ ಮಹೋತ್ಸವದಲ್ಲಿ ಭಾಗಿಯಾಗುವುದರ ಜೊತೆಗೆ ಕಾಡಾನೆ ಮತ್ತು ಹುಲಿಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಯಲ್ಲೂ ಭಾಗವಹಿಸುತ್ತಾ ಬಂದಿದ್ದಾನೆ.




ಕಾವೇರಿ

ವಯಸ್ಸು : 45 ವರ್ಷ
ಶಿಬಿರ : ದುಬಾರೆ
ಮಾವುತ : ಜೆ.ಡಿ. ದೋಭಿ
ಕಾವಾಡಿ : ಸಂಜನ್ ಜೆ.ಎ.
ಎತ್ತರ : 2.50 ಮೀಟರ್
ಉದ್ದ : 3.32 ಮೀಟರ್
ಅಂದಾಜು ತೂಕ : 3500 ಕೆಜಿ
ಹಿನ್ನೆಲೆ : ಫೆಬ್ರವರಿ 2009ರಂದು ಸೋಮವಾರಪೇಟೆ ಆಡಿನಾಡೂರು ಅರಣ್ಯ ಪ್ರದೇಶದಲ್ಲಿ ಕಾವೇರಿಯ ಸೆರೆ ಹಿಡಿಯಲಾಗಿತ್ತು. ಈ ಹಿಂದೆ ಅನೇಕ ಬಾರಿ ದಸರಾ ಮಹೋತ್ಸವದಲ್ಲಿ ಭಾಗಿಯಾಗಿದ್ದಾಳೆ.




ಲಕ್ಷ್ಮೀ

ವಯಸ್ಸು : 54 ವರ್ಷ
ಶಿಬಿರ : ಬಳ್ಳೆ
ಮಾವುತ : ಸಣ್ಣಪ್ಪ
ಕಾವಾಡಿ : ಮಂಜು
ಎತ್ತರ : 2.52 ಮೀಟರ್
ಅಂದಾಜು ತೂಕ : 2480 ಕೆಜಿ
ಹಿನ್ನೆಲೆ : ಈಕೆ ಸರ್ಕಸ್ ಆನೆಯಾಗಿದ್ದು, 2015ರಲ್ಲಿ ಅರಣ್ಯ ಇಲಾಖಾ ವಶಕ್ಕೆ ತೆಗೆದುಕೊಳ್ಳಲಾಗಿತ್ತು ಲಕ್ಷ್ಮಿ ಆರೋಗ್ಯವಾಗಿದ್ದು ಎರಡನೇ ಬಾರಿ ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದೆ.



ಧನಂಜಯ

ವಯಸ್ಸು : 45 ವರ್ಷ
ಶಿಬಿರ : ದುಬಾರೆ
ಮಾವುತ : ಭಾಸ್ಕರ್ ಜೆ.ಸಿ.
ಕಾವಾಡಿ : ರಾಜಣ್ಣ ಜೆ.ಎಸ್.
ಎತ್ತರ : 2.80 ಮೀಟರ್
ಉದ್ದ : 3.84 ಮೀಟರ್
ಅಂದಾಜು ತೂಕ : 4050 ಕೆಜಿ
ಹಿನ್ನೆಲೆ : 2013ರಲ್ಲಿ ಹಾಸನ ಜಿಲ್ಲೆಯ ಯಸಳೂರು ವಲಯದ ವ್ಯಾಪ್ತಿಯಲ್ಲಿ ಸೆರೆಹಿಡಿಯಲಾಗಿತ್ತು. ಕಾಡಾನೆ ಮತ್ತು ಹುಲಿಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಯಲ್ಲಿ ಭಾಗವಹಿಸುತ್ತಾ ಬಂದಿದ್ದಾನೆ. ಕಳೆದ 7 ವರ್ಷಗಳಿಂದ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದಾನೆ.



ಭೀಮ

ವಯಸ್ಸು : 35 ವರ್ಷ
ಶಿಬಿರ : ಮತ್ತಿಗೋಡು
ಮಾವುತ : ಗುಂಡು
ಕಾವಾಡಿ : ನಂಜುಂಡಸ್ವಾಮಿ
ಎತ್ತರ : 2.85 ಮೀಟರ್
ಉದ್ದ : 3.05 ಮೀಟರ್
ಅಂದಾಜು ತೂಕ : 5300 ಕೆಜಿ
ಹಿನ್ನೆಲೆ : ಕಾಡಾನೆ ಮತ್ತು ಹುಲಿಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದಾನೆ. 2017ನೇ ಸಾಲಿನ ದಸರಾ ಮಹೋತ್ಸವದಲ್ಲಿ ಸಾಲಾನೆಯಾಗಿ ಹಾಗೂ 2022ನೇ ಸಾಲಿನಲ್ಲಿ ಪಟ್ಟದಾನೆ ಹಾಗೂ ಸಾಲಾನೆಯಾಗಿ ಭಾಗಿಯಾಗಿದ್ದು, ಈ ಬಾರಿಯು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದಾನೆ.



ಕಂಜನ್

ವಯಸ್ಸು : 26 ವರ್ಷ
ಶಿಬಿರ : ದುಬಾರೆ ಆನೆ ಶಿಬಿರ
ಮಾವುತ : ಜೆ.ಡಿ. ವಿಜಯ
ಕಾವಾಡಿ : ಕಿರಣ
ಎತ್ತರ : 2.89 ಮೀಟರ್
ಅಂದಾಜು ತೂಕ : 3900 ಕೆಜಿ
ಹಿನ್ನೆಲೆ : 2014ರಲ್ಲಿ ಹಾಸನ ಜಿಲ್ಲೆಯ ಯಸಳೂರು ಬಳಿ ಸೆರೆಹಿಡಿಯಲಾಗಿದ್ದು, ಕಳೆದ 2 ಸಾಲುಗಳಲ್ಲಿ ದಸರಾ ಮಹೋತ್ಸವದಲ್ಲಿ ಭಾಗವಹಿಸಿದ್ದಾನೆ.



ಏಕಲವ್ಯ

ವಯಸ್ಸು : 40 ವರ್ಷ
ಶಿಬಿರ : ಮತ್ತಿಗೋಡು
ಮಾವುತ : ಇದಾಯತ್ ಎಸ್.
ಕಾವಾಡಿ : ಸೃಜನ್
ಎತ್ತರ : 2.88 ಮೀಟರ್
ಅಂದಾಜು ತೂಕ : 5150 ಕೆಜಿ
ಹಿನ್ನೆಲೆ : ಆರೋಗ್ಯವಾಗಿದ್ದು, ವಾಹನ ಹಾಗೂ ಪಟಾಕಿಗಳ ಶಬ್ದಕ್ಕೆ ಅಂಜುವುದಿಲ್ಲ. ಎರಡನೇ ಬಾರಿ ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದಾನೆ.



ವಾರಭವಿಷ್ಯ

27.07.2025 ರಿಂದ 2.08.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಕಟಕ, ಚಂದ್ರ–ಸಿಂಹ, ಕನ್ಯಾ, ತುಲಾ, ಕುಜ–ಸಿಂಹ, ತುಲಾ, ಬುಧ–ಕಟಕ, ಗುರು–ವೃಷಭ, ಶುಕ್ರ–ವೃಷಭ, ಮಿಥುನ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ಕೈಗೊಂಡ ಕೆಲಸಗಳಲ್ಲಿ ಅಡಚಣೆಗಳು ಉಂಟಾದರೂ ಅದನ್ನು ನಿಧಾನವಾಗಿ ನಿವಾರಿಸಿಕೊಳ್ಳುವಿರಿ. ವಾಹನ ರಿಪೇರಿ ಖರ್ಚುಗಳು ಎದುರಾಗುವುದು. ನಿಮ್ಮ ವೃತ್ತಿಪರ ವ್ಯವಹಾರಗಳು ನಿರೀಕ್ಷಿತ ಮಟ್ಟದಲ್ಲಿ ಕಾರ್ಯ ನಿರ್ವಹಿಸುವುದಿಲ್ಲ. ಮಾಡುವ ಕೆಲಸದಲ್ಲಿ ಜವಾಬ್ದಾರಿಗಳು ಹೆಚ್ಚುವುದರಿಂದ ವಿಶ್ರಾಂತಿ ಇರುವುದಿಲ್ಲ. ಹೊಸ ಸಾಲಗಳನ್ನು ಮಾಡುವ ಸಂದರ್ಭ ಬರಬಹುದು.

ಮೇಷ: ಶ್ರೀ ಗಣಪತಿ ಅರ್ಚನೆ, ಶುಭ ಸಂಖ್ಯೆ–7

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೂ)

ಜನ್ಮಸ್ಥ ಗುರುವಿನ ಕಾರಣ ಕುಟುಂಬ ಸದಸ್ಯರ ವರ್ತನೆಯಿಂದ ಮಾನಸಿಕ ಕಿರಿಕಿರಿ ಉಂಟಾಗುವುದು. ಹೊಸ ವ್ಯವಹಾರ ಪ್ರಾರಂಭಿಸುವ ಪ್ರಯತ್ನಗಳು ಮುಂದೂಡಲ್ಪಡುತ್ತವೆ. ವಾರ ಮಧ್ಯಾನಂತರ ಆರ್ಥಿಕ ಸಮಸ್ಯೆಗಳಿಗೆ ಸ್ವಲ್ಪ ಮಟ್ಟಿನ ಮುಕ್ತಿ ದೊರೆಯುತ್ತದೆ. ಹಳೆಯ ದ್ವೇಷ ಮನಸ್ತಾಪಗಳೂ ಕೊನೆಗಾಣುವುದು. ವೃತ್ತಿಪರ ಉದ್ಯೋಗದಲ್ಲಿ ಸಕಾರಾತ್ಮಕ ಫಲಿತಾಂಶಗಳು ಕಂಡು ಬರುತ್ತದೆ.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–1

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ವಾರದಾರಂಭಕ್ಕೆ ಹಣದ ವಹಿವಾಟಿನ ಬಗ್ಗೆ ಸಾಧ್ಯವಾದಷ್ಟು ಜಾಗರೂಕರಾಗಿರಿ. ಅನೇಕ ಪ್ರಮುಖ ನಿರ್ಧಾರಗಳು ಮುಂದೂಡಲ್ಪಡುತ್ತವೆ. ವರ್ಗಾವಣೆಗೆ ಕಾಯುತ್ತಿದ್ದ ಸರ್ಕಾರಿ ಉದ್ಯೋಗಿಗಳಿಗೆ ಅಪೇಕ್ಷಿತ ಸ್ಥಳ ದೊರೆಯುವ ಸಾಧ್ಯತೆ ಇರುತ್ತದೆ. ಒಡಹುಟ್ಟಿದವರ ಬೆಂಬಲ ದೊರೆಯದೆ ಆಸ್ತಿ ವಿಚಾರಗಳು ಇತ್ಯರ್ಥವಾಗುವುದಿಲ್ಲ. ಗುರುಸ್ತುತಿಯಿಂದ ಸಂಕಟ ನಿವಾರಣೆ.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–8

ಕಟಕ (ಹೊ,ಹು,ಹೆ,ಡ,ಡಿ,ಡು)

ನಿಮ್ಮ ರಾಶ್ಯಾಧಿಪತಿಗೆ ಸಂಬಂಧಿಸಿದಂತೆ ಶ್ರೀ ಶನಿದೇವನು ಒಂಬತ್ತನೇ ಮನೆಯಲ್ಲಿ ಇರುವುದರಿಂದ ಯಾವುದೇ ರೀತಿಯ ನೂತನ ವ್ಯವಹಾರಕ್ಕೆ ಸಂಬಂಧಿಸಿದಂತೆ ಸ್ವಲ್ಪ ಗೊಂದಲಗಳು ಉಂಟಾಗುವ ಸಾಧ್ಯತೆ ಇದೆ. ನ್ಯಾಯಾಲಯದ ವಿಚಾರದಲ್ಲಿ ನಿಮ್ಮ ಕಠಿಣ ಪರಿಶ್ರಮದ ಫಲವಾಗಿ ಸೂಕ್ತ ಫಲಿತಾಂಶವನ್ನು ನಿರೀಕ್ಷಿಸಬಹುದು. ವಿದ್ಯಾರ್ಥಿಗಳು ನಿಷ್ಪ್ರಯೋಜಕ ವಿಷಯಗಳಲ್ಲಿ ಕಾಲಹರಣ ಮಾಡುವರು.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–4

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ಈ ವಾರದಲ್ಲಿ ನಿಮ್ಮ ಆರ್ಥಿಕ ಜೀವನ ಉತ್ತಮವಾಗುತ್ತದೆ. ಎದುರಾಗಿದ್ದ ಹಣಕಾಸಿನ ಸಮಸ್ಯೆಗಳು ನಿವಾರಣೆ ಆಗುವುದು. ದೊಡ್ಡ ನಿರ್ಧಾರಗಳನ್ನು ತೆಗೆದುಕೊಳ್ಳಲು ಗುರು ಬಲವಿದೆ. ಹಿರಿಯರ ಅನುಭವದ ಲಾಭ ನಿಮಗೆ ದೊರೆಯುವುದು. ವಿವಾಹಾಕಾಂಕ್ಷಿಗಳಿಗೆ ವಧು, ವರರು ನಿಶ್ಚಯವಾಗುವ ಸಂಭವವಿದೆ. ಕುಟುಂಬ ಸಾಮರಸ್ಯ ಕೆಡಿಸಲು ರಾಹು–ಕೇತುಗಳ ಸಂಚಾರ ಶುಭವಿಲ್ಲ. ತಾಳ್ಮೆಯಿಂದ ನಿಭಾಯಿಸಿ.

ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–5

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ಸಮಾಜ ಸೇವೆಯಿಂದ ಖ್ಯಾತಿ, ಪ್ರಸಿದ್ಧಿಯನ್ನು ಪಡೆಯುವಿರಿ. ಕೃಷಿ ಉಪಕರಣ, ಕೃಷಿ ಗೊಬ್ಬರ ಮಾರಾಟಗಾರರಿಗೆ ಬಂಪರ್ ವ್ಯಾಪಾರ ಹಾಗೂ ಧನಲಾಭ. ನೆರೆಹೊರೆಯಲ್ಲಿ ಉತ್ತಮ ಬಾಂಧವ್ಯ ಕಾಪಾಡಿಕೊಳ್ಳಿ. ಅನ್ಯಥಾ ವಿಕೋಪಕ್ಕೆ ಕಾರಣವಾಗುವುದು. ಹಲವರಿಗೆ ತಮ್ಮ ನೌಕರಿಯಲ್ಲಿ ನಿರುತ್ಸಾಹ ಹಾಗೂ ಅಲಸ್ಯತನ ಕಾಡುವುದು.

ಶ್ರೀ ಸತ್ಯನಾರಾಯಣ ವ್ರತ ಕಥೆ ಪಠಿಸಿ. ಶುಭ ಸಂಖ್ಯೆ–2

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ವಾರದ ಆದಿಗೆ ಸುಖ, ಸಂತೋಷ, ಧನ, ಧಾನ್ಯ ಸಂಗ್ರಹ, ಷೇರು ವ್ಯವಹಾರದಲ್ಲಿ ಲಾಭ ಗಳಿಕೆ, ಹೊಸ ಹೂಡಿಕೆಗಳಿಗೂ ಪ್ರೇರಣೆ. ಕೃಷಿಕರಿಗೆ ದ್ವಿದಳ ಧಾನ್ಯ ಫಸಲು ಸಮೃದ್ಧವಾಗಿ ಬರುವುದು. ಐಹಿಕ ಸುಖ ಭೋಗಗಳನ್ನು ಅನುಭವಿಸುವಿರಿ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸೆಲೆಕ್ಷನ್ ಯೋಗವಿದೆ. ವಾರಾಂತ್ಯಕ್ಕೆ ಪುಣ್ಯಕ್ಷೇತ್ರ ಸಂದರ್ಶನದಿಂದ ಧನ್ಯತಾಭಾವ.

ಶ್ರೀ ಶಕ್ತಿದೇವತಾ ಪೂಜೆ. ಶುಭ ಸಂಖ್ಯೆ–9

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ನೀವು ಮಾಡುವ ಕೆಲಸಕ್ಕೆ ಸರಿಯಾದ ಪ್ರತಿಫಲ ದೊರೆಯದೆ ಬೇಸರ. ನಿರುದ್ಯೋಗಿಗಳಿಗೆ ಹಿರಿಯರ ಸಹಕಾರದಿಂದ ಹೊಸ ಅವಕಾಶಗಳು ತೆರೆದುಕೊಳ್ಳಲಿವೆ. ನ್ಯಾಯಾಲಯದ ವಿಷಯಗಳಲ್ಲಿ ಅನುಕೂಲಕರ ಸನ್ನಿವೇಶ ಕಾಣದು. ವಾಹನ ರಿಪೇರಿಗೆ ಹೆಚ್ಚಿನ ಹಣ ವ್ಯಯವಾಗುವುದು. ಉದ್ಯೋಗ ಸ್ಥಳದಲ್ಲಿ ಬದಲಾವಣೆ ಉಂಟಾಗಲಿದೆ. ವಾಯು ಪ್ರಕೋಪದಿಂದ ಆರೋಗ್ಯದಲ್ಲಿ ವ್ಯತ್ಯಯ.

ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಆರಾಧನೆ. ಶುಭ ಸಂಖ್ಯೆ–3

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ವಾರದ ಆದಿಗೆ ಹಣಕಾಸಿನ ಪರಿಸ್ಥಿತಿ ಸುಧಾರಿಸುತ್ತದೆ. ಮನೆಯಲ್ಲೂ, ಆಫೀಸಿನಲ್ಲೂ ಉಂಟಾಗುವ ಬದಲಾವಣೆಗಳಿಗೆ ಸಿದ್ಧರಾಗಿರಿ. 'ಸಜ್ಜನರ ಸಂಘ ಹೆಜ್ಜೇನು ಸವಿದಂತೆ' ಎಂಬ ಗಾದೆಯಂತೆ ಉತ್ತಮರ ಸಹವಾಸದಲ್ಲಿರಲು ಪ್ರಯತ್ನಿಸಿ. ಸಾಲಗಾರರ ಒತ್ತಡವೂ ಇರುತ್ತದೆ. ನಿಮ್ಮ ಸನಿಹದವರೇ ನಿಮ್ಮನ್ನು ಅನುಮಾನಿಸಿ ನೋಡುವರು.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–4

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

'ಧೈರ್ಯಂ ಸರ್ವತ್ರ ಸಾಧನಂ' ಎಂಬ ನಾಣ್ಣುಡಿಯಂತೆ ನವಗ್ರಹಗಳ ಶುಭಾಶುಭ ಫಲಗಳು ಸಮತ್ವವಾಗಿ ನಡೆಯುವುದು. ರಾಹು–ಕೇತುಗಳ ಗ್ರಹಸ್ಥಿತಿಯಿಂದ ಕೆಲವೊಂದು ಆತಂಕಕಾರಿ ಪರಿಣಾಮಗಳು ಉದ್ಭವಿಸುತ್ತವೆ. ಸಮಾಧಾನಚಿತ್ತರಾಗಿ ನಿಭಾಯಿಸಿಕೊಳ್ಳಿ. ದ್ವಿತೀಯ ಶನಿದೇವನಿಂದ ಫಲ ಪ್ರಾಪ್ತಿ ಕಾಲದಲ್ಲಿ ವಿಳಂಬವಾಗುವುದು.

ಶ್ರೀ ಶನಿ ಚಾಲೀಸ ಪಠಿಸಿ. ಶುಭ ಸಂಖ್ಯೆ–8

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಸಾಡೇಸಾತಿ ಪ್ರಭಾವದ ಮಧ್ಯೆಯೂ ಗುರುಕೃಪೆ ನಿಮ್ಮ ರಾಶಿಗೆ ಇದ್ದು, ನಿಮ್ಮ ಇಚ್ಛಾಶಕ್ತಿಯಿಂದ ಸಾಧನೆಗೈದು ಗುರಿ ಮುಟ್ಟುವಿರಿ. ಧನ ಸಂಪಾದನೆ ಚೆನ್ನಾಗಿರುತ್ತದೆ. ಆದರೆ ಖರ್ಚುಗಳು ಮಿತಿ ಮೀರುವುದು. ಎಣ್ಣೆ ಕಾಳು ಹಾಗೂ ಎಣ್ಣೆ ಮಾರಾಟಗಾರರಿಗೆ ಉತ್ತಮ ಧನಲಾಭ ಆಗುವುದು. ಆರೋಗ್ಯ ಕಾಪಾಡಿಕೊಳ್ಳಿ. ಸಮಯಕ್ಕೆ ಸರಿಯಾಗಿ ಊಟ ಮಾಡಿ.

ಶ್ರೀ ಹರಿನಾಮ ಸ್ತುತಿ. ಶುಭ ಸಂಖ್ಯೆ–6

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ವಾರದ ಆದಿಗೆ ಗೌರವಾನ್ವಿತ ವ್ಯಕ್ತಿಗಳೊಡನೆ ಸಂವಾದ, ಮಾರ್ಗದರ್ಶನ. ಹಣಕಾಸಿನ ಬಿಕ್ಕಟ್ಟು ಉಂಟಾದರೂ ಜಯಿಸಿಕೊಳ್ಳುವಿರಿ. ಸಿವಿಲ್ ಇಂಜಿನಿಯರ್‌ಗಳಿಗೆ ದೊಡ್ಡ ಯೋಜನೆ ದೊರೆಯುವ ಸಂಭವವಿದೆ. ಸ್ಥಿರಾಸ್ತಿ ವಿಷಯಗಳು ಕಾನೂನು ತೊಡಕಿನಿಂದ ತೀರ್ಮಾನವಾಗದು. ಆರೋಗ್ಯದಲ್ಲಿ ಏರುಪೇರು ಉಂಟಾಗುವುದು. ಔಷಧಿ ಖರ್ಚುಗಳು. ಜಲಾಶಯಗಳ ಹತ್ತಿರ ಎಚ್ಚರವಾಗಿರಿ.

ಶ್ರೀ ರಾಘವೇಂದ್ರಸ್ವಾಮಿ ಅರ್ಚನೆ. ಶುಭ ಸಂಖ್ಯೆ–7

ಸರಗೂರು ಬಳಿ ಡ್ರೋನ್ ಕಾರ್ಯಾಚರಣೆ

ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸಿದ ಅರಣ್ಯ ಅಧಿಕಾರಿಗಳು, ಸಿಬ್ಬಂದಿಗಳು



ಡ್ರೋನ್ ಕಾರ್ಯಾಚರಣೆ ಮೂಲಕ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯಚರಣೆಯಲ್ಲಿ ಪಾಲ್ಗೊಂಡಿರುವ ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ವರ್ಗ.

ಸರಗೂರು, ಜು.26– ತಾಲೂಕಿನಲ್ಲಿ ಫಸಲು ತಿಂದು, ನಾಶಪಡಿಸಿ ಸಾರ್ವಜನಿಕರಿಗೆ ಉಪಟಳ ನೀಡುತ್ತಿದ್ದ ಕಾಡಾನೆಗಳನ್ನು ಡ್ರೋನ್ ಕಾರ್ಯಾಚರಣೆ ಮೂಲಕ ಕಾಡಿಗಟ್ಟುವ ಕಾರ್ಯ ಆರಂಭವಾಗಿದೆ.

ಕಳೆದ ಆರು ದಿನಗಳಿಂದ ನಡೆಯುತ್ತಿರುವ ಈ ಕಾರ್ಯಾಚರಣೆಯಿಂದ ಮೂರು ಕಾಡಾನೆಗಳನ್ನು ಮೊಳೆಯೂರು ವನ್ಯಜೀವಿ ವಲಯಕ್ಕೆ ಹಿಮ್ಮೆಟ್ಟಿಸಲಾಗಿದೆ.

ಕಾಡಾನೆಗಳ ಹಾವಳಿ ಹೆಚ್ಚಾಗಿರುವುದನ್ನು ವಿರೋಧಿಸಿ ಗ್ರಾಮಸ್ಥರು, ರೈತರು ಮತ್ತು ಸಂಘ–ಸಂಘಗಳು ತೀವ್ರ ಪ್ರತಿಭಟನೆ ನಡೆಸಿದ್ದ ಹಿನ್ನೆಲೆಯಲ್ಲಿ ಈ ಕಾರ್ಯಾಚರಣೆ ನಡೆಸಲಾಯಿತು ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ (DCF) ನಂದೀಶ್.ಎಲ್ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ACF) ಸುಮಿತ್ರ ಎಸ್‌ರವರ ನೇತೃತ್ವದಲ್ಲಿ ಸರಗೂರು ವಲಯದ ಆರ್‌ಎಫ್‌ಓ ಮಹಾಲಕ್ಷ್ಮಿ, ನುಗು ವಲಯದ ಆರ್‌ಎಫ್‌ಓ ನಿತೀನ್ ಮತ್ತು ನುಗು ವಲಯದ ಆರ್‌ಎಫ್‌ಓ ವಿವೇಕ್ ಜೊತೆಯಲ್ಲಿ ಸರಗೂರು ವಲಯದ ಎಲ್ಲಾ ಡಿಆರ್‌ಎಫ್‌ಓ ಹಾಗೂ ಸಿಬ್ಬಂದಿಗಳು, ಎಲ್‌ಟಿಎಫ್ ತಂಡ, ಇಟಿಎಫ್ ಹುಣಸೂರು ತಂಡ ಡ್ರೋನ್ ಕಾರ್ಯಾಚರಣೆ ಕೈಗೊಂಡು, ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ನಡೆಸಿದರು.

ಸುರಿಯುವ ಮಳೆಯನ್ನು ಲೆಕ್ಕಿಸದೆ ಈಗಾಗಲೇ 3 ಕಾಡಾನೆಗಳನ್ನು ಮೊಳೆಯೂರು ವನ್ಯಜೀವಿ ವಲಯಕ್ಕೆ ಹಿಮ್ಮೆಟ್ಟಿಸಲಾಗಿದೆ. ಪ್ರತಿದಿನ ರಾತ್ರಿ ಕಾರ್ಯಾಚರಣೆ ನಡೆಸಲಾಗುತ್ತಿದ್ದು ಸಾರ್ವಜನಿಕರು ಕಾಡಾನೆ ಕಂಡು ಬಂದರೆ ಭಯಪಡದೆ ತಕ್ಷಣ ಅರಣ್ಯ ಇಲಾಖೆಗೆ ತಿಳಿಸಿದರೆ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಮಾಡಲಾಗುತ್ತದೆ ಎಂದು ಸರಗೂರು ವಲಯದ ಆರ್‌ಎಫ್‌ಓ ಮಹಾಲಕ್ಷ್ಮಿ ತಿಳಿಸಿದ್ದಾರೆ.

ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಆಗ್ರಹಿಸಿ ಪ್ರತಿಭಟನೆ



ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡುತ್ತಿರುವ ಶಾಸಕ ದರ್ಶನ್ ಪುಟ್ಟಣ್ಣಯ್ಯ.

ಹುಣಸೂರು, ಜು.26(ಕೆಕೆ)– ಮಾನವ–ವನ್ಯಜೀವಿ ಸಂಘರ್ಷ ನಿಯಂತ್ರಣ, ವನ್ಯಜೀವಿಗಳ ದಾಳಿಯಿಂದ ಹಾನಿಯಾದ ಬೆಳೆಗಳಿಗೆ ಸೂಕ್ತ ಪರಿಹಾರ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರೈತ ಸಂಘ ಮತ್ತು ವಿವಿಧ ಪ್ರಗತಿಪರ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ನಗರದ ಸಂವಿಧಾನ ವೃತ್ತದ ಬಳಿ ಜಮಾವಣೆಗೊಂಡ ಸಂಘಟನೆಯ ನೂರಾರು ಕಾರ್ಯಕರ್ತರು, ರಾಜ್ಯ ಸರ್ಕಾರವು ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಘೋಷಣೆಗಳನ್ನು ಕೂಗಿ ಪ್ರತಿಭಟನಾ ಮೆರವಣಿಗೆ ಆರಂಭಿಸಿದರು. ಸಂವಿಧಾನ ವೃತ್ತದಿಂದ ಹೊರಟು ಬಸ್ ನಿಲ್ದಾಣ, ಕಲ್ಪತರು ವೃತ್ತವನ್ನು ಬಳಸಿ ಹಳೇ ಸೇತುವೆ ಮೂಲಕ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ (ಹುಲಿ ಯೋಜನೆ ಕಚೇರಿ) ಕಚೇರಿ ಆವರಣಕ್ಕೆ ಆಗಮಿಸಿ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಆನೆ ದಾಳಿಯನ್ನು ನಿಯಂತ್ರಿಸಲು ರೈಲ್ವೆ ಕಂಬಿಗಳ ಅಳವಡಿಕೆಯೊಂದೇ ಪರಿಹಾರವಲ್ಲ. ಪರಿಸರಕ್ಕೆ ಪೂರಕವಾದ ಗಡಿಭಾಗಗಳಲ್ಲಿ ಜೇನು ಕೃಷಿ ನಿರ್ವಹಣೆ, ಸೋಲಾರ್ ತಂತಿ ಬೇಲಿ, ಮುಂತಾದ ಉಪಕ್ರಮಗಳನ್ನು ಅಧಿಕಾರಿಗಳು ಕೈಗೊಳ್ಳಬೇಕು. ದಾಳಿಯಿಂದಾಗುವ ಬೆಳೆ ಮತ್ತು ಜೀವ ಹಾನಿಗೆ ಸೂಕ್ತ ಪರಿಹಾರ ನೀಡಬೇಕು. ಮಾನವ–ವನ್ಯಜೀವಿ ಸಂಘರ್ಷ ನಿಯಂತ್ರಿಸಲು ಅರಣ್ಯ ಇಲಾಖೆ ಪರಿಸರ ಪೂರಕ ಹೊಂದಿರುವ ಸಹಜ ಪರಿಹಾರೋಪಾಯಗಳನ್ನು ಅನುಸರಿಸಬೇಕು. ದೇಶದಲ್ಲಿ ಅರಣ್ಯ ಭೂಮಿ ನಿಗದಿತ ಪ್ರಮಾಣಕ್ಕಿಂತ ಕಡಿಮೆ ಇದೆ. ವನ್ಯ ಜೀವಿಗಳ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ ಎನ್ನುವುದು ನಮಗೂ ತಿಳಿದಿದೆ. ಆದರೆ ಸ್ಥಳೀಯವಾಗಿ ರೈತರು ಅನುಭವಿಸುತ್ತಿರುವ ಸಮಸ್ಯೆಗಳನ್ನು ಸ್ಥಳೀಯ ಅಧಿಕಾರಿಗಳ ಮಟ್ಟದಲ್ಲೆ ಪರಿಹರಿಸಲು ಅವಕಾಶವಿದ್ದು, ಅಧಿಕಾರಿಗಳು ತಮ್ಮ ಬದ್ಧತೆಯನ್ನು ತೋರಬೇಕಿದೆ ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರೈತಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ನೇತ್ರಾವತಿ, ಮುಖಂಡರಾದ ಅತ್ತಿಕುಪ್ಪೆ ರಾಮಕೃಷ್ಣ ವಿ.ಬಸವರಾಜ್ ಕಲ್ಕುಣಿಕೆ, ಅಗ್ರಹಾರ ರಾಮೇಗೌಡ, ವಿಷಕಂಠಪ್ಪ ಹೆಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ಮಹದೇವನಾಯ್ಕ, ಡೀಡ್ ಸಂಸ್ಥೆ ನಿರ್ದೇಶಕ ಡಾ.ಎಸ್.ಶ್ರೀಕಾಂತ್, ಬೆಂಕಿಪುರ ಚಿಕ್ಕಣ್ಣ ಉಂಡುವಾಡಿ ಸಿ. ಚಂದ್ರೇಗೌಡ, ಮೋದೂರು ಶಿವಣ್ಣ ಚಿಕ್ಕಹುಣಸೂರು ರಾಜು ಸೇರಿದಂತೆ ಎಚ್.ಡಿ.ಕೋಟೆ ತಾಲೂಕಿನ ರೈತ ಮುಖಂಡರು ಭಾಗವಹಿಸಿದ್ದರು.

ಕಾಂಗ್ರೆಸ್‌ನಿಂದ ನಂಜುಂಡಸ್ವಾಮಿ ಉಚ್ಚಾಟನೆ

ತಿ.ನರಸೀಪುರ ಜು.26– ಟಿ.ನರಸೀಪುರ ಪುರಸಭಾ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಅವರು



ಪುರಸಭಾ ವ್ಯಾಪ್ತಿಯಲ್ಲಿ ಅಧಿಕಾರ ದುರ್ಬಳಕೆ, ವಂಚನೆ ಹಾಗೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಮೂಲ ಧ್ಯೇಯೋದ್ದೇಶಗಳಿಗೆ ಧಕ್ಕೆಯಾಗುವ ರೀತಿ ನಡೆದುಕೊಂಡ ಹಿನ್ನೆಲೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಆದೇಶದ ಮೇರೆಗೆ, ತಕ್ಷಣದಿಂದ ಜಾರಿಗೆ ಬರುವಂತೆ ಅವರನ್ನು ಕಾಂಗ್ರೆಸ್ ಪಕ್ಷದಿಂದ 6 ವರ್ಷಗಳ ಕಾಲ ಉಚ್ಚಾಟನೆ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ಬಿ.ಜೆ.ವಿಜಯಕುಮಾರ್ ತಿಳಿಸಿದ್ದಾರೆ.

ಕೆ.ಆರ್.ನಗರದಲ್ಲಿ ಕಾರ್ಗಿಲ್ ವಿಜಯೋತ್ಸವ ಆಚರಣೆ

ನಿವೃತ್ತ ಯೋಧರನ್ನು ಸನ್ಮಾನಿಸಿದ ರೋಟರಿ ಕ್ಲಬ್

ಕೆ.ಆರ್.ನಗರ, ಜು.26– ಇಂದು ಕಾರ್ಗಿಲ್ ವಿಜಯ್ ದಿವಸ್, ಈ ದಿನವು ರಾಷ್ಟ್ರದ ಹೆಮ್ಮೆ ಮತ್ತು ಶಕ್ತಿಯನ್ನು ಪ್ರತಿನಿಧಿಸುತ್ತದೆ ಎಂದು ರೋಟರಿ ಕ್ಲಬ್‌ನ ಅಧ್ಯಕ್ಷ ಟಿ.ಎನ್.ದಯಾನಂದ್ ಹೇಳಿದರು.



ಪಟ್ಟಣದ ರೋಟರಿ ಭವನದಲ್ಲಿ ಆಯೋಜಿಸಲಾಗಿದ್ದ ಕಾರ್ಗಿಲ್ ವಿಜಯೋತ್ಸವ ಅಂಗವಾಗಿ ನಿವೃತ್ತ ಯೋಧರಿಗೆ ಸನ್ಮಾನಿಸಲಾಯಿತು.

ಪಟ್ಟಣದ ರೋಟರಿ ಭವನದಲ್ಲಿ ಆಯೋಜಿಸಲಾಗಿದ್ದ ಕಾರ್ಗಿಲ್ ವಿಜಯೋತ್ಸವ ಅಂಗವಾಗಿ ನಿವೃತ್ತ ಯೋಧರಿಗೆ ಸನ್ಮಾನ ಹಾಗೂ ವನಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಾರ್ಗಿಲ್ ವಿಜಯೋತ್ಸವದ ಈ ದಿನ ದಂದು ನಮ್ಮ ಸೈನಿಕರ ಧೈರ್ಯ ಮತ್ತು ಪ್ರಯತ್ನಗಳನ್ನು ಶ್ಲಾಘಿಸುವುದರ ಜೊತೆಗೆ, ಅದರ ಮಹತ್ವವನ್ನು ನಮ್ಮ ಮಕ್ಕಳಿಗೆ ವಿವರಿಸುವುದು ಅಷ್ಟೇ ಮುಖ್ಯವಾಗಿದೆ ಎಂದರು.

ದೇಶದ ಸೈನಿಕರು ಈ ಹಿಂದೆ ನಡೆಸಿದ ಯುದ್ಧಗಳನ್ನು ಅರ್ಥ ಮಾಡಿಕೊಳ್ಳುವುದು ಯುವ ಪೀಳಿಗೆಗೆ ಅತ್ಯಗತ್ಯವಾಗಿದೆ. ಕಾರ್ಗಿಲ್ ಯುದ್ಧವು ಭಾರತ ಮತ್ತು ಪಾಕಿಸ್ತಾನದ ನಡುವಿನ ಎತ್ತರದ ಸಂಘರ್ಷವಾಗಿದ್ದು, ಜಮ್ಮು ಮತ್ತು ಕಾಶ್ಮೀರದ ಕಾರ್ಗಿಲ್ ಜಿಲ್ಲೆಯ ವಿಶ್ವಾಸಘಾತುಕ ಭೂಪ್ರದೇಶದಲ್ಲಿ ನಡೆಯಿತು. ಕಠಿಣ ಪರಿಸ್ಥಿತಿಗಳು ಮತ್ತು ಕಾರ್ಯತಂತ್ರದ ಅನಾನುಕೂಲತೆಯ ಹೊರತಾಗಿಯೂ, ಭಾರತೀಯ ಸೇನೆಯು ವಿಜಯಶಾಲಿಯಾಗಿ ಹೊರಹೊಮ್ಮಿತು, ಆಕ್ರಮಿತ ಪ್ರದೇಶಗಳನ್ನು ಮರಳಿ ಪಡೆಯಿತು. ಅಪಾರ ಶೌರ್ಯ ಮತ್ತು ತ್ಯಾಗದ ಮೂಲಕ ಸಾಧಿಸಿದ ಈ ಗೆಲುವು ನಮ್ಮ ಸಶಸ್ತ್ರ ಪಡೆಗಳ ಅದಮ್ಯ ಮನೋಭಾವಕ್ಕೆ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ನಿವೃತ್ತ ಯೋಧರಾದ ಎಂ.ಜೆ.ಬಸವರಾಜು, ಅನೀಲ್ ಕುಮಾರ್, ಟಿ.ಎನ್. ದಯಾನಂದ ಅವರುಗಳನ್ನು ಅಭಿನಂದಿಸಲಾಯಿತು. ಇದಕ್ಕೂ ಮೊದಲು ರೋಟರಿ ಕ್ಲಬ್ ವತಿಯಿಂದ ಪಟ್ಟಣದ ವಿವಿಧ ಬಡಾವಣೆ ಸೇರಿದಂತೆ ರಸ್ತೆಗಳಲ್ಲಿ ಪರಿಸರ ಗಿಡಗಳನ್ನು ನೆಟ್ಟು ಈ ಮೂಲಕ ವನ ಮಹೋತ್ಸವ ಆಚರಿಸಲಾಯಿತು.

ವಲಯ ಸೇನಾನಿ ನಾಗರಾಜ್ ಭಾವಿಕಟ್ಟಿ, ಕಾರ್ಯದರ್ಶಿ ಕೆ.ಆರ್. ಪುರುಷೋತ್ತಮ, ಖಜಾಂಚಿ ಅಶೋಕ್ ಕುಮಾರ್, ನಿರ್ದೇಶಕರಾದ ವೈ.ಬಿ. ಶಶಿಭೂಷಣ್, ಸಿ.ವಿ. ಮೋಹನ್ ಕುಮಾರ್, ನಿರ್ಗಮಿತ ಅಧ್ಯಕ್ಷರಾದ ಅರುಣ್ ಕುಮಾರ್, ಸದಸ್ಯರಾದ ಹೆಚ್.ಡಿ.ಮಂಜುನಾಥ್, ಎಂ.ಎನ್. ರವಿಕುಮಾರ್, ಜಿ.ಸುನಿಲ್ ಕುಮಾರ್, ವರದಯ್ಯ, ಸದಾನಂದಮೂರ್ತಿ, ಇಂಜಿನಿಯರ್ ಕುಮಾರ್, ರಾಘವೇಂದ್ರ, ಚಂದ್ರಶೇಖರರಾವ್ ಪಾಟೀಲಕರ್, ಸಂತೋಷ್ ಜಿಟಿ, ಯೋಗ ಗುರು ಗೋಪಾಲ್ ರಾಜ್ ಮೊದಲಾದವರು ಇದ್ದರು.

ಕರ್ನಾಟಕ ಭೂಷಣ ಪ್ರಶಸ್ತಿ ಪುರಸ್ಕೃತ ಆಲಗೂಡು ಡಾ.ಚಂದ್ರಶೇಖರ್, ಶಿವಶಂಕರ್‌ಮೂರ್ತಿಗೆ ಸನ್ಮಾನ

ತಿ.ನರಸೀಪುರ, ಜು.26– ಕರ್ನಾಟಕ ಮೀಡಿಯಾ ಕ್ಲಬ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕೊಡಮಾಡುವ ಕರ್ನಾಟಕ ಭೂಷಣ ಪ್ರಶಸ್ತಿಗೆ ಭಾಜನರಾದ ತಾಲೂಕಿನ ಆಲಗೂಡು ಗ್ರಾಮದ ದಲಿತ ಸಂಘರ್ಷ ಸಮಿತಿಯ ಮುಖ್ಯಸ್ಥ ಆಲಗೂಡು ಡಾ.ಚಂದ್ರಶೇಖರ್ ಹಾಗೂ ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರ ಮೂರ್ತಿ ಅವರನ್ನು ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್ ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಅಭಿನಂದಿಸಿದರು.



ಕರ್ನಾಟಕ ಭೂಷಣ ಪ್ರಶಸ್ತಿಗೆ ಭಾಜನರಾದ ಡಾ.ಆಲಗೂಡು ಚಂದ್ರಶೇಖರ್ ಹಾಗೂ ಎಂ.ವಿ.ಶಿವಶಂಕರಮೂರ್ತಿಯವರನ್ನು ಸನ್ಮಾನಿಸಲಾಯಿತು.

ಈ ವೇಳೆ ಮಾತನಾಡಿದ ಅವರು, ತಾಲೂಕಿನಲ್ಲಿ ಇಬ್ಬರು ಸಾಧಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಮ್ಮದೇ ಆದ ರೀತಿಯ ಜನಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಇವರ ಸೇವೆ ಗುರುತಿಸಿ ಅವರಿಗೆ ಪ್ರಶಸ್ತಿ ಹಾಗೂ ಹೆಚ್ಚಿನ ಅಧಿಕಾರ ನೀಡಲಾಗಿದೆ. ಮುಂದಿನ ದಿನಗಳಲ್ಲಿ ತಮಗೆ ದೊರಕಿರುವ ಪ್ರಶಸ್ತಿ ಹಾಗು ಅಧಿಕಾರವನ್ನು ಸದ್ಬಳಕೆ ಮಾಡಿಕೊಂಡು ಮತ್ತಷ್ಟು ಹೆಚ್ಚು ಜನಸೇವೆಗೆ ತಮ್ಮನ್ನು ಮೀಸಲಿಡುವ ಕೆಲಸವನ್ನೂ ಇಬ್ಬರು ಮಾಡಲಿ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸರ್ಕಾರಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಚಂದ್ರಶೇಖರ್ ಹಾಗೂ ಶಿವಶಂಕರ್ ಮೂರ್ತಿ ಪ್ರಶಸ್ತಿ ಮತ್ತು ಸನ್ಮಾನಗಳಿಂದ ನಮ್ಮ ಜವಾಬ್ದಾರಿ ಮತ್ತಷ್ಟು ಹೆಚ್ಚಿದೆ. ಹಾಗಾಗಿ ಮುಂದೆ ಮತ್ತಷ್ಟು ಜನಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡು ಉತ್ತಮ ಕಾರ್ಯ ನಿರ್ವಹಿಸುವುದಾಗಿ ತಿಳಿಸಿದರು. ಕಸಾಪ ಅಧ್ಯಕ್ಷ ಪುಟ್ಟಸ್ವಾಮಿ, ಕಾಂಗ್ರೆಸ್ ಮುಖಂಡ ಗೋವಿಂದರಾಜು, ಅಶ್ವಿನ್ ಕುಮಾರ್, ಚಂದ್ರು ಪ್ರಕಾಶ್, ರವಿ, ರಮೇಶ್, ಪತ್ರಿಕಾ ವಿತರಕ ಪುಟ್ಟರಾಜು, ಹರೀಶ್, ಸಿದ್ದರಾಜು ಸೇರಿದಂತೆ ಮತ್ತಿತರರಿದ್ದರು.

ಹಾಡಿಗಳ ಶಾಲಾ ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಣೆ



ಹೆಚ್.ಡಿ.ಕೋಟೆ: ತಾಲೂಕಿನ ನಾಗರಹೊಳೆ ಅರಣ್ಯದ ಡಿಬಿ ಗುಪ್ಪೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಗೋಳೂರು ಹಾಡಿ, ಹೊಸೂರು ಹಾಡಿ ಹಾಗೂ ಆನೆಮಾಳ ಹಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಮೈಸೂರಿನ ಶೈಲಜಾ ರಾಮಕೃಷ್ಣ ಚಾರಿಟಬಲ್ ಟ್ರಸ್ಟ್ ಆರ್‌ಜಿಎಚ್‌ಎಸ್ ಫೌಂಡೇಶನ್ ವತಿಯಿಂದ ವಿದ್ಯಾರ್ಥಿಗಳಿಗೆ ಬ್ಯಾಗ್‌ಗಳು, ಲೇಖನ ಸಾಮಗ್ರಿಗಳು ಹಾಗೂ ಲ್ಯಾಪ್‌ಟಾಪ್ ವಿತರಿಸಲಾಯಿತು.

ಬಳಿಕ ಟ್ರಸ್ಟ್‌ನ ಅಧ್ಯಕ್ಷೆ ಶೈಲಜಾ ರಾಮಕೃಷ್ಣ ಮಾತನಾಡಿ, ಕಳೆದ 2 ವರ್ಷಗಳಿಂದ ಹಾಡಿ ಭಾಗಗಳ ಶಾಲೆಯ ಅಭಿವೃದ್ಧಿ ಹಾಗೂ ಬುಡಕಟ್ಟು ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಅವರಿಗೆ ಟ್ರಸ್ಟ್‌ನ ವತಿಯಿಂದ ಸಾಧ್ಯವಾದಷ್ಟು ಪ್ರೋತ್ಸಾಹವನ್ನು ನೀಡುತ್ತಾ ಬರುತ್ತಿದ್ದು, ಪ್ರಸ್ತುತ ಸಾಲಿನಲ್ಲಿ ಹಾಡಿ ಶಾಲೆಯ ವಿದ್ಯಾರ್ಥಿಗಳಿಗೆ ಅನುಕೂಲಕ್ಕಾಗಿ ಬ್ಯಾಗ್‌ಗಳು, ಲೇಖನ ಸಾಮಗ್ರಿಗಳು, ಹಾಗೂ ಹೊಸೂರು ಹಾಡಿ ಶಾಲೆಗೆ ಲ್ಯಾಪ್‌ಟಾಪ್ ಸಾಮಗ್ರಿಗಳನ್ನು ಕೊಡುಗೆಯಾಗಿ ನೀಡಿದ್ದೇವೆ.

ಈ ಸಂದರ್ಭದಲ್ಲಿ ಟ್ರಸ್ಟ್‌ನ ಮುಖ್ಯ ಕಾರ್ಯದರ್ಶಿ ಹರೀಶ್ ಕುಮಾರ್, ನಿರ್ದೇಶಕರುಗಳಾದ ಶಿವಪ್ರಸಾದ್, ರಾಜೇಶ್, ಶೇಕರ್, ಸಿಆರ್‌ಪಿ ನಂಜಯ್ಯ, ಹಾಡಿ ಶಾಲೆಗಳ ಮುಖ್ಯ ಶಿಕ್ಷಕರು ಕಾರ್ತಿಕ್, ರಂಗಸ್ವಾಮಿ, ಮಹೇಶ್ ಬಾಬು, ಟ್ರಸ್ಟ್‌ನ ಮಾರ್ಗದರ್ಶಕರಾದ ಬಾಲಕೃಷ್ಣ, ಬಸವಯ್ಯ, ಸೇರಿದಂತೆ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಶಿಕ್ಷಕ ವರ್ಗದವರು, ವಿದ್ಯಾರ್ಥಿಗಳು, ಪೋಷಕರು ಹಾಜರಿದ್ದರು.

ಕನ್ನಿಕಾ ಪರಮೇಶ್ವರಿಗೆ ವಿಶೇಷ ಪೂಜೆ



ಟಿ.ನರಸೀಪುರ ಪಟ್ಟಣದ ಕನ್ನಿಕಾ ಪರಮೇಶ್ವರಿ ದೇವಾಲಯದಲ್ಲಿ ಮೊದಲನೇ ಶ್ರಾವಣ ಮಾಸದ ಪ್ರಯುಕ್ತ ಕನ್ನಿಕಾ ಪರಮೇಶ್ವರಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

ತರಗನಹಳ್ಳಿ ಡೇರಿಯಲ್ಲಿ ಅವ್ಯವಹಾರ ಆರೋಪ: ರೈತರ ಪ್ರತಿಭಟನೆ

ಮಲ್ಕುಂಡಿ: ನಂಜನಗೂಡು ತಾಲೂಕಿನ ತರಗನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ಸಾಮೂಹಿಕ ನಾಯಕತ್ವ ಹಸಿರು ಸೇನೆಯ ರೈತ ಸಂಘದ ಮುಖಂಡರು ಡೈರಿ ಮುಂಭಾಗ ಪ್ರತಿಭಟನೆ ನಡೆಸಿದರು.



ತರಗನಹಳ್ಳಿ ಡೇರಿಯಲ್ಲಿ ನಡೆದಿರುವ ಅವ್ಯವಹಾರವನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿರುವ ರೈತರು.

ಗ್ರಾಮದ ಮುಖಂಡ ಕೆ.ಟಿ.ನಟರಾಜ್ ಮಾತನಾಡಿ, ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಯು ಹಾಲು ಉತ್ಪಾದಕರಿಗೆ ಯಾವುದೇ ಬೋನಸ್ ನೀಡದೆ ಸುಮಾರು 2 ಕೋಟಿ ಹಣವನ್ನು ಲೂಟಿ ಮಾಡಿದೆ 20 ವರ್ಷದಿಂದ ಯಾವುದೇ ಲೆಕ್ಕಪತ್ರಗಳನ್ನು ನೀಡದೆ ಹಾಲು ಉತ್ಪಾದಕರಿಗೆ ವಂಚನೆ ಮಾಡಲಾಗಿದೆ.ಇದರ ಬಗ್ಗೆ ಸಂಬಂಧಪಟ್ಟ ಒಕ್ಕೂಟಕ್ಕೆ ತನಿಖೆಗಾಗಿ ಮನವಿ ಮಾಡಿದರೂ ಏನೂ ಪ್ರಯೋಜನವಾಗಿಲ್ಲ. ಅಧಿಕಾರಿಗಳೆ ಶಾಮೀಲಾಗಿರಬಹುದು ಎಂದು ರೈತರು ಆರೋಪಿಸಿದರು.

> ಹಾಲು ಉತ್ಪಾದಕರ ಸಂಘದಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ. ಒಕ್ಕೂಟದಲ್ಲಿ ತನಿಖೆ ನಡೆದು ಯಾವುದೇ ಭ್ರಷ್ಟಾಚಾರ ನಡೆದಿಲ್ಲ ಎಂದು ಮತ್ತೆ ನನಗೆ ಕಾರ್ಯ ನಿರ್ವಹಿಸಲು ಆದೇಶ ಪತ್ರ ನೀಡಲಾಗಿದೆ. –ಮಹೇಶ್, ಸಿಇಓ

ಭ್ರಷ್ಟಾಚಾರ ಮಾಡಿರುವ ಕಾರ್ಯನಿರ್ವಾಹಕಾಧಿಕಾರಿಯನ್ನು ಅಮಾನತು ಮಾಡಿ ಅವರ ಬಗ್ಗೆ ಯಾವುದೇ ತನಿಖೆ ನಡೆಸದೆ ಮತ್ತೆ ಅವರನ್ನು ಕಾರ್ಯನಿರ್ವಹಿಸಿ ಎಂದು ಒಕ್ಕೂಟದ ಅಧಿಕಾರಿಗಳು ಆದೇಶ ನೀಡಿದ್ದಾರೆ. ಇದರ ಬಗ್ಗೆ ಒಕ್ಕೂಟದ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಾಮೂಹಿಕ ನಾಯಕತ್ವದ ಹಸಿರು ಸೇನೆಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ಮಂಜು ಕಿರಣ್ ಮಾತನಾಡಿ, ಗ್ರಾಮದಲ್ಲಿ ರೈತರು ಕಷ್ಟ ಪಟ್ಟು ಹಸುಗಳನ್ನು ಸಾಕಿ ಅವರ ಜೀವನಕ್ಕಾಗಿ ಹಾಲನ್ನು ಶೇಖರಣೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ ರೈತರ ಹಣ ಲೂಟಿ ಮಾಡುವುದು ಸರಿಯಲ್ಲ. ಗ್ರಾಮದ ಹಾಲು ಉತ್ಪಾದಕರ ಸಂಘದಲ್ಲಿ 2 ಕೋಟಿ ಗುಳುಂ ಮಾಡಿರುವ ಆಡಳಿತ ಮಂಡಳಿಯನ್ನು ತಕ್ಷಣ ವಜಾಗೊಳಿಸಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಬಸವರಾಜ್, ಶಿವಪ್ಪ ರೈತ ಸಂಘದ ಗ್ರಾಮ ಘಟಕದ ಅಧ್ಯಕ್ಷ ರಾಜಪ್ಪ, ಬಸವರಾಜಪ್ಪ, ಚನ್ನಪಾಜಿನಾಯಕ, ಶಿವಕುಮಾರ್, ಬಸವರಾಜ್, ಗಿರೀಶ್, ಮಹೇಶ್, ಹರೀಶ್, ಕುಮಾರ್, ಚಾಮರಾಜು, ನಂಜುಂಡ, ನಾಗರಾಜು ಸೇರಿದಂತೆ ಹಲವು ರೈತರು ಹಾಜರಿದ್ದರು.

ಗಾವಡಗೆರೆ ಆಸ್ಪತ್ರೆಯಲ್ಲಿ ನೀರಿಲ್ಲದೆ ರೋಗಿಗಳ ಪರದಾಟ

ಹುಣಸೂರು, ಜು.26– ತಾಲೂಕಿನ ಗಾವಡಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಳೆದ 15 ದಿನಗಳಿಂದ ಕುಡಿಯುವ ನೀರಿಲ್ಲದೆ ರೋಗಿಗಳು ಹಾಗೂ ಸಿಬ್ಬಂದಿಗಳು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಗಾವಡಗೆರೆ ನಿವಾಸಿ ಟಿ.ಎಸ್ ಸುಬ್ಬರಾವ್ ಘಾಟ್ಕೆ ಅವರು ತಮ್ಮ ಮಗ ದೌಲತ್ ರಾವ್ ಘಾಟ್ಕೆ ಅವರ ಹೆಸರಿನಲ್ಲಿ ಈ ಆಸ್ಪತ್ರೆ ಕಟ್ಟಡ ನಿರ್ಮಿಸಲು ತಮಗೆ ಸೇರಿದ ಸ್ವತ್ತನ್ನು ದಾನವಾಗಿ ನೀಡಿದ್ದು 1957ರಲ್ಲಿ ಸ್ಥಾಪನೆಗೊಂಡ ದೌಲತ್ ರಾವ್ ಮೆಮೋರಿಯಲ್ ಆಸ್ಪತ್ರೆ ಎಂಬ ಹೆಸರಿನಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಾರ್ಯನಿರ್ವಹಿಸುತ್ತಿದ್ದು, ಸರಿಯಾದ ಮೂಲಭೂತ ಸೌಲಭ್ಯಗಳಿಲ್ಲದೆ ರೋಗಿಗಳು ಹಾಗೂ ಸಿಬ್ಬಂದಿಗಳು ಪರದಾಡುವಂತಾಗಿದೆ.

ಕಳೆದ 15 ದಿನಗಳಿಂದಲೂ ಕುಡಿಯುವ ನೀರಿನ ಸರಬರಾಜು ಇಲ್ಲದೆ ಚಿಕಿತ್ಸೆಗೆಂದು ಬರುವ ರೋಗಿಗಳು, ಗರ್ಭಿಣಿಯರು, ಬಾಣಂತಿಯರು ಬಹಳ ಕಷ್ಟಪಡುತ್ತಿದ್ದಾರೆ. ಈ ಬಗ್ಗೆ ಗ್ರಾಮ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿಗೆ ಆಸ್ಪತ್ರೆ ವೈದ್ಯಾಧಿಕಾರಿಗಳು ಮನವಿ ಸಲ್ಲಿಸಿದರು ಯಾವುದೇ ಕ್ರಮ ಕೈಗೊಂಡಿಲ್ಲ. ಆಸ್ಪತ್ರೆಯಲ್ಲಿನ ಈ ಅವ್ಯವಸ್ಥೆಗೆ ತಾಲೂಕಿನ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಕಾರ್ಯವೈಖರಿ ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಕೂಡಲೆ ಪಂಚಾಯತಿ ವತಿಯಿಂದ ಸಮರ್ಪಕವಾಗಿ ನೀರು ಸರಬರಾಜು ಮಾಡುವಂತೆ ಹಾಗೂ ಆಸ್ಪತ್ರೆಗೆ ಸಂಬಂಧಪಟ್ಟ ಕೊಳವೆಬಾವಿಯನ್ನು ರಿಪೇರಿ ಮಾಡಿಸಬೇಕು, ಆಸ್ಪತ್ರೆಗೆ ಶುದ್ಧ ಕುಡಿಯುವ ನೀರು ಸರಬರಾಜು ಮತ್ತು ಸಾರ್ವಜನಿಕ ನಲ್ಲಿಯನ್ನು ರಿಪೇರಿ ಪಡಿಸಿಕೊಡಬೇಕು. ಆಸ್ಪತ್ರೆ ಆವರಣದ ವಾಹನ ನಿಲುಗಡೆ ಸ್ಥಳವನ್ನು ಕಾಂಕ್ರೀಟ್ ಮಾಡಿಕೊಡಬೇಕು ಎಂದು ಸಾರ್ವಜನಿಕರು ತಾಲೂಕು ಆಡಳಿತವನ್ನು ಒತ್ತಾಯಿಸಿದ್ದಾರೆ.

ಆಸ್ಪತ್ರೆಯಲ್ಲಿನ ನೀರಿನ ವ್ಯವಸ್ಥೆಯನ್ನು ಸಮರ್ಪಕಗೊಳಿಸದಿದ್ದಲ್ಲಿ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಗ್ರಾಮಸ್ಥರು ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಸೇರಿ ಪ್ರತಿಭಟನೆ ಕೈಗೊಂಡು ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಎಚ್ಚರಿಸಿದ್ದಾರೆ.

ಸುತ್ತೂರಲ್ಲಿ ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮ

ನಂಜನಗೂಡು: ಪ್ರಕೃತಿಯು ಮನುಷ್ಯನಿಗೆ ಎಲ್ಲ ರೀತಿಯಿಂದಲೂ ಪಾಠವನ್ನು ಕಲಿಸುವುದರಿಂದ, ಪ್ರಕೃತಿಯನ್ನು ಸಹ ಗುರುವಿನ ರೂಪದಲ್ಲಿ ಕಾಣಲಾಗುತ್ತದೆ ಎಂದು ಪ್ರಾಧ್ಯಾಪಕರಾದ ಹೆಚ್.ಬಿ. ದೇವಣ್ಣ ಹೇಳಿದರು.



ತಾಲೂಕಿನ ಸುತ್ತೂರು ಕ್ಷೇತ್ರದಲ್ಲಿ ನಡೆದ ಶ್ರಾವಣಮಾಸದ ಪ್ರವಚನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗುರುವಿನಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಕಾಣುತ್ತೇವೆ, ನಿಷೇಧ, ಕಾಮ್ಯ, ಸೂಚಕ, ವಾಚಕ, ಕಾರಕ ಮತ್ತು ವಿಧಿತ ಎಂಬ ಆರು ವಿಧಗಳಲ್ಲಿ ಗುರುವಿನ ಸ್ವರೂಪವಿದೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ ಪುರಂದರದಾಸರ ಮಾತು ಸಾರ್ವಕಾಲಿಕ ಸತ್ಯವಾದುದು. ಗುರು ದೇವೋಭವ ಎಂಬಂತೆ ಅವರು ದೇವರಿಗೆ ಸಮಾನ ಎಂದು ಭಾವಿಸಲಾಗಿದೆ. ಪ್ರತಿಯೊಬ್ಬರ ಬದುಕಿನಲ್ಲೂ ಗುರುವಿಗೆ ಪವಿತ್ರವಾದ ಸ್ಥಾನವಿದೆ. ಮನಸ್ಸೂ ಸಹ ಗುರುವಿನ ಒಂದು ರೂಪವಾಗಿದೆ. ತಂದೆ–ತಾಯಿ ಮತ್ತು ಗುರು ಬದುಕನ್ನು ರೂಪಿಸುವ ಪ್ರಮುಖ ಶಕ್ತಿಗಳು. ಇನ್ನೊಬ್ಬರ ಬಾಳಿನಲ್ಲಿ ಜ್ಞಾನದ ದೀವಿಗೆ ಹಚ್ಚುವವನೇ ಗುರು. ಗುರುವು ಶಿಷ್ಯನಿಗೆ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಶೈಕ್ಷಣಿಕ – ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಮಾರ್ಗವನ್ನು ತೋರಿಸುತ್ತಾನೆ, ಗುರುವಿನ ಮಾರ್ಗದರ್ಶನದಲ್ಲಿ ಅಂತರಂಗದ ಸಾಧನೆಗೆ ಒತ್ತು ನೀಡಬೇಕು ಎಂದು ತಿಳಿಸಿದರು.

ಮೀನುಗಾರಿಕೆ ಇಲಾಖೆ ಸೌಲಭ್ಯ ಪಡೆದು ಕಸುಬನ್ನು ಉತ್ತಮಪಡಿಸಿಕೊಳ್ಳಲು ಕರೆ

ಹೆಚ್.ಡಿ.ಕೋಟೆ: ಮೀನುಗಾರಿಕೆ ಇಲಾಖೆಯಿಂದ ಸಿಗುವ ಸೇವಾ ಸೌಲಭ್ಯಗಳನ್ನು ಪಡೆದುಕೊಂಡು ಮೀನು ಸಾಕಾಣಿಕೆಯ ಕಸುಬನ್ನು ಉತ್ತಮಪಡಿಸಿಕೊಳ್ಳಿ ಎಂದು ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕ ಶ್ರೀನಿವಾಸ್ ತಿಳಿಸಿದರು.

ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಮೀನುಗಾರಿಕೆ ತರಬೇತಿ ಕೇಂದ್ರದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರ, ಟೈಟನ್ ಕಂಪನಿ ಲಿಮಿಟೆಡ್ ಹಾಗೂ ಮೀನುಗಾರಿಕೆ ಇಲಾಖೆ ಸಹಯೋಗದಲ್ಲಿ ನಡೆದ ಮೀನು ಸಾಕಾಣಿಕಾ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೀನುಗಾರಿಕೆ ಮತ್ತು ಮೀನು ಸಾಕಾಣಿಕೆಗೆ ಬೇಕಾದ ಬೆಂಬಲವನ್ನು ಇಲಾಖೆಯ ವತಿಯಿಂದ ನೀಡಲಾಗುವುದು ಹಾಗೂ ಸ್ವಾಮಿ ವಿವೇಕಾನಂದ ಯೂತ್‌ಮೂವ್‌ಮೆಂಟ್ ವತಿಯಿಂದ ಉತ್ತಮವಾದ ಸಮುದಾಯ ಅಭಿವೃದ್ಧಿ ತರಬೇತಿಯನ್ನು ನೀಡಲಾಗುತ್ತಿರುವುದು ಉತ್ತಮ ಸೇವೆ ಎಂದರು.

ಎಲ್ಲಾ ರೈತರು, ಯುವಕರು ಇದರ ಸದುಪಯೋಗಪಡಿಸಿಕೊಂಡು ತಮ್ಮ ಆರ್ಥಿಕ ಬೆಳವಣಿಗೆಯನ್ನು ಹೆಚ್ಚು ಮಾಡಿಕೊಳ್ಳಬೇಕೆಂದು ತಿಳಿಸಿದರು.



ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಮೀನುಗಾರಿಕೆ ತರಬೇತಿ ಕೇಂದ್ರದಲ್ಲಿ ಮೀನು ಸಾಕಾಣಿಕಾ ತರಬೇತಿ ಕಾರ್ಯಕ್ರಮ ಉದ್ಘಾಟಿಸುತ್ತಿರುವ ಗಣ್ಯರು.

ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಸಾಮಾಜಿಕ ಆರ್ಥಿಕ ಸಬಲೀಕರಣ ವಿಭಾಗದ ಹಿರಿಯ ವ್ಯವಸ್ಥಾಪಕ ಪಿ.ಡಿ ನಾಯಕ್ ಮಾತನಾಡಿ, ನಮ್ಮ ಸಂಸ್ಥೆಯ ವತಿಯಿಂದ ಸಮುದಾಯ ಮಟ್ಟದಲ್ಲಿ ಹಾಗೂ ಸಾಂಸ್ಥಿಕವಾಗಿ ಸುಮಾರು 21 ತರಹದ ಕೌಶಲ ತರಬೇತಿ ನೀಡಲಾಗುತ್ತಿದೆ. ಈ ದಿನ ಬೀಚನಹಳ್ಳಿ ಮೀನುಗಾರಿಕೆ ಇಲಾಖೆ ಸಹಯೋಗದಲ್ಲಿ ಮೀನು ಸಾಕಾಣಿಕೆ ತರಬೇತಿಯನ್ನು ನೀಡಲಾಗುತ್ತಿದ್ದು ಈ ತರಬೇತಿಯಿಂದ ಮೀನು ಸಾಕಾಣಿಕೆಯಲ್ಲಿ ಆಸಕ್ತಿ ಇರುವವರಿಗೆ ಹಾಗೂ ಈಗಾಗಲೇ ಮೀನುಕೃಷಿ ಮಾಡುತ್ತಿರುವವರಿಗೆ ಉತ್ತಮ ರೀತಿಯಲ್ಲಿ ಮೀನು ಸಾಕಾಣಿಕೆ ಮಾಡುವ ವಿಧಾನಗಳನ್ನು ತಿಳಿದುಕೊಳ್ಳುವ ಮೂಲಕ ಸರ್ಕಾರದಿಂದ ಸಿಗುವ ಸೇವಾ ಸೌಲಭ್ಯಗಳ ಬಗ್ಗೆ ತಿಳಿದು ಅದನ್ನು ಬಳಸಿಕೊಂಡು ಮುಂದಿನ ದಿನಗಳಲ್ಲಿ ಅದನ್ನು ಉತ್ತಮ ರೀತಿಯಲ್ಲಿ ಮಾಡಲು ಅನುಕೂಲವಾಗುತ್ತಿದೆ. ತರಬೇತಿ ಪಡೆದು ಮೀನು ಸಾಕಾಣಿಕೆ ಮಾಡಲು ಆಸಕ್ತಿ ಇರುವ ರೈತರಿಗೆ ಮೀನು ಮರಿಗಳನ್ನು ಖರೀದಿಸಲು ಸಂಸ್ಥೆಯ ವತಿಯಿಂದ ಬೆಂಬಲ ನೀಡಲಾಗುವುದು ಎಂದರು.


ಪಿಡಿಓ ಪ್ರಭಾಕರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ತಾಲೂಕು ಮೀನುಗಾರಿಕೆ ಸಂಘದ ಅಧ್ಯಕ್ಷ ಬೆಟ್ಟನಾಯಕ, ಉಪಾಧ್ಯಕ್ಷ ಸೋಮಣ್ಣ, ನಿಂಗನಾಯಕ, ಚಿಕ್ಕಣ್ಣ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಣ್ಣಸೋಮನಾಯಕ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ವಸ್ಥಾಪಕ ಚಿನ್ನಮಹದೇವ, ಸಂಯೋಜಕ ಶಿವಲಿಂಗನಾಯಕ, ಉಮಾ ಕೀರ್ತಿ, ಸಿಬ್ಬಂದಿಗಳಾದ ರಂಗಸ್ವಾಮಿ, ಸುಂದ್ರನಾಯಕ, ಸ್ವಾಮಿ ಹಾಗೂ ಮೀನು ಸಾಕಾಣಿಕೆ ಆಶಕ್ತಿ ಹೊಂದಿರುವ ವಿವಿಧ ಹಳ್ಳಿಗಳಿಂದ ಆಗಮಿಸಿದ ರೈತರು ಭಾಗವಹಿಸಿದ್ದರು.

ಭೀಮನ ಅಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜೆ



ಬನ್ನೂರು ಪಟ್ಟಣದ ಸಮೀಪದ ಗೊರವನಹಳ್ಳಿ ಗ್ರಾಮದಲ್ಲಿರುವ ಆದಿಶಕ್ತಿ ಪೀಠದಲ್ಲಿ ಭೀಮನ ಅಮಾವಾಸ್ಯೆ ಪ್ರಯುಕ್ತ ಆದಿ ಅಮ್ಮನವರಿಗೆ ವಿಶೇಷ ಪೂಜೆ, ಅಲಂಕಾರ ಮಾಡಲಾಗಿತ್ತು. ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ರೈತ ಸಂಘದ ತಾಲೂಕು ಅಧ್ಯಕ್ಷ ಸೀಹಳ್ಳಿ ರವಿಯವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು.

ಈಶ್ವರೇಗೌಡ ನಿಧನ



ಕೆ.ಆರ್.ನಗರ: ಕೆ.ಆರ್.ನಗರ ತಾಲೂಕಿನ ಅರ್ಜುನಹಳ್ಳಿ ಗ್ರಾಮದ ನಿವೃತ್ತ ಪೋಸ್ಟ್ ಮಾಸ್ಟರ್ ಈಶ್ವರೇಗೌಡ(70) ವಯೋಸಹಜ ಕಾಯಿಲೆಯಿಂದ ಸ್ವಗ್ರಾಮದಲ್ಲಿ ನಿಧನರಾದರು. ಪತ್ನಿ ಹಾಗೂ ಓರ್ವ ಪುತ್ರ ಇದ್ದಾರೆ. ಅಂತ್ಯಕ್ರಿಯೆಯು ಸ್ವಗ್ರಾಮ ಅರ್ಜುನಹಳ್ಳಿಯಲ್ಲಿ ನೆರವೇರಿಸಲಾಯಿತು.

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪದವಿ ಪ್ರದಾನ

ಸಮಯಪ್ರಜ್ಞೆ, ಆತ್ಮವಿಶ್ವಾಸ, ಆಧ್ಯಾತ್ಮಿಕತೆ ಜೀವನದಲ್ಲಿ ಅವಶ್ಯ

ಆದಿಚುಂಚನಗಿರಿ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಡಾ ಎಂ.ಎ.ಶೇಖರ್ ಪದವೀಧರರಿಗೆ ಕಿವಿಮಾತು



ಮಹಾಜನ ವಿದ್ಯಾಸಂಸ್ಥೆಯ ಮಹಾಜನ ಪ್ರಥಮ ದರ್ಜೆ ಕಾಲೇಜಿ (ಸ್ವಾಯತ್ತ)ನಲ್ಲಿ 2023–24ನೇ ಶೈಕ್ಷಣಿಕ ಸಾಲಿನ 4ನೇ ಪದವಿ ಪ್ರದಾನ ಸಮಾರಂಭವನ್ನು ಅಬ್ದುಲ್ ಕಲಾಂ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಮೈಸೂರು, ಜು. 26– ಮಹಾಜನ ವಿದ್ಯಾಸಂಸ್ಥೆಯ ಮಹಾಜನ ಪ್ರಥಮ ದರ್ಜೆ ಕಾಲೇಜಿ (ಸ್ವಾಯತ್ತ)ನಲ್ಲಿ 2023–24ನೇ ಶೈಕ್ಷಣಿಕ ಸಾಲಿನ 4ನೇ ಪದವಿ ಪ್ರದಾನ ಸಮಾರಂಭವನ್ನು ಅಬ್ದುಲ್ ಕಲಾಂ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿದ್ದ ಆದಿಚುಂಚನಗಿರಿ ವಿವಿ ವಿಶ್ರಾಂತ ಕುಲಪತಿ ಡಾ. ಎಂ.ಎ.ಶೇಖರ್ ರ್‍ಯಾಂಕ್ ವಿಜೇತ ಪದವೀಧರರಿಗೆ ಪದಕ ಮತ್ತು ನಗದು ಪುರಸ್ಕಾರ ನೀಡಿ ಅಭಿನಂದಿಸಿದರು.

ಈ ವೇಳೆ ಮಾತನಾಡಿದ ಅವರು, ನಮ್ಮ ಹಿರಿಯರಿಗೆ ಭಕ್ತಿಯಿಂದ ನಮಸ್ಕಾರ ಮಾಡಬೇಕು. ದೊಡ್ಡವರನ್ನು ನೋಡಿದಾಗ ನಮಸ್ಕಾರ ಮಾಡುವುದು ಒಳ್ಳೆಯದು. ಮೊಗದಲ್ಲಿ ಯಾವಾಗಲೂ ನಗುವಿರಬೇಕು. ಅದು ಆರೋಗ್ಯಕ್ಕೆ ಮುಖ್ಯ. ನಮ್ಮ ಮೊದಲ ದೇವರು ತಂದೆ–ತಾಯಿಯಾದರೆ ನಂತರದ ಸ್ಥಾನದಲ್ಲಿ ಗುರುಗಳು ಬರುತ್ತಾರೆ. ಒಟ್ಟಾರೆ ದೇವರ ಸ್ಥಾನದಲ್ಲಿ ತಂದೆ–ತಾಯಿಗಳು, ಗುರುಗಳು ನಿಲ್ಲುತ್ತಾರೆ ಎಂದು ಕಿವಿಮಾತು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಮಾತನಾಡಿ, ಮಹಾಜನ ಸಂಸ್ಥೆಗೆ ಬರುವುದು ಎಂದರೆ, ನನ್ನ ಮನೆಗೆ ಬಂದಂತೆ ಅನುಭವವಾಗುತ್ತದೆ. ನನ್ನ ಮೊದಲ ವೃತ್ತಿಯನ್ನು ಇಲ್ಲೇ ಆರಂಭಿಸಿದ್ದು ಸ್ಮರಣೀಯ. ಪದವಿ ಮುಗಿದ ತಕ್ಷಣ ಕಲಿಕೆ ನಿಲ್ಲುವುದಿಲ್ಲ. ಇಲ್ಲಿಂದ ಬದುಕು ಆರಂಭವಾಗುತ್ತದೆ. ಪ್ರತಿ ದಿನ ಹೊಸ ವಿಚಾರಗಳನ್ನು ಕಲಿಯುತ್ತಾ ಹೋಗಬೇಕು. ಕೆಲಸ ಮಾಡುವ ಹಂಬಲವಿದ್ದರೆ, ನಿರುತರವಾಗಿ ಕೆಲಸ ಸಿಗುತ್ತಲೇ ಹೋಗುತ್ತದೆ ನೀವು ಬೆಳೆಯುತ್ತಾ ಹೋಗುತ್ತೀರಾ. ಹಿರಿಯರ ಅನುಭವದ ಮಾತುಗಳನ್ನು ಅಳವಡಿಸಿಕೊಂಡರೆ ಬದುಕನ್ನು ಸುಗಮವಾಗಿ ನಡೆಸಲು ಸಾಧ್ಯವಾಗುತ್ತದೆ ಎಂದರು.

ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರುಳೀಧರ್ ಭಾಗವತ್, ಸಮಾರಂಭದ ಅಧ್ಯಕ್ಷತೆ ವಹಿಸಿ ಪದವೀಧರರಿಗೆ ಶುಭಹಾರೈಸಿ, 95% ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನಮ್ಮ ಸಂಸ್ಥೆಯಲ್ಲಿ ಉಚಿತ ಶಿಕ್ಷಣವನ್ನು ನೀಡಲಾಗುತ್ತಿದೆ ಎಂದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಪದವಿ ಪಡೆದ ಮಾತ್ರಕ್ಕೆ ಕಲಿಕೆ ಇಲ್ಲಿಗೆ ನಿಲ್ಲುವುದಿಲ್ಲ, ಅದು ನಿರಂತರವಾದದ್ದು ಎಂದು ನುಡಿದರು.

2023–24ರ ಶೈಕ್ಷಣಿಕ ವರ್ಷದ ಸ್ನಾತಕ ಪದವಿ ವಿಭಾಗದ ಬಿ.ಎ, ಬಿ.ಕಾಂ., ಬಿಬಿಎ, ಬಿಸಿಎ, ಬಿಎಸ್ಸಿ ಹಾಗೂ ಬಿಬಿಎ (ಹೋಟೆಲ್ ಅಂಡ್ ಹಾಸ್ಪಿಟಾಲಿಟಿ, ಎವಿಯೇಷನ್ ಮತ್ತು ಇಂಟರ್‌ನ್ಯಾಷನಲ್ ಟೂರಿಸಂ) ಪ್ರೋಗ್ರಾಂಗಳ ಒಟ್ಟು 288 ವಿದ್ಯಾರ್ಥಿಗಳು (ಹುಡುಗರು–116 ಹುಡುಗಿಯರು–172) ಪದವಿ ಪಡೆದರು. 226 ವಿದ್ಯಾರ್ಥಿಗಳು ಉನ್ನತ ಶ್ರೇಣಿ (Distinction) ಹೊಂದಿದ್ದು, 59 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು, 29 ವಿದ್ಯಾರ್ಥಿಗಳು ಪದಕದೊಂದಿಗೆ ನಗದು ಬಹುಮಾನವನ್ನು ಪಡೆದರು.

ಸ್ನಾತಕೋತ್ತರ ಪದವಿ ವಿಭಾಗದ ಎಂಬಿಎ, ಎಂಸಿಎ, ಎಂ.ಕಾಂ, ಎಂಎಸ್‌ಡಬ್ಲ್ಯೂ, ಎಂಎಸ್ಸಿ ಕೆಮಿಸ್ಟ್ರಿ, ಎಂ.ಎಸ್ಸಿ ಬಯೋಕೆಮಿಸ್ಟ್ರಿ, ಎಂ.ಎಸ್ಸಿ ಬಯೋಟೆಕ್ನಾಲಜಿ, ಎಂಎಸ್ಸಿ ಮೈಕ್ರೋಬಯಾಲಜಿ ಹಾಗೂ ಎಂಎಸ್ಸಿ ಕಂಪ್ಯೂಟರ್ ಸೈನ್ಸ್ ಸೇರಿದಂತೆ 9 ಪ್ರೋಗ್ರಾಂಗಳ ಒಟ್ಟು 337 ವಿದ್ಯಾರ್ಥಿಗಳಿಗೆ (ಹುಡುಗರು–173 ಹುಡುಗಿಯರು–164) ಪದವಿ ಪ್ರದಾನ ಮಾಡಲಾಯಿತು. 81 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ (Distinction), 236 ವಿದ್ಯಾರ್ಥಿಗಳು ಪ್ರಥಮದರ್ಜೆಯಲ್ಲಿ ಉತ್ತೀರ್ಣರಾಗಿದ್ದು, 18 ವಿದ್ಯಾರ್ಥಿಗಳಿಗೆ ಪದಕ ಹಾಗೂ ನಗದು ಬಹುಮಾನವನ್ನು ನೀಡಿ, 4 ವಿದ್ಯಾರ್ಥಿಗಳಿಗೆ ದತ್ತಿ ನಗದು ಬಹುಮಾನವನ್ನು ವಿತರಿಸಲಾಯಿತು.

ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಡೀನ್ ಡಾ. ಶ್ರೀಧರ, ನ್ಯಾಕ್ ಸಂಯೋಜಕರಾದ ಶ್ರೀಮತಿ ಗೀತಾ ಡಿ ಮತ್ತು ಇಂಗ್ಲಿಷ್ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಭ್ರಮರ ಉಡುಪ ಅವರು ಅತಿಥಿಗಳನ್ನು ಪರಿಚಯಿಸಿದರು. ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಡಾ. ಸಿ.ಕೆ. ರೇಣುಕಾರ್ಯ, ಮಹಾಜನ ವಿದ್ಯಾಸಂಸ್ಥೆಯ ಉಪಾಧ್ಯಕರಾದ ರವಿಕುಮಾರ್ ಬಿ ಎಸ್, ಮಹಾಜನ ವಿದ್ಯಾಸಂಸ್ಥೆಯ ಖಜಾಂಚಿ ವಿಜಯಕುಮಾರ್, ಆಡಳಿತಾಧಿಕಾರಿಗಳಾದ ಪ್ರೊ. ಪಿ. ಸರೋಜಮ್ಮ, ಶೈಕ್ಷಣಿಕ ಸಲಹೆಗಾರರು ಹಾಗೂ ಕಾರ್ಯನಿರ್ವಹಣಾಧಿಕಾರಿಗಳಾದ ಡಾ. ಎಸ್.ಆರ್. ರಮೇಶ್, ಕಾರ್ಯಕ್ರಮದ ಸಂಚಾಲಕರಾದ ಡಾ ಎಚ್.ಆರ್. ತಿಮ್ಮೇಗೌಡ, ಅಧ್ಯಾಪಕರು, ಅಧ್ಯಾಪಕೇತರರು, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದಮ್ಮುಂಟೆ ಕಾಸ್ಕೊ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸೈಯಾರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಜೂನಿಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ಮಾರೀಚನ್ (ತ)	4 ಪ್ರದರ್ಶನಗಳು
ಸಂಗಂ	
ಹರಿಹರ ವೀರಮಲ್ಲು (ತೆ)	4 ಪ್ರದರ್ಶನಗಳು
ಲಿಡೋ	
ತಲೈವನ್ ತಲೈವಿ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪಿಂಚಣಿ ಯೋಜನೆ ಪರಿಷ್ಕರಣೆ ಖಂಡಿಸಿ ಪ್ರತಿಭಟನಾ ಮೆರವಣಿಗೆ



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಹೊಸ ಜಿಲ್ಲಾಧಿಕಾರಿ ಕಚೇರಿ ಬಳಿ ಕರ್ನಾಟಕ ರಾಜ್ಯ ನಿವೃತ್ತ ಸರ್ಕಾರಿ ನೌಕರರ ಸಂಘದ ಸದಸ್ಯರು ಹಳೆ ಪಿಂಚಣಿ ವ್ಯವಸ್ಥೆ ಮುಂದುವರೆಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ಮೈಸೂರು, ಜು.26(ಎಂಟಿವೈ)– ಕೇಂದ್ರ ಸರ್ಕಾರ ಪಿಂಚಣಿ ಯೋಜನೆಯನ್ನು ಪರಿಷ್ಕರಣೆ ಮಾಡಲು ಮುಂದಾಗಿರುವ ಕ್ರಮ ಖಂಡಿಸಿ ಹಾಗೂ ಹಳೆ ಪಿಂಚಣಿ ವ್ಯವಸ್ಥೆ ಮುಂದುವರೆಸುವಂತೆ ಆಗ್ರಹಿಸಿ ಮೈಸೂರಲ್ಲಿ ಕರ್ನಾಟಕ ರಾಜ್ಯ ನಿವೃತ್ತ ಸರ್ಕಾರಿ ನೌಕರರ ಸಂಘದ ಸದಸ್ಯರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮೈಸೂರಿನ ಹಳೆ ಹಾಲಿನ ಡೈರಿ ಬಳಿಯಿರುವ ಶಿಕ್ಷಕರ ಭವನದಿಂದ ಸಿದ್ಧಾರ್ಥನಗರದಲ್ಲಿರುವ ಹೊಸ ಜಿಲ್ಲಾಧಿಕಾರಿ ಕಚೇರಿವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿ ಕಚೇರಿ ಬಳಿ ಧರಣಿ ನಡೆಸಿದರು.

ಕೇಂದ್ರ ಸರ್ಕಾರ ಪಿಂಚಣಿ ಯೋಜನೆ ಪರಿಷ್ಕರಣೆ ಮಾಡಲು ಮುಂದಾಗಿದೆ. ಇದು ಅವೈಜ್ಞಾನಿಕ ಕ್ರಮವಾಗಿದೆ. ಪಿಂಚಣಿ ಪಡೆಯುವುದು ನಿವೃತ್ತ ನೌಕರರ ಹಕ್ಕಾಗಿದೆ. ಅದು ಕೇಂದ್ರ ಸರ್ಕಾರದ ನಿರ್ಧಾರವಲ್ಲ. ಪಿಂಚಣಿ ಹಣ ದಾನದ ಹಣವಲ್ಲ. ಹಾಗಾಗಿ ಯಾವುದೇ ಕಾರಣಕ್ಕೂ ಪಿಂಚಣಿ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ಪರಿಷ್ಕರಣೆ ಮಾಡಬಾರದು ಎಂದು ಆಗ್ರಹಿಸಿದರು.

ಪಿಂಚಣಿ ಹಣ ನೌಕರರ ಶ್ರಮದ ಉಳಿತಾಯದ ಹಣವಾಗಿದೆ. ಈ ಹಿನ್ನೆಲೆಯಲ್ಲಿ ಹಾಲಿಯಿರುವ ವ್ಯವಸ್ಥೆಯನ್ನೇ ಮುಂದುವರೆಸಬೇಕು. ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ 200ಕ್ಕೂ ಹೆಚ್ಚು ಮಂದಿ ನಿವೃತ್ತ ನೌಕರರು ಪಾಲ್ಗೊಂಡಿದ್ದರು.

ಶಾಂತಚಿತ್ತವಾಗಿ ಕುಳಿತಿರುವ ಬಸವಣ್ಣನವರ ಪ್ರತಿಮೆಗಳಿಗೆ ಹೆಚ್ಚು ಆದ್ಯತೆ ನೀಡಿದರೆ ಚೆನ್ನ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಅಭಿಪ್ರಾಯ


'ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಪ್ರವಚನ' ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಉದ್ಘಾಟಿಸಿದರು.

ಮೈಸೂರು, ಜು.26(ಎಸ್‌ಪಿಎನ್)– ಅಣ್ಣ ಬಸವಣ್ಣನವರನ್ನು ಪ್ರಸ್ತುತ ರಾಜಪ್ರಭುತ್ವದ ವೇಷಭೂಷಣ ಕೆತ್ತನೆಯ ಪ್ರತಿಮೆಯನ್ನು ನೋಡಲು ಎಲ್ಲರೂ ಇಷ್ಟಪಡುತ್ತಾರೆ. ಈ ಕುರಿತು ಸಾರ್ವಜನಿಕವಾಗಿ ಆತ್ಮಾವಲೋಕನವಾಗಬೇಕಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಚರ್ಚೆಗೆ ನಾಂಧಿ ಹಾಡಿದರು.

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ಆಯೋಜಿಸಿದ್ದ 'ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಪ್ರವಚನ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಣ್ಣ ಬಸವಣ್ಣರ ಪ್ರತಿಮೆ ವಿಚಾರವಾಗಿ ಬಹುತೇಕರು ಕುದುರೆ ಮೇಲೆ ಕುಳಿತಿರುವ, ವೈಭವೋಪೇತ ವೇಷಭೂಷಣ ದಾರಿಯಾಗಿರುವ ಬಸವಣ್ಣರ ಪ್ರತಿಮೆಯನ್ನು ಇಷ್ಟಪಡುತ್ತಾರೆ. ವಾಸ್ತವವಾಗಿ ಅದು ಅರ್ಥಗರ್ಭಿತವಲ್ಲ ಎಂದರು.

ಬಸವಣ್ಣನವರು ತಮ್ಮ ಜೀವಿತಾವಧಿಯಲ್ಲಿ ಸಾಮಾಜಿಕ ಬದಲಾವಣೆಗೆ ವಚನ ಚಳವಳಿ ಕಟ್ಟಿದರು. ಧರ್ಮದ ಆಚರಣೆಯನ್ನು ಸರಳೀಕರಣಗೊಳಿಸಿ, ಎಲ್ಲರಿಗೂ ಇಷ್ಟಲಿಂಗದ ಮೂಲಕ ಭಗವಂತನ ಆರಾಧನೆಗೆ ಅನುವು ಮಾಡಿಕೊಟ್ಟರು. ಅವರನ್ನು ಶಾಂತಚಿತ್ತವಾಗಿ ಕುಳಿತಿರುವ, ವಚನಗಳನ್ನು ಓಲೆಗಳಲ್ಲಿ ಬರೆಯುತ್ತಿರುವ, ಸಾಧು–ಸಂತರ ಭಂಗಿಯಲ್ಲಿ ಕುಳಿತಿರುವ ಬಸವಣ್ಣನವರ ಪ್ರತಿಮೆಗಳಿಗೆ ಹೆಚ್ಚು ಆದ್ಯತೆ ನೀಡಿದರೆ ಚೆನ್ನ ಎಂದು ತಮ್ಮ ಅಭಿಪ್ರಾಯ ಮಂಡಿಸಿದರು.

ಪ್ರಸ್ತುತ ಶ್ರಾವಣ ಮಾಸದ ಪ್ರವಚನಕ್ಕೆ ಆಯ್ಕೆ ಮಾಡಿಕೊಂಡಿರುವ ಕೃತಿ 'ಶಿವತತ್ವ ಚಿಂತಾಮಣಿ' ಸೂಕ್ತವಾಗಿದೆ. ಬಹುಶಃ ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಕೋನದಲ್ಲಿ ಅವಲೋಕನ ಮಾಡಿದಾಗ ಸಾಂಸ್ಕೃತಿಕ ಇಲ್ಲವೇ ಸಾಮಾಜಿಕವಾಗಿ ಗ್ರಹಿಸಿದಾಗ ನಮಗೆ ಲಕ್ಕಣ್ಣ ದಂಡೇಶ ಜೀವಿತಾವಧಿ ಬಹಳ ವಿಶಿಷ್ಟವಾದುದು ಎಂದು ಚರಿತ್ರಾಕಾರರು ಅಭಿಪ್ರಾಯಪಟ್ಟಿದ್ದಾರೆ ಎಂದರು.

ಶೈವ ಧರ್ಮವನ್ನು ಅವನತಿಗೊಳಿಸುವ ಹುನ್ನಾರ ನಡೆಯುವ ಕಾಲಘಟ್ಟದಲ್ಲಿ ವಿಜಯನಗರದ ಆಸ್ಥಾನದ ದಂಡನಾಯಕನಾಗಿದ್ದ ಲಕ್ಕಣ್ಣ ದಂಡೇಶ ಸ್ವತಃ ಕವಿಯಾಗಿ ಶೈವ ಪರಂಪರೆಯನ್ನು ಉಳಿಸುವ ಕೆಲಸವನ್ನು ಮಾಡಿದ್ದಾನೆ ಎಂದ ಅವರು, ಇಂದಿನ ಯುವ ಸಮೂಹ, ಸಂತರು ಅನುಸರಿಸುವ ಶಾಂತ ಮನಸ್ಥಿತಿಯನ್ನು ಅಳವಡಿಸಿಕೊಳ್ಳಬೇಕು.

ಬಳಿಕ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ ಕೃತಿಯನ್ನು ಹಿರಿಯ ಸಾಹಿತಿ ಡಾ.ಕೆ ಅನಂತರಾಮು ಹಾಗೂ ವಿದ್ವಾನ್ ಕೃರಾಮಚಂದ್ರ ಅವರು ಪ್ರಮಚನ ಮತ್ತು ವಾಚನ ನಡೆಸಿಕೊಟ್ಟರು. ಈ ವೇಳೆ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಹುಲ್ಲಹಳ್ಳಿಯ ಕಾರ್ಯಸ್ವಾಮಿ ಮಠದ ಮಹೇಶ್ವರ ಸ್ವಾಮೀಜಿ, ನಿವೃತ್ತ ಪ್ರಾಧ್ಯಾಪಕ ಪ್ರೊ. ಮೊರಬದ ಮಲ್ಲಿಕಾರ್ಜುನ ಉಪಸ್ಥಿತರಿದ್ದರು.

ಸನ್ಮಾನ




ರೋಟರಿ ಮೈಸೂರು ಉತ್ತರ ವೈದ್ಯರ ದಿನಾಚರಣೆಯ ಅಂಗವಾಗಿ ರೋಟರಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಡಾ.ಪಿ.ಕುಮಾರ್, ಡಾ.ಗೋವಿಂದಶೆಟ್ಟಿ, ಡಾ.ಎನ್.ಆರ್. ಅನೂಪ್, ಡಾ.ನಾಭಾ, ಶ್ರೀನಿವಾಸ್, ಶ್ರೇಯಸ್, ಡಾ.ಶ್ರೇಯಸ್ ಆಳ್ವಾ ಅವರನ್ನು ಸನ್ಮಾನಿಸಲಾಯಿತು. ರೋಟರಿ ಉತ್ತರದ ಅಧ್ಯಕ್ಷರು ಹಾಗೂ ಇನ್ನಿತರ ರೋಟರಿ ಮುಖಂಡರು ಹಾಜರಿದ್ದರು.

ಅರ್ಜಿ ಆಹ್ವಾನ

ಮೈಸೂರು, ಜು.26– ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಮೈಸೂರು ಜಿಲ್ಲೆಯ ವೈದ್ಯಕೀಯ ಕಾಲೇಜಿಗೆ ನೀಡಲಾಗಿರುವ 35 ಶುಶ್ರೂಷಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಜು.29 ರಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 4.30 ಗಂಟೆಯೊಳಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ನಾಗಮ್ಮ ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು ಇಲ್ಲಿ ನೇರ ನೇಮಕಾತಿ ಪ್ರಕ್ರಿಯೆಯನ್ನು ನಡೆಸಲಾಗುವುದು. ಆಸಕ್ತ ಅಭ್ಯರ್ಥಿಗಳು ಸದರಿ ದಿನಾಂಕದಂದು ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ https://mysore.nic.in/ ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ಡಾ.ಕೆ.ಕೃಷ್ಣಮೂರ್ತಿ ಜನ್ಮ ಶತಾಬ್ಧಿ ಕಾರ್ಯಕ್ರಮ

'ಕೃಷ್ಣಲೋಕ' ಸಂಸ್ಕರಣ, 'ಕಾವ್ಯತತ್ವೋಲ್ಲೇಖ' ಗ್ರಂಥ ಬಿಡುಗಡೆ


ಮೈಸೂರಿನ ಬಲ್ಲಾಳ್ ವೃತ್ತದ ಬಳಿ ಇರುವ ನಿತ್ಯೋತ್ಸವ ಕನ್ವೆನ್ಷನ್ ಹಾಲ್‌ನಲ್ಲಿ ಡಾ.ಕೆ. ಕೃಷ್ಣಮೂರ್ತಿ ಶತಮಾನೋತ್ಸವ ಸಮಿತಿ ವತಿಯಿಂದ ಶನಿವಾರ ಆಯೋಜಿಸಿದ್ದ ವಿದ್ವಾನ್ ಡಾ.ಕೆ.ಕೃಷ್ಣಮೂರ್ತಿ ಜನ್ಮಶತಾಬ್ದಿ ಕಾರ್ಯಕ್ರಮದಲ್ಲಿ 'ಕೃಷ್ಣಲೋಕ' ಸಂಸ್ಕರಣ ಗ್ರಂಥ, 'ಕಾವ್ಯತತ್ವೋಲ್ಲೇಖ' ಗ್ರಂಥ ಬಿಡುಗಡೆಗೊಳಿಸಲಾಯಿತು.

ಮೈಸೂರು, ಜು.26(ಜಿಎ)–ಮೈಸೂರಿನ ಬಲ್ಲಾಳ್ ವೃತ್ತದ ಬಳಿ ಇರುವ ನಿತ್ಯೋತ್ಸವ ಕನ್ವೆನ್ಷನ್ ಹಾಲ್‌ನಲ್ಲಿ ಡಾ.ಕೆ. ಕೃಷ್ಣಮೂರ್ತಿ ಶತಮಾನೋತ್ಸವ ಸಮಿತಿ ವತಿಯಿಂದ ಶನಿವಾರ ಆಯೋಜಿಸಿದ್ದ ವಿದ್ವಾನ್ ಡಾ.ಕೆ.ಕೃಷ್ಣಮೂರ್ತಿ ಜನ್ಮಶತಾಬ್ದಿ ಕಾರ್ಯಕ್ರಮದಲ್ಲಿ 'ಕೃಷ್ಣಲೋಕ' ಸಂಸ್ಕರಣ ಗ್ರಂಥ, 'ಕಾವ್ಯತತ್ವೋಲ್ಲೇಖ' ಗ್ರಂಥ ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಕೃಷ್ಣಮೂರ್ತಿ ಅವರು ಕನ್ನಡ, ಸಂಸ್ಕೃತ ಹಾಗೂ ಇಂಗ್ಲಿಷ್ ಮೂರು ಭಾಷೆಗಳ ಮೇಲಿನ ಹಿಡಿತ ಹೊಂದಿದ್ದಲ್ಲದೇ ಭಾಷಾಂತರ, ವಿಮರ್ಶೆ ಕ್ಷೇತ್ರದಲ್ಲಿ ಅಗ್ರಮಾನ್ಯರಾಗಿದ್ದರು ಎಂದರು.

ಅವರು ಯಾವುದೇ ವಿಷಯದ ಬಗ್ಗೆಯೂ ಅತ್ಯಂತ ನಿಖರತೆಯಿಂದ, ವಿದ್ವತ್ಪೂರ್ಣವಾಗಿ ಸಾಹಿತ್ಯ ರಚಿಸುತ್ತಿದ್ದರು. ಕಾವ್ಯಮೀಮಾಂಸ ಕ್ಷೇತ್ರದಲ್ಲಿ ಅವಿರತ ಪರಿಶ್ರಮದಿಂದಾಗಿ ಆಳವಾದ ಅಧ್ಯಯನದಿಂದಾಗಿ, ಸಂಶೋಧನಾ ಮನೋವೃತ್ತಿಯಿಂದಾಗಿ, ಪ್ರಸಿದ್ಧರಾದವರು. ಅಭಿನವ ಆನಂದವರ್ಧನ, ವಿದ್ಯಾಸಾಗರ ಎಂದೆಲ್ಲ ಬಿರುದಾಂಕಿತರಾಗಿದ್ದ ಡಾ.ಕೆ.ಕೃಷ್ಣಮೂರ್ತಿ ಅವರು 80ಕ್ಕಿಂತ ಹೆಚ್ಚು ಹೆಬ್ಬೊತ್ತಿಗೆಗಳನ್ನು, 300ಕ್ಕಿಂತ ಹೆಚ್ಚು ವಿದ್ವಲ್ಲೇಖನಗಳನ್ನು ಕನ್ನಡ, ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಅತ್ಯಂತ ಪ್ರೌಢಿಮೆಯಿಂದ ರಚಿಸಿದ್ದಾರೆ. ಇಂತಹ ಸಾಹಿತ್ಯ ಕೃಷಿ ಕೃಷ್ಣಮೂರ್ತಿ ಅವರಿಂದ ಮಾತ್ರ ಸಾಧ್ಯವೆಂದು ತಿಳಿಸಿದರು.

ಶತಾವಧಾನಿ ಡಾ.ಆರ್.ಗಣೇಶ್ ಅವರು ಕಾವ್ಯತತ್ವೋಲ್ಲೇಖ ಗ್ರಂಥದ ಕುರಿತು ಮಾತನಾಡಿ, ಹಲವೆಡೆ ಚದುರಿ ಹೋಗಿದ್ದ 32 ಲೇಖನಗಳ ಸಂಗ್ರಹದಿಂದ ಈ ಪುಸ್ತಕ ರೂಪುಗೊಂಡಿದೆ ಎಂದರು.


ಕಾವ್ಯಮೀಮಾಂಸ ಕ್ಷೇತ್ರದಲ್ಲಿ ಅಧಿಕಾರವಾಣಿಯಾಗಿದ್ದರು. 32 ವರ್ಷಗಳ ಕಾಲ ಅವಿರತರಾಗಿ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರ ವೃತ್ತಿಯನ್ನು ನಿರ್ವಹಿಸಿದಲ್ಲದೇ, ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕರಾದದ್ದು ಒಂದು ವಿಶೇಷ ಸಂಗತಿ. ಇವರು 1994ರಲ್ಲಿ ನಡೆದ ಅಖಿಲ ಭಾರತ ಪ್ರಾಚ್ಯವಿದ್ಯಾ ಮಹಾ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅಲಂಕಾರ ಶಾಕದ ಬಗ್ಗೆ ಅಧಿಕಾರವಾಣಿಯಾಗಿದ್ದ ಕೃಷ್ಣಮೂರ್ತಿಗಳು ಸಂಸ್ಕೃತ ಕ್ಷೇತ್ರದ ಮಹಾ ವಿದ್ವಾಂಸರುಗಳಾದ ಡಾ.ಪಿ.ವಿ.ಕಾಣೆ, ಪ್ರೊ.ಎಂ.ಹಿರಿಯಣ್ಣ ಮತ್ತು ಡಾ.ವಿ.ರಾಘವನ್ ಅವರ ಸಾಲಿನಲ್ಲಿ ಪರಿಗಣಿಸಲ್ಪಡುವ ಅಪರೂಪದ ವ್ಯಕ್ತಿತ್ವ ಅವರದು ಎಂದು ವರ್ಣಿಸಿದರು.

ಕೃಷ್ಣಮೂರ್ತಿ ಅವರು ಕಾವ್ಯ ತತ್ವಗಳ ಜತೆಗೆ ಕಾವ್ಯ ಮೀಮಾಂಸೆಯ ಪರಿಭಾಷೆಯಲ್ಲಿ ವಿಮರ್ಶೆ ಮಾಡುತ್ತಿದ್ದರು. ಅವರ ಕಾರ್ಯಕ್ಷಮತೆಗೆ ಸಾಕ್ಷಿಯಾಗಿ ರಾಷ್ಟ್ರಪತಿ ಪ್ರಶಸ್ತಿ, ಉತ್ತರಪ್ರದೇಶ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಪ್ರಶಸ್ತಿ ಹೀಗೆ ಹತ್ತು ಹಲವಾರು ಪ್ರಶಸ್ತಿಗಳು ಸಂದಿವೆ ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಡಾ.ಕೆ. ಕೃಷ್ಣಮೂರ್ತಿ ಸಂಶೋಧನ ಪ್ರತಿಷ್ಠಾನ ಕಾರ್ಯದರ್ಶಿ ಡಾ.ಕೆ.ಲೀಲಾಪ್ರಕಾಶ್, ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಮಲ್ಲೇಪುರಂ ಜಿ.ವೆಂಕಟೇಶ್, ಸಾಹಿತಿ ಸಿ.ಪಿ.ಕೃಷ್ಣಕುಮಾರ್, ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜ್‌ರಾವ್, ಸಮಿತಿ ಸಂಚಾಲಕ ಸಿ.ಎನ್.ಕೇಶವಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಹಿರಿಯ ಪತ್ರಕರ್ತ ರಮೇಶ್ ಉತ್ತಪ್ಪನವರ 3 ಕೃತಿಗಳು ಲೋಕಾರ್ಪಣೆ

ಗನ್ ಹಿಡಿಯಬೇಕಾದವರು ಪೆನ್ ಹಿಡಿದಿದ್ದಾರೆ ; ಸುತ್ತೂರು ಶ್ರೀಗಳು



ಕರ್ನಾಟಕ ಸಂಗೀತ ವಿವಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಅವರ ಮೂರು ಕೃತಿಗಳ ಬಿಡುಗಡೆಗೊಳಿಸಲಾಯಿತು.

ಮೈಸೂರು, ಜು.26(ಜಿಎ)–ಮೈಸೂರು ಕಲ್ಚರಲ್ ಅಸೋಸಿಯೇಷನ್, ವಿಸ್ಮಯ ಪ್ರಕಾಶನ ಹಾಗೂ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ವತಿಯಿಂದ ಸಂಗೀತ ವಿವಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಅವರ ಮೂರು ಕೃತಿಗಳ ಬಿಡುಗಡೆಗೊಳಿಸಲಾಯಿತು.

ಕರ್ನಾಟಕ ಪೊಲೀಸ್ ಅಕಾಡೆಮಿ ಸಹಾಯಕ ನಿರ್ದೇಶಕ ಸಂದೇಶ್ ಕುಮಾರ್ 'ಮೈಸೂರು ವೃತ್ತಗಳ ವೃತ್ತಾಂತ', ಮಹಾವೀರ ಚಕ್ರ ಪುರಸ್ಕೃತ ವೀರ ಸೇನಾನಿ ಲೆಫ್ಟಿನೆಂಟ್ ಕರ್ನಲ್ ಪಿ.ಎಸ್. ಗಣಪತಿ ಅವರು 'ಸಿಂಧೂರ', ಶಾಸಕ ಟಿ.ಎಸ್. ಶ್ರೀವತ್ಸ ಅವರು 'ಮೈಸೂರಿನ ಗಲ್ಲಿ ಕಥೆ' ಪುಸ್ತಕವನ್ನು ಲೋಕಾರ್ಪಣೆಗೊಳಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಮೂರು ಕೃತಿಗಳ ವಿಷಯ ಆಯ್ಕೆ ವಿಭಿನ್ನವಾಗಿದೆ. ಗಲ್ಲಿ, ರಸ್ತೆಗಳ ಮಹತ್ವ ಕುರಿತು ಬರೆಯುವುದು ಉತ್ತಮ ಪ್ರಯೋಗವಾಗಿದೆ. ಸೇನಾನಿಯಾಗುವ ಆಕಾಂಕ್ಷೆ ಹೊಂದಿದ್ದ ರಮೇಶ್ ಉತ್ತಪ್ಪ ಸಾಹಿತ್ಯ ರಚನೆ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಗನ್ ಹಿಡಿಯಬೇಕಾದವರು ಪೆನ್ನು ಹಿಡಿದಿದ್ದಾರೆ ಎಂದರು.

ಸಿಂಧೂರ ಪುಸ್ತಕದಲ್ಲಿರುವ ವೀರಯೋಧರ ಯಶೋಗಾಥೆಗಳು ಯುವಜನತೆಗೆ ಪ್ರೇರಣೆಯಾಗಿವೆ. ಗ್ರಾಮ, ವೃತ್ತ, ರಸ್ತೆ, ಗಲ್ಲಿಗಳಿಗೆ ಒಂದೊಂದು ಇತಿಹಾಸವಿರುತ್ತದೆ. ಈ ವಿಶೇಷತೆಯನ್ನು ಗುರುತಿಸುವ ಕೆಲಸವಾಗಬೇಕಿದೆ. ಈ ನಿಟ್ಟಿನಲ್ಲಿ ಪುಸ್ತಕ ರಚನೆ ಮಹತ್ವದ್ದಾಗಿದೆ ಎಂದರು.

ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಸೇರಿದಂತೆ ಸಾಕಷ್ಟು ಮಹಾಪುರುಷರ ಜೀವನ ಚರಿತ್ರೆಯೇ ನಮ್ಮೆಲ್ಲರಿಗೂ ಆದರ್ಶವಾಗಿವೆ. ಇಂತಹ ಹಲವಾರು ಮಹಾನ್ ವ್ಯಕ್ತಿಗಳ ಹೆಸರನ್ನು ಕೆಲವೊಂದು ವೃತ್ತ, ರಸ್ತೆಗಳಿಗೆ ಹೆಸರಿಸಲಾಗಿದೆ. ಇವುಗಳ ನೆಪದಲ್ಲಾದರೂ ಆದರ್ಶ ಪುರುಷರನು ಸ್ಮರಿಸಿಕೊಳ್ಳಬೇಕಿದೆ. ಈ ರೀತಿ ಹೆಸರುಗಳನ್ನು ಕುರಿತು ಬರೆದ ಉತ್ತಪ್ಪ ಅವರ ಪುಸ್ತಕಗಳ 2ನೇ ಆವೃತ್ತಿಯೂ ಬರಲಿ ಎಂದು ಆಶಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಮೈಸೂರಿನ ವೃತ್ತ, ಗಲ್ಲಿಗಳ ಬಗ್ಗೆ ಬರೆದಿರುವುದು ನಮ್ಮ ನಾಡಿನ ಸಂಸ್ಕೃತಿ, ಆಚಾರ–ವಿಚಾರ, ಇತಿಹಾಸ ಉಳಿಸುವ ಕೆಲಸವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಗೀತ ವಿವಿ ಕುಲಪತಿ ನಾಗೇಶ್ ವಿ. ಬೆಟ್ಟಕೋಟೆ, ಡಾ. ಗಂಗೂಬಾಯಿ ಹಾನಗಲ್ ಸಂಗೀತ ಹಾಗೂ ಪ್ರದರ್ಶಕ ಕಲೆಗಳ ವಿವಿ ಕುಲಸಚಿವ ಡಾ.ಮಂಜುನಾಥ್, ಮೈಸೂರು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಎ.ಪಿ.ನಾಗೇಶ್, ವಿಸ್ಮಯ ಪ್ರಕಾಶನದ ಪ್ರಕಾಶ್ ಚಿಕ್ಕಪಾಳ್ಯ, ಕೃತಿಗಳ ಕರ್ತೃವೂ ಆದ ಪತ್ರಕರ್ತರ ಐತಿಚಂಡ ರಮೇಶ್ ಉತ್ತಪ್ಪ ಉಪಸ್ಥಿತರಿದ್ದರು.

ಸವಿನೆನಪು



ಶ್ರೀ ಮರಿಯಪ್ಪ
ನಿಧನ : 27.07.2009
ಅಪ್ಪ ನೀನಿಲ್ಲದೆ ಕಳೆದವು 16 ವರುಷಗಳು.
ಸದಾ ನಿಮ್ಮ ನೆನಪಿನಲ್ಲಿ,
ಕುಟುಂಬವರ್ಗ, ಗೋಕುಲಂ, ಮೈಸೂರು.

2ನೇ ವರ್ಷದ ಸವಿನೆನಪು



ಸೀನಾ
ನಿಧನ : 27-07-2023
ನೀವು ನಮ್ಮನಗಲಿ 2 ವರ್ಷ ಕಳೆದರೂ ಸದಾ ನಿಮ್ಮ ನೆನಪಿಸಿಕೊಳ್ಳುವ
ತಂದೆ : ಮಹಾದೇವು ಹಾಗೂ ಕುಟುಂಬವರ್ಗದವರು ಯರಗನಹಳ್ಳಿ.

ಮಹೇಂದ್ರ ಡೆವಲಪರ್ಸ್ (ರಿ)
MAHENDRA DEVELOPERS (R)
ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿದ ವಸತಿ ನಿವೇಶನಗಳು ಮತ್ತು ಮನೆಗಳು ಮಾರಾಟಕ್ಕೆ...
ನಾಗವಾಲ ಇಲವಾಲ ಹತ್ತಿರ
ವಾಜಮಂಗಲ
ದೇವಗಳ್ಳಿ ಆರ್.ಟಿ.ನಗರ ಹತ್ತಿರ
ಹುಣಸೂರು
ಮುಡಾ, ಹುಡಾ, ಡಿಟಿಸಿಪಿ, ಅನುಮೋದಿತ, ರೇರಾ ನೋಂದಾಯಿತ
+91 81233 87555 / +91 72593 48777
www.mahendradevelopers.in
FOLLOW US ON

WANTED
Office Cum Residence Around 1200 Sft (2BR) Preferably Ground Floor in and around Kuvempungr, Saraswatipuram, Vijayanagar 4th Block, Gokulam, JP-NAGAR for Rent/ Lease
Contact: 9972087409

SRI PROPERTIES REQUIRED
WANTED LAND FOR JOINT VENTURE (JV)
3 to 5 acres Yellow Zone land required for layout purpose within 10 kms from Ring Road.
Call : 94487 74372

ನಿವೇಶನ ಮಾರಾಟಕ್ಕಿದೆ
20X30 ಅಳತೆಯ ದಕ್ಷಿಣ ದಿಕ್ಕಿನ ನಿವೇಶನ ಸಂಖ್ಯೆ 35, ಹೊಸ ಆರ್.ಟಿ ನಗರದಲ್ಲಿ ಮಾರಾಟಕ್ಕಿದೆ, ನೈಪುಣ್ಯ ಸ್ಕೂಲಿನ ಹತ್ತಿರ. ಬೆಲೆ 28 ಲಕ್ಷ
Mob: 9448042879

PUBLIC NOTICE
Notice is hereby given to general public that my client Sri.K.K.RajeshBabu S/o.K.S.Krishna Shetty and Smt.Seema Rajesh W/o.Sri.K.K.Rajesh Babu, represents, that the Original Sale Deeds bearing Doc No.GUN-1-03327/07-08, dated 13/03/2008, Doc No.GUN-1-02309/07-08, dated 29/11/2007, Doc No.1547/07-08 dated 6/09/2007, Doc No.GUN-1-02232/07-08, dated 22/11/2007, Doc. No.GUN-1-02579/07-08 dated 26/12/2007, Doc No.GUN-1-02308/07-08, dated 29/11/2007, Doc No.GUN-1-02233/07-08, dated 22/11/2007, Doc No.GUN-1-02580/07-08, dated 26/12/2007, doc No.GUN-1-02307/07-08, dated 29/11/2007, Doc No.0156/08-09, dated 19/04/2008 and Doc No.GUN-1-02408/07-08, dated 10/12/2007,with respect to below mentioned properties has been lost. They have lodged a lost article report with Karnataka police vide Ref No.NO/JPS/DL/20/2025 dated 28/06/2025.

Any person or persons claiming any interest on the under mentioned property or any part thereof, is hereby called upon to file their claim/objections to me with documentary evidence or find the said original is hereby requested to return the same or inform it to the undersigned within **7 days.**

Further the general public is hereby warned that the said document may be misused and hence the general public is hereby notified not to transact on the basis of the said document. In spite of it, in case of any transaction is made on the basis of the said lost document they will be doing at their own risk and they shall not be having any rights and my client shall not be responsible for it whatsoever.

SCHEDULE

All that piece and parcel of agricultural land in Sy.No.524, Sy.No.547 Sy.no. 549, Sy.no. 544/1, Sy.No.548, Sy.No. 546, Sy.No.577, Sy.No.564, Sy.No.545, Sy.No. 544/2, Sy.No.552 all situated at Yadavanahalli village, Begur Hobli, Gundlupete taluk, Chamarajanagara District.

B.S. Sowmya, ADVOCATE
No.1461, 2nd Floor, South End, "A" Road, Block, East End Jayanagar, Bangalore-560069 Ph No: 9901934801
Bangalore 25/07/2025

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

1ನೇ ವರ್ಷದ ಸವಿನೆನಪು



ಕೆ.ಪಿ. ನಾಗೇಂದ್ರಸ್ವಾಮಿ
ಜನನ: 04.08.1981 – ಮರಣ: 27.07.2024
ಸದಾ ನಿನ್ನ ನೆನಪಿನಲ್ಲಿರುವ
ದುಃಖತಪ್ತರು: ತಾಯಿ, ತಂಗಿ, ಪತ್ನಿ, ಮಕ್ಕಳು, ಬಂಧು ಮಿತ್ರರು ಮತ್ತು ಸ್ನೇಹಿತರು
ಕಿಲಗೆರೆ ಗ್ರಾಮ, ಗುಂಡ್ಲುಪೇಟೆ

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

WE ARE HIRING
JOIN OUR SITE SELLING & LAND DEVELOPMENT TEAM AND BE PART OF AN INNOVATIVE COMPANY THAT VALUES CREATIVITY
WE ARE LOOKING FOR :
- Senior Marketing Manager
- Marketing Executive
- Female Tele Callers
- Social Media Management
- Office Assistant
- Site Engineer
- Office Boys

SEND YOUR CV @: +91 74118 17999 APPLY NOW

ಮನೆ ಬಾಡಿಗೆಗೆ
ಎರಡು ಕೊಠಡಿ ಮನೆ (ಮೊದಲ ಮಹಡಿ) (ಪೂರ್ವ ಬಾಗಿಲು) ಬಾಡಿಗೆಗೆ ಲಭ್ಯವಿದೆ. ಸರಸ್ವತಿಪುರಂ ಕಾಮಾಕ್ಷಿ ಹಾಸ್ಪಿಟಲ್ ಎದುರು. ಸಂಪರ್ಕಿಸಿ
Mob: 8105575603


Hi! TAXI
ONLY ONE WAY TAXI CHARGE
MYSORE to BANGALORE City drop or Pick up
BANGALORE to MYSORE Airport drop or Pick up
MYSURU
9611177599

PREMIUM VILLA PLOTS
HUNSUR TOWN
RERA, HUDA, DC, Approved
20x30, 20x40, 30x40, 30x50
Site Price Rs. 850/- per sq.ft.,
Bank Loan 80%
Just 4.5 kms from bus stand
1.5 kms from prpsd Railway Station
Call : 99002 01234

ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ
ಉತ್ತರ–ಪೂರ್ವ ಕಾರ್ನರ್ ಕಮರ್ಷಿಯಲ್ ಸೈಟು ಮಾರಾಟಕ್ಕಿದೆ. ಸಪ್ತಮಾತೃಕ ಹಂತ–1, ಮಹಾವೀರ್‌ನಗರ, ಮೈಸೂರು
Mob: 9448601655

HOUSE FOR SALE
Newly Built house For Sale Near Alanahalli ring road junction, T.Narasipura Road, Mysore. East facing, 3BHK duplex, 30x40, With Car parking.
Mob: 9986971822

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಬೋಗೇಗೌಡರು (ಕಾರ್ಗಳ್ಳಮ್ಮನ ಗುಡ್ಡಪ್ಪನವರು)
ಇವರು ದಿ: 18.7.2025 ಶುಕ್ರವಾರದಂದು ದೈವಾಧೀನರಾಗಿದ್ದು ತತ್ಸಂಬಂಧ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: **28-7-2025 ಸೋಮವಾರ** ಮಧ್ಯಾಹ್ನ 12 ಗಂಟೆಗೆ ನಮ್ಮ ಸ್ವಗೃಹ ಮೈಸೂರು ತಾಲ್ಲೂಕಿನ ಸರ್ಕಾರಿ ಉತ್ತನಹಳ್ಳಿ ದಳಗೆಹುಂಡಿ ಗ್ರಾಮದಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ
ದುಃಖತಪ್ತರು: ಶ್ರೀಮತಿ ಕಮಲಮ್ಮ ಮತ್ತು ಮಕ್ಕಳು ಅಳಿಯ, ಮೊಮ್ಮಕ್ಕಳು ಹಾಗೂ ಲೇಟ್ ಶ್ರೀ, ಚಿಕ್ಕನಂಜುಂಡೇಗೌಡರ ಕುಟುಂಬ ವರ್ಗದವರು

FLAT FOR SALE
2 BHK
North Facing on Bogadi Road
76 lakhs
9686288166
Brokers Excuse

HOUSE FOR SALE
MUDA Allotted
20x30 HOUSE
Hebbal 2nd Stage, Near CITB Choultry, Mysore
Mob: 9535275836

SITES FOR SALE
1. 40x60 W/F 40 Ft road, MUDA allotted site near NPS Public School @ Vijayanagar 4th stage, 2nd Phase, Mysore.
2. 40x60 North West corner, Good Location site for sale @ Aishwaryanagar, Kuvempunagar, Mysore.

More details Contact:
Mob: 9845311775

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು ಜಯಪುರ ಹೋಬಳಿ, ಹಂಪಾಪುರ ಹೋಬಳಿ ಹಾಗೂ ಹುಲ್ಲಹಳ್ಳಿ ಹೋಬಳಿ ಹಾಗೂ ಗದ್ದಿಗೆ ಮುಖ್ಯ ರಸ್ತೆಯಲ್ಲಿ 9 ಗುಂಟೆ, 12 ಗುಂಟೆ, 18 ಗುಂಟೆ, 27 ಗುಂಟೆ, 36 ಗುಂಟೆ ಹಾಗೂ 1.4 ಗುಂಟೆ, ಜಮೀನು ಅತೀ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿದೆ. ಆಸಕ್ತಿ ಇರುವವರು ಸಂಪರ್ಕಿಸಿ:
Mob: 9945661696

ಹೊಸ ಮನೆ ಮಾರಾಟಕ್ಕಿದೆ
40x60, 3 BHK ಪೂರ್ವ ಮುಖಿ ಪಾರ್ಕ್ ಫೇಸ್ ಹತ್ತಿರ, 80 ಅಡಿ ರಸ್ತೆ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಮೈಸೂರು.
Mob: 9448601655

ಬೇಕಾಗಿದ್ದಾರೆ
ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡಲು ತುರ್ತಾಗಿ ಉತ್ಸಾಹಿ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ.
* ಕೋ-ಆರ್ಡಿನೇಟರ್ಸ್ – 500 ಹುದ್ದೆಗಳು
* ಟ್ರೇನರ್ಸ್ - 100 ಹುದ್ದೆಗಳು
* ಟೀಮ್ ಲೀಡರ್ಸ್ 50 ಹುದ್ದೆಗಳು
* ಟೆಲಿಕಾಲರ್ಸ್ 20 ಹುದ್ದೆಗಳು

ವಿದ್ಯಾರ್ಹತೆ: SSLC, PUC, Diploma, Any Degree
ಸಂಬಳ: 15,000 ರಿಂದ 35,000 ರವರೆಗೆ
9632082448, 9036961447

GRAND OPENING
U.P WOODEN HANDCARVED ಪೀಠೋಪಕರಣಗಳು ಮಾರಾಟ
Display- SOFA SET DINING SET, DOUBLE COT, DIWAN CUSHION, ROCKING CHAIR, TEAPOY, CORNER STAND
ಭಾನುವಾರ ತೆರೆದಿರುತ್ತದೆ
Iron Gift Items Also Available
20% ರವರೆಗೆ OFF
ಸ್ಥಳ: ರಾಜ್ಯ ಸರ್ಕಾರಿ ನೌಕರರ ಸಂಘದ ಕಟ್ಟಡ ವಾರ್ತಾ ಭವನದ ಹತ್ತಿರ, ಜೆ.ಕೆ.ಗ್ರೌಂಡ್ ಎದುರು, ದಾಸಪ್ಪ ವೃತ್ತದ ಹತ್ತಿರ, ಧನವಂತ್ರಿ ರಸ್ತೆ, ಮೈಸೂರು.
DOOR DELIVERY- 20KMS ಉಚಿತ!!ಉಚಿತ!!
DEBIT & CREDIT CARDS ACCEPTED
TIMINGS - 9AM TO 9PM

ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಶಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕೀ.ಮೀ
ಹೈಲ್ಯಾಂಡ್ ಪ್ರಾಪರ್ಟೀಸ್
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು
95133 01854
88840 71010
MUDA LIMITS
ಕೇವಲ ₹749/ ಪ್ರತಿ ಚದರ ಅಡಿ
ಬುಕಿಂಗ್ ಪ್ರಾರಂಭವಾಗಿದೆ
30x40 | 30x50
40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಸುಲಭ 4 ಕಂತುಗಳ ಸೌಲಭ್ಯವಿದೆ

People's Education Trust (R.), P.E.S. College of Engineering, Mandya
(An Autonomous Institution Aided by Government of Karnataka, Affiliated to VTU, Belagavi)
Sri K.V. Shankaragowda Founder
Sri K. S. Vijay Anand President
Rank Band 201-300 in NIRF 2024

ADMISSIONS OPEN 2025-26
CET Code: E023, E058 COMEDK Code: E089
PGCET Code - MCA - C456, MBA - B238, M. Tech- T854
We Engineer the Future

About PESCE
- 60+ Years of Excellence in Education (ESTD. 1962)
- Autonomous since 2008
- NIRF Rank Band 201-300 in 2024
- Qualified and Experienced Faculty
- Excellent Placement record including International Placements
- 18 Cr+ TEQIP Funding from World Bank
- 4 Cr+ Sponsored Research Fund received
- 2000+ publications from Faculty and Students
- MSME approved Business Incubator
- State Govt. Funded New Age Incubation Network (NAIN)
- AICTE IDEA Lab
- Placement and Skill development trainings from 1st Semester onwards
- Indoor and Outdoor Sports Complex
- 30000+ proud Alumni network across the World

BE Programs
Civil Engineering
Computer Science & Engineering
Computer Science & Engg. (AI & ML)
Computer Science & Engg. (Data Science)
Computer Science & Business Systems (Collaboration with TCS)
Electronics & Communication Engg.
Electronics & Communication Engg. (VLSI Design & Technology)
Electrical & Electronics Engineering
Information Science & Engineering
Mechanical Engineering
Robotics and Artificial Intelligence

PG Programs
M.Tech VLSI & ES
M.Tech Civil (CAD)
MCA
MBA

Research Programs
Engineering
Management
Science

PES NEXT Incubation Centre
200+ Companies visit the campus
610 Job offers in 2024
456 Students Placed in 2024

BUS FACILITIES ARE AVAILABLE FROM PRIME LOCATIONS IN MYSORE CITY
coursera for campus
Scan QR for More Details
944 828 2588 | 08232-220043 / 238042 admissions@pesce.ac.in
https://www.pesce.ac.in/ /pesce1962 /pesmandya
K V Shankaragowda Road, Mandya, Karnataka- 571401

WANTED LAND FOR PURCHASE
A Small Agricultural Land with 20 Coconut Trees Near Mysore City. Budget 40 Lakhs
Also REQUIRED 4 ACRES of Plain Land Approximately 50KM of Mysore City. Budget 45 Lakhs
7019361933

The Best WATER PROOF Plywood
₹66/- PER SQ.FT.
15 YEARS WARRANTY
Teem BOND PLATINUM
Neem AKSHAYAGOLD
9148991267 | 9901291267

Step beyond your expectations !! at Our Grand Venue
RAJENDRA KALAMANDHIRA
* Wedding / convention hall with special rates
* 2 Banquet halls to accommodate 200
* 45 Air conditioned rooms with discount
* WEDDING
* ENGAGEMENTS
* CONFERENCES
* TRADE FAIRS
* PRODUCT LAUNCHES
* SPECIAL OFFERS & DISCOUNTS

9845923388, 9845963388
Ramanuja Road, Mysuru
rajendrakalamandhira@rpsshotels.com
viceroyconforts@rpsshotels.com

ಹಸಿರು ನಮ್ಮ ಉಸಿರು

NOT GETTING YOUR STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

ರಾಜ್ಯ ಕೈಮಗ್ಗ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ
"ಹಾಥ್ ಕರ್ಘ ಉತ್ಸವ್"
ದೇಶದ ವಿವಿಧ ರಾಜ್ಯಗಳ ಅಪ್ಪಟ ರೇಷ್ಮೆ ಮತ್ತು ಹತ್ತಿ ಸೀರೆಗಳು ಹಾಗೂ ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ನೇರವಾಗಿ ಕೈಮಗ್ಗ ನೇಕಾರರಿಂದ
ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್
ಹೆಬ್ಬಾಳು ಕೈಗಾರಿಕಾ ಪ್ರದೇಶ, ವರ್ತುಲ ರಸ್ತೆ, ಮೈಸೂರು–570 016
23 ಜುಲೈ – 5 ಆಗಸ್ಟ್ 2025
ಬೆಳಗ್ಗೆ 10.00 ರಿಂದ ರಾತ್ರಿ 9.00
MY HANDLOOM PRIDE
ಪಾರ್ಕಿಂಗ್ ಹಾಗೂ ಪ್ರವೇಶ ಉಚಿತ
ಮೊ : 9844550845, 8197583261